TIGHT BINGING BOOK

UNIVERSAL
LIBRARY
OU_198613
UNIVERSAL
LIBRARY

ಕನ್ನಡ ಕವಿ ಕಾವ್ಯಮಾಲೆ—೪

# ಅಮರನಾಥ ಯಾತ್ರೆ

ಸೋಮನಾಥಾನಂದ

1957

ಪ್ರಕಾಶಕರು

ಕನ್ನಡ ಕವಿ ಕಾವ್ಯಮಾಲೆ

೧೪೦೬, ಕೃಷ್ಣಮೂರ್ತಿಪುರಂ, ಮೈಸೂರು.

ಈ ಮಾಲೆಯ ಸಂಪಾದಕರು

ತ. ಸು. ಶಾಮರಾಯ, ಎಂ. ಎ.,

Lecturer in Kannada
First Grade College, Mysore

ಎಚ್. ಎಂ. ಶಂಕರನಾರಾಯಣರಾವ್, ಎಂ. ಎ.

Head of the Department of Kannada,
Sharada Vilas College, Mysore.

ಮೊದಲ ಮುದ್ರಣ

ಬೆಲೆ: ೧ ರೂಪಾಯಿ

*All Rights reserved by the author*

ಪ್ರಕಾಶಕರು

ಎಚ್. ಎಂ. ಶಂಕರನಾರಾಯಣರಾವ್, ಎಂ. ಎ.

ಶಾರದಾವಿಲಾಸ ಕಾಲೇಜು, ಮೈಸೂರು.

ಮುದ್ರಕರು

ಹಿಂದೂಸ್ಥಾನ್ ಪ್ರೆಸ್, ಮೈಸೂರು

# ಅರಿಕೆ

'ಅಮರನಾಥ ಯಾತ್ರೆ' ಕನ್ನಡ ಕವಿ ಕಾವ್ಯಮಾಲೆಯ ನಾಲ್ಕನೆಯ ಗ್ರಂಥ. ಮೈಸೂರಿನ ರಾಮಕೃಷ್ಣ ಆಶ್ರಮದ ಶ್ರೀ ಸೋಮನಾಥಾನಂದರ ಈ ಗ್ರಂಥವನ್ನು ಕನ್ನಡಿಗರು ಬಹು ಆದರದಿಂದ ಸ್ವಾಗತಿಸುವರೆಂದು ನಂಬುತ್ತೇವೆ.

ಕನ್ನಡದಲ್ಲಿ ಪ್ರವಾಸ ಸಾಹಿತ್ಯ ವಿರಳ. ಆ ವಿರಳ ಸಾಹಿತ್ಯದಲ್ಲಿ ಈ ಗ್ರಂಥಕ್ಕೆ ಅಗ್ರತಾಂಬೂಲ ಸಲ್ಲುತ್ತದೆ. ಇದಕ್ಕೆ ಹಲವಾರು ಕಾರಣಗಳುಂಟು. ಓದಲು ಈ ಗ್ರಂಥವನ್ನು ಕೈಗೆ ತೆಗೆದುಕೊಂಡರೆ, ಮುಗಿಸುವವರೆಗೆ ಇದನ್ನು ಕೆಳಗಿಡಲು ಮನಸ್ಸಾಗುವುದಿಲ್ಲ. ಅಷ್ಟು ಸ್ವಾರಸ್ಯವಾಗಿದೆ ವಿಷಯ ನಿರೂಪಣೆಯ ರೀತಿ. ಲೇಖಕರ ಭಾಷೆ ಸರಳವೂ ಸುಲಭವೂ ಆಗಿರುವುದಲ್ಲದೆ ರಸವತ್ತಾಗಿರುವ ಕಾರಣ, ಅದು ಬಹು ಬೇಗ ವಾಚಕರ ಮನಸ್ಸನ್ನು ಸೂರೆಗೊಳ್ಳುತ್ತದೆ. ಲೇಖಕರು ಹಿಮಾಲಯದಲ್ಲಿರುವ ಅಮರನಾಥಯಾತ್ರೆಯನ್ನು ಕೈಕೊಂಡಾಗ ದಾರಿಯಲ್ಲಿ ತಾವು ಕಂಡ ಪ್ರೇಕ್ಷಣೀಯವಾದ ಸ್ಥಳಗಳನ್ನು ತಮ್ಮದೇ ಆದ ಶೈಲಿಯಲ್ಲಿ ಆತ್ಮೀಯವಾಗಿ ಬಣ್ಣಿಸಿದ್ದಾರೆ. ಪ್ರತಿಯೊಂದು ಸನ್ನಿವೇಶದಲ್ಲಿಯೂ ಭಾರತೀಯ ಸಂಸ್ಕೃತಿಯ ದೃಷ್ಟಿಯೇನೆಂಬುದನ್ನು ಕಂಡುಕೊಳ್ಳಲು ಯತ್ನಿಸಿದ್ದಾರೆ. ಲೇಖಕರು ಯಾವುದೇ ಒಂದು ಸ್ಥಳವನ್ನು ವರ್ಣಿಸಲಿ ಅದು ಹಿಂದುಗಳದಾಗಿರಬಹುದು, ಮಹಮ್ಮದೀಯರದಾಗಿರಬಹುದು, ಸಿಕ್ಕರದಾಗಿರಬಹುದು-ಇಲ್ಲವೆ ತಾವು ಸಂಧಿಸಿದ ಜನರ ಶೀಲ ಸ್ವಭಾವವನ್ನು ವರ್ಣಿಸಲಿ, ಅದರಲ್ಲಿ ಸರ್ವಧರ್ಮ ಸಮನ್ವಯದ ದೃಷ್ಟಿಯೂ ಸಹಾನುಭೂತಿಯ ದೃಷ್ಟಿಯೂ ಕಂಡುಬರುತ್ತದೆ.

ಮೇಲಾಗಿ ಈ ಸನ್ನಿವೇಶ ಸಂದರ್ಭಗಳಿಂದ ತತ್ತ್ವವನ್ನು ಮಥನ ಮಾಡುತ್ತಾರೆ. ಅವರ ದೈವಭಕ್ತಿ ಈ ಗ್ರಂಥದ ತುಂಬ ಮಲ್ಲಿಗೆಯ ಕಂಪಿನಂತೆ ಹರಡಿದೆ.

ಇಂಥ ಉತ್ತಮವಾದ ಗ್ರಂಥವನ್ನು ನಮ್ಮ ಮಾಲೆಯಲ್ಲಿ ಪ್ರಕಟಿಸಲು ಅನುಮತಿ ಕೊಟ್ಟಿದ್ದಕ್ಕಾಗಿ ಶ್ರೀ ಸೋಮನಾಥಾನಂದರಿಗೆ ಅತ್ಯಂತ ಕೃತಜ್ಞರಾಗಿದ್ದೇವೆ.

ಮೈಸೂರು
**ಶಾರದಾಮಂದಿರ**
25-6-51

**ಸಂಪಾದಕರು**

# ಅಮರನಾಥ ಯಾತ್ರೆ

ಪ್ರತಿಯೊಬ್ಬ ಹಿಂದೂವಿಗೂ ಹಿಮಾಲಯವೆಂಬ ಪದ ಕಿವಿಗೆ ಬಿದ್ದೊಡನೆಯೆ ಹಲವು ದಿವ್ಯಭಾವ ನಾಡಿಯನ್ನು ಮೀಟುವುವು. ಹಲವು ಆಲೋಚನಾ ತರಂಗಗಳು ಏಳುವುವು. ನಮ್ಮ ಸಂಸ್ಕೃತಿಗೆ ಹಿಮಾಲಯ ಒಂದು ಹಿನ್ನೆಲೆ. ಹಿಂದೆ ನಮ್ಮವರು ಹೇಗೆ ಬಾಳಿದರು, ಏನು ಆಲೋಚನೆ ಮಾಡಿದರು, ಏನು ಗೆದ್ದರು, ಏನು ಸೋತರು, ಇವೆಲ್ಲವನ್ನೂ ನೋಡಿದ ಮೂಕಸಾಕ್ಷಿ ಆ ಹಿಮಾಲಯ. ಹಿಂದೂ ದಕ್ಷಿಣದೇಶದ ಯಾವ ಮೂಲೆಯಲ್ಲಾದರೂ ಇರಲಿ ಪರಮ ಪವಿತ್ರ ಸ್ಥಳಗಳು ಇರುವುವು ಹಿಮಾಲಯದಲ್ಲಿ. ಇಲ್ಲಿಗೆ ಸಾವಿರಾರು ಮೈಲಿಗಳಿಂದ ಬರುವರು ಕಷ್ಟಪಟ್ಟು. ಕೇದಾರನಾಥಕ್ಕೆ, ಬದರೀನಾಥಕ್ಕೆ, ಕೈಲಾಸಕ್ಕೆ, ಅಮರನಾಥಕ್ಕೆ, ಹೋಗಿಬಂದು ಧನ್ಯನಾದೆವೆಂದು ಭಾವಿಸುವರು. ಧ್ಯಾನಮಗ್ನ ಶಿವನ ನೆನಪನ್ನು ತರುವುದು ಹಿಮಾಲಯ. ಜಗದ ಲೀಲೆ ಅದರಡಿ ಸಾಗಿಹೋಗುತ್ತಿದೆ. ಆ ಲೀಲೆಗೆ ಸಹಾಯವಾಗಿ ಜೀವನದಿಗಳನ್ನು ಕೊಡುತ್ತಿದೆ. ಸ್ಥಿತಪ್ರಜ್ಞನಂತೆ ಜಗದ ಜಂಜಡವನ್ನು ಮೀರಿ ನಿಂತಿದೆ ಇಲ್ಲಿಯ ಶಿಖರಗಳು.

ಭಕ್ತನಿಗೆ ಈ ಮಹಾಪರ್ವತಸ್ತೋಮ ಒಂದು ಯಾತ್ರೆ. ಬೇಕಾದಷ್ಟು ಕಷ್ಟನಷ್ಟಗಳನ್ನು ಸಹಿಸುವನು ತನಗೆ ಪರಮ ಪವಿತ್ರವಾದ ತೀರ್ಥಸ್ಥಳವನ್ನು ಸಂದರ್ಶಿಸುವುದಕ್ಕೆ.

ಸಾಹಸಪರನಿಗೆ ಹಿಮಾಲಯು ತನ್ನ ಶಕ್ತಿಸಾಮರ್ಥ್ಯ ವನ್ನು ಪರೀಕ್ಷಿಸುವುದಕ್ಕೆ ಒಂದು ಒರೆಗಲ್ಲು. ಯಾರೂ ಹೆಜ್ಜೆ ಇಡದ ಸ್ಥಳದಲ್ಲಿ ಹೆಜ್ಜೆ ಇಡಬಯಸುವನು. ಏರದ ಶಿಖರವನ್ನು ಏರಬಯಸುವನು. ಈ ಉದ್ಯಮ ಸಾಧನೆಗೆ ತನ್ನ ಸರ್ವಸ್ವ ವನ್ನೂ ತೆರಲು ಸಿದ್ಧನಾಗುವನು. ಹಿಂದಿನಿಂದಲೂ ಪಾಶ್ಚಾತ್ಯ ದೇಶಗಳಿಂದ ಎಷ್ಟು ಜನ ಪರ್ವತಾರೋಹಿಗಳು ಬಂದರು ಗೌರಿಶಂಕರ ಶಿಖರವನ್ನು ಏರುವುದಕ್ಕೆ! ಎಷ್ಟು ಜನ ಈ ಮಹಾಪರ್ವತಕ್ಕೆ ತಮ್ಮ ಪ್ರಾಣಗಳನ್ನು ಅರ್ಪಿಸಿದರು! ಆದರೂ ಹಾಗೆ ಮುಂದೆಯೂ ಅರ್ಪಿಸುವುದಕ್ಕೆ ಸಿದ್ಧರಾಗಿರುವರು.

ಭಾರತೀಯರು ಸಾಹಸಪರರಲ್ಲವೆಂದು ಟೀಕಿಸುವರು. ಹಿಮಾಲಯ ಇವರ ದೇಶದಲ್ಲಿ ಇದೆ. ಆದರೂ ಅಲ್ಲಿಯ ಶಿಖರ ವನ್ನು ಏರಲು ಆಸೆ ಇವರಲ್ಲಿಲ್ಲ. ಇದನ್ನು ಏರುವವರು ಯೂರೋಪ್ ಖಂಡಗಳಿಂದ ಬರಬೇಕಾಗಿದೆ ಎನ್ನುವರು. ಅವರ ದೃಷ್ಟಿಯಿಂದ ನೋಡಿದಾಗ ನನಗೂ ಹಾಗೆಯೇ ಅನ್ನಿಸುತ್ತಿತ್ತು. ಆದರೆ ಭಾರತೀಯರು ಕೂಡ ಸಾಹಸಪರರು. ಆದರೆ ಅವರ ಸಾಹಸ ಧಾರ್ಮಿಕವಾದುದು. ಭಗವಂತನಿಗೆ, ಸತ್ಯಕ್ಕೆ, ಧರ್ಮಕ್ಕೆ, ಸಾಹಸ ಪಟ್ಟು ತಮ್ಮ ಸರ್ವಸ್ವವನ್ನೂ ನೀಗಿಕೊಳ್ಳಬಲ್ಲರು. ಕೇವಲ ಸಾಹಸಕ್ಕೆ ಸಾಹಸ ಪಟ್ಟು ಪ್ರಾಣ ಕಳೆದುಕೊಳ್ಳಲು ಇಚ್ಛಿಸುವುದಿಲ್ಲ. ಎಷ್ಟು ಜನ ಪ್ರತಿ ವರ್ಷವೂ ಕೈಲಾಸ, ಮಾನಸ ಸರೋವರ, ಬದರೀನಾರಾಯಣ ಕೇದಾರನಾಥಕ್ಕೆ ಹೋಗುವರು.

ನಾನು ಜುಲೈ ತಿಂಗಳ ಕೊನೆಯಲ್ಲಿ ಸ್ವರ್ಗಾಶ್ರಮಕ್ಕೆ ಹೋಗಿದ್ದಾಗ ಐದು ದಕ್ಷಿಣ ದೇಶದ ವೃದ್ಧ ಹೆಂಗಸರ ತಂಡ

ಬದರೀ ಕೇದಾರನಾಥವನ್ನು ನೋಡಿಕೊಂಡು ಬಂದುದನ್ನು ಕಂಡೆ. ಕಾಲಿಗೆ ಮೆಟ್ಟಿಲ್ಲ. ಹೊದೆಯಲು ನಮ್ಮಂಥ ಶಾಖವಾದ ಅಂಗಿಗಳಿಲ್ಲ. ಮೈಸೂರು ಬೆಂಗಳೂರು ರಸ್ತೆಯಲ್ಲಿ ನಡೆಯ ಬೇಕಾದರೆ ಏನು ಉಪಕರಣಗಳು ಬೇಕೋ ಅಷ್ಟೆ ಅವರುಮಹಾ ತೀರ್ಥಯಾತ್ರೆಗೆ ಉಪಯೋಗಿಸಿದ್ದು. ಗೌರಿಶಂಕರದ (ಮೌಂಟ್ ಎವರೆಸ್ಟ್) ತುತ್ತ ತುದಿಯಲ್ಲಿಒಂದು ತೀರ್ಥ ಕ್ಷೇತ್ರವಿದೆ—ಎಂದು ಹಿಂದಿನ ನಮ್ಮ ಪುರಾಣಗಳು ಸಾರಿದ್ದರೆ ಬಹುಶಃ ಇಷ್ಟು ಹೊತ್ತಿಗೆ ಎಂದೊ ಹತ್ತಿ ಶಿವನನ್ನೊ ವಿಷ್ಣು ವನ್ನೊ ದೇವಿಯನ್ನೊ ಸ್ಥಾಪನೆ ಮಾಡಿಬಿಡುತ್ತಿದ್ದರು ಎನ್ನಿಸುವುದು. ಏನೋ ಯಾರಿಗೆ ಗೊತ್ತು ? ಈಗಿನ ಪರ್ವತಾ ರೋಹಿಗಳು ಕಷ್ಟಪಟ್ಟು ನಾವೇ ಅದನ್ನು ಮೊದಲು ಏರಿದ ವರು ಎಂದು ಅದರ ಶಿಖರಕ್ಕೆ ಏರಿದಾಗ ಆಗಲೇ ಅಲ್ಲಿ ದೇವರ ಸಂಕೇತವಾದ ಲಿಂಗವನ್ನೊ ತ್ರಿಶೂಲವನ್ನೊ ನೋಡಬಹುದು. ನಮ್ಮ ಹಿಂದುಗಳ ಮಹೋನ್ನತ ಭಾವನೆ ಈ ಗುಂಪಿಗೆ ಸೇರಿದ್ದು. ಹಲವು ಉಪನಿಷತ್ತುಗಳ ಋಷಿಗಳು ತಮ್ಮ ಕುಲ ಗೋತ್ರ ಹೆಸರುಗಳನ್ನು ತಿಳಿಸದೆ ಅನಾಮಧೇಯರಾಗಿದ್ದಾರೆ. ಆದರೆ ಗೌರಿಶಂಕರ ಶಿಖರಕ್ಕೆ ಹಾಗೆ ಆಗದಿರಲಿ ಎನ್ನುವುದೇ ನನ್ನ ಆಸೆ. ಹೀಗೆ ಏನಾದರೂ ಆದರೆ ಮುಂದಿನ ಪರ್ವತಾ ರೋಹಿಗಳ ಉತ್ಸಾಹವೆಷ್ಟು ಭಂಗವಾಗುವುದು.

ಹಿಂದಿನಿಂದಲೂ ಪರ್ವತಾರೋಹಿಗಳ ತಂಡ ಹಿಮಾಲ ಯದ ದುರ್ಗಮ ಶಿಖರಗಳನ್ನು ಏರಲು ಬರುತ್ತಿದ್ದಾಗ ಅವರಿಗೆ ಸಹಾಯ ಮಾಡುತ್ತಿದ್ದವರು ಭಾರತೀಯ ಕೂಲಿಗಳು. ಅವರು ಹೋಗುವುದಕ್ಕೆ ಮುಂಚೆ ಅವರ ಸಾಮಾನು ಹೊರ

ಬೇಕು. ಹಿಂದೆ ಅವರಿಗೆ ಅಣಿ ಮಾಡುತ್ತಿರಬೇಕು. ಮೇಲೆ ಮೇಲೆ ಹತ್ತಿ ಹೋಗುವಾಗಲೂ ಭಾರತೀಯ ಸೇವಕರು ಅವರ ಹಿಂದೆ ಹಿಂದೆ ಇರುತ್ತಿದ್ದರು. ಭಾರತೀಯ ತನ್ನ ಬಾಳನ್ನು ವೃಥಾ ಸಾಹಸಕ್ಕೆ ಅರ್ಪಿಸಲಾರ ಎನ್ನುವುದು ಸ್ವಲ್ಪಮಟ್ಟಿಗೆ ಸತ್ಯವಿರಬಹುದು. ಆದರೆ ಹಿಂದೆ ಹೇಳಿದಂತೆ ಸತ್ಯ ಧರ್ಮಗಳಿಗೆ ಸಾಹಸ ಬೇಕಾದರೆ ಅದನ್ನು ಮಾಡಲು ಸಿದ್ಧನಾಗುವನು.

ಹಿಮಾಲಯುವನ್ನು ನೋಡಬೇಕೆಂಬ ಆಸೆ ಬಾಲ್ಯ ದಿಂದಲೂ ಬೆಳೆಯುತ್ತಿತ್ತು. ಕೆಲವು ಕಾಲಾನಂತರ ಕಾಶ್ಮೀರದ ಪ್ರಕೃತಿ ವರ್ಣನೆಗಳನ್ನು ಪುಸ್ತಕದಲ್ಲಿ ಓದಿದ ಮೇಲೆ ಅದನ್ನು ಒಂದಲ್ಲಾ ಒಂದು ಸಾರಿಯಾದರೂ ನೋಡಬೇಕೆಂಬ ಆಸೆ ಬೇರೂರಿತು. ಇವೆರಡನ್ನೂ ಒಂದೇ ವೇಳೆ ಪೂರೈಸುವುದಕ್ಕೆ ಸಮಯ ಕಾಯುತ್ತಿದ್ದೆ. ಅದು ಬಂದು ಒದಗಿದುದು ಅಮರನಾಥಯಾತ್ರೆಯಲ್ಲಿ. ಅಮರನಾಥ ಹಿಮಾಲಯ ಪರ್ವತ ಸ್ತೋಮದಲ್ಲಿದೆ. ಅಲ್ಲಿಗೆ ಕಾಶ್ಮೀರದ ಮೂಲಕ ದಾರಿ. ಗುರಿ ಅಮರನಾಥ, ದಾರಿ ಕಾಶ್ಮೀರವಾಯಿತು. ಗುರಿ ಸತ್ಯ ಅದಕ್ಕೆ ದಾರಿ ಸೌಂದರ್ಯದ ಮೂಲಕ ಎನ್ನುವಂತೆ. ಕೊನೆಗೆ ಗುರಿ ಯನ್ನು ಸೇರಿ ಆದ ಮೇಲೆ ಅದೇ ಸತ್ಯ ದಾರಿಯಲ್ಲಿರುವ ಸೌಂದರ್ಯದಲ್ಲಿ ಹಾಸು ಹೊಕ್ಕಾಗಿರುವುದು ಕಾಣುವುದು.

ನಾನು ಹಿಮಾಲಯ ಯಾತ್ರೆಗಳಲ್ಲಿ ಅಮರನಾಥವನ್ನು ಆರಿಸಿಕೊಳ್ಳುವುದಕ್ಕೆ ಹಲವು ಕಾರಣಗಳಿದ್ದುವು. ಮೊದಲು ನನ್ನ ಜೀವನಕ್ಕೆ ಅತಿ ನಿಕಟವಾಗಿರುವುದು, ಸ್ವಾಮಿ ವಿವೇಕಾ ನಂದರು ಅದನ್ನು ಸಂದರ್ಶಿಸಿದ್ದು. ಅವರು ಕಾಲಿಟ್ಟ ಸ್ಥಳ,

ಅವರು ಪೂಜಿಸಿದ ದೇವರು, ಅವರು ಮಿಂದ ತೀರ್ಥವನ್ನು ನೋಡಲು ಬಯಸಿದೆನು. ಎರಡನೆಯ ಕಾರಣ, ಇದಕ್ಕೆ ಕಾಲು ನಡಿಗೆಯಲ್ಲಿ ಬಹುದೂರ ಹೋಗಬೇಕಾಗಿರಲಿಲ್ಲ. ಕೇವಲ ಮೂವತ್ತು ಮೈಲಿ ಮಾತ್ರ. ಆದರೂ ಕಡಿದು. ಆ ಮೂವತ್ತು ಮೈಲಿಯಲ್ಲಿ ಹಿಮಾಲಯದಲ್ಲಿ ಸಿಕ್ಕುವ ಪ್ರಕೃತಿ ವೈವಿಧ್ಯವೆಲ್ಲ ದೊರಕುವುದು. ದಟ್ಟವಾದ ಕಾಡುಗಳು ಬುಡದಡಿಯಲ್ಲಿ. ಏರುತ್ತಾ ಏರುತ್ತಾ ಗಿಡ ಕುರುಚಲಾಗುವುದು. ಉಷ್ಣವಲಯದಿಂದ ಶೀತವಲಯದ ತುತ್ತ ತುದಿಗೆ ಪ್ರಯಾಣ ಮಾಡಿದಂತೆ. ರಮ್ಯ ಕಾಶ್ಮೀರದಲ್ಲಿ ಪ್ರಯಾಣ ಮಾಡಿ, ದಾರಿ ಇಕ್ಕೆಲದಲ್ಲಿರುವ ಸೌಂದರ್ಯನಿಧಿಯನ್ನು ನೋಡಿ, ಶಿವನಡಿಗೆ ನಿಧಾನವಾಗಿ ನಡೆದು ಹೋಗೋಣವೆಂದು ತೀರ್ಥಯಾತ್ರೆಗೆ ನಿರ್ಧರಿಸಿದೆ.

ಮುಕ್ಕಾಲುಪಾಲು ನಮ್ಮ ತೀರ್ಥಸ್ಥಳಗಳೆಲ್ಲಾ ಹಿಂದಿನ ರಮ್ಯ ನಿರ್ಜನ ವಾತಾವರಣದಲ್ಲಿರುವ, ನದಿಯ ತೀರ, ಪರ್ವತ ತುದಿ, ಕಾಡಿನ ಮಧ್ಯೆ, ಊರ ಹೊರಗೋ, ಸಮುದ್ರ ತೀರದಲ್ಲೋ, ಇರುತ್ತಿದ್ದುವು. ಜನ ಅಲ್ಲಿಗೆ ಹೋದಾಗಲಾದರೂ ಜಗದ ಜಂಜಡದಿಂದ ದೂರವಿರಲಿ, ಶಾಂತಿಯುಣಲಿ, ಭಕ್ತಿಯಿಂದ ಬಾಗಲಿ, ತಮ್ಮ ದುಃಖ ಕಷ್ಟಗಳನ್ನೆಲ್ಲಾ ಭಗವಂತನ ಅಡಿದಾವರೆಯಲ್ಲಿ ಚೆಲ್ಲಿ ಹಗುರ ಮಾಡಿಕೊಂಡು ಹೋಗಲಿ ಎಂದು ಹೀಗೆ ಮಾಡಿದ್ದರು. ಆದರೆ ಎಂದು ಜನ ಸ್ತೋಮ ಹೆಚ್ಚಾಯಿತೋ, ಜನರ ಸೌಕರ್ಯಕ್ಕೆಂದೋ, ಲಾಭಕ್ಕೆಂದೋ ಅಂಗಡಿ ಹೋಟಲು ಮುಂತಾದವು ಹುಟ್ಟಿ ಕ್ರಮೇಣ ಒಂದು ನಗರವಾಗಿ ಪರಿಣಮಿಸಿತು. ಆದರೆ ಕೆಲವು ಸ್ಥಳಗಳಲ್ಲಿ ಮಾತ್ರ

ಹಾಗೆ ನಗರ ಬೆಳೆಯಲು ಅವಕಾಶವಾಗಲಿಲ್ಲ. ಅವೇ ಹಿಮಾಲಯದ ಮಡಲಿನಲ್ಲಿರುವುವು. ವರುಷದಲ್ಲೆಲ್ಲ ಬೇಸಗೆಯ ಕೆಲವು ತಿಂಗಳಲ್ಲಿ ಮಾತ್ರ ಜನಸಂಚಾರಕ್ಕೆ ಬಾಗಿಲನ್ನು ತೆರೆದು ನಂತರ ದಾಟಲಸಾಧ್ಯವಾದ ಹಿಮರಾಶಿಯನ್ನು ಒಡ್ಡುವುವು. ನಿಜವಾದ ತೀರ್ಥಯಾತ್ರೆಯ ವಾತಾವರಣ ಅಂತಹ ಕೆಲವು ಸ್ಥಳಗಳಲ್ಲಿ ಹೆಚ್ಚು ಜಾಗ್ರತವಾಗಿದೆ.

ಕಾಶ್ಮೀರದ ನೆತ್ತಿಯ ಮೇಲಿರುವ ಅಮರನಾಥವೆಲ್ಲಿ ಮೈಸೂರೆಲ್ಲಿ! ಆದರೂ ಪ್ರತಿಯೊಬ್ಬ ಹಿಂದೂವನ್ನೂ ಕಣ್ಣಿಗೆ ಕಾಣಿಸದ ತಂತೊಂದು ಬಂಧಿಸಿರುವುದು. ಅದು ರಾಜಕೀಯವಲ್ಲ. ರಾಜಕೀಯದಿಂದ ಬರುವ ರಾಜಿ, ಸ್ನೇಹ, ಶಾಂತಿ, ತಾತ್ಕಾಲಿಕ. ಅದು ಆರ್ಥಿಕವಲ್ಲ, ಭಾಷೆಯಲ್ಲ, ಧರ್ಮ. ಇಷ್ಟು ದೊಡ್ಡ ಭರತಖಂಡವನ್ನು ಒಂದುಗೂಡಿಸುವುದು ಪವಿತ್ರನದಿಗಳು, ಪವಿತ್ರ ಸ್ಥಳಗಳು. ಅವು ಭರತಖಂಡದ ನಾಲ್ಕು ಮೂಲೆಯಲ್ಲಿಯೂ ಹರಡಿವೆ. ಗಂಗೆ ಯಮುನೆ ಸರಸ್ವತಿ ನರ್ಮದೆ ಸಿಂಧು ಕಾವೇರಿ ಎಂದು ಭರತಖಂಡದ ನದಿಯನ್ನೆಲ್ಲಾ ಹೇಳುವೆವು. ಹಾಗೆಯೇ ಪವಿತ್ರ ಸ್ಥಳಗಳನ್ನೂ ಪವಿತ್ರ ತೀರ್ಥಗಳನ್ನೂ ಹೇಳುವೆವು. ಉತ್ತರದ ಹಿಂದುವನ್ನು ದಕ್ಷಿಣದ ಕಡೆ ಎಳೆಯುವುದು ರಾಮೇಶ್ವರ, ಕಂಚಿ, ಕನ್ಯಾಕುಮಾರಿ, ಮಧುರೆ. ದಕ್ಷಿಣದಲ್ಲಿರುವವರನ್ನು ಉತ್ತರದ ಕಡೆ ಎಳೆಯುವುದು ಕಾಶಿ, ಪ್ರಯಾಗ, ಹರಿದ್ವಾರ. ಯಾವುದೋ ಒಂದು ತಂತು ನನ್ನ ಜೀವವನ್ನು ಉತ್ತರದ ಕಡೆ ಎಳೆಯಿತು. ಜುಲೈ ೨೪ನೆಯ ಪೂರ್ಣಿಮಿದಿನ ಅಮರನಾಥ ದರ್ಶನಕ್ಕೆ ಪವಿತ್ರ ದಿನವೆಂದು ಹೇಳಿದರು. ಅಂತೂ ಪ್ರತಿದಿನವೂ ಪವಿತ್ರವಾಗಿರುವಾಗ

ಪೂರ್ಣಿಮೆಯೇ ಏತಕ್ಕೆ ಪವಿತ್ರವಾಗಬೇಕೆಂದು ಆಲೋಚಿಸುತ್ತಿದ್ದೆ. ಧವಳ ಹಿಮಾಲಯವು, ಧವಳ ಹುಣ್ಣಿಮೆಯ ಚಂದ್ರನ ಕಿರಣಗಳ ಕಾಂತಿಯಲ್ಲಿ ಮಿಂದುದನ್ನು ನೋಡಿದಾಗ ಹೆಚ್ಚು ಭವ್ಯವಾಗಿ ಕಾಣುವುದೆಂದೂ, ಅದು ಎಲ್ಲಾ ದಿನಗಳಿಗಿಂತ ಪವಿತ್ರತರ ದಿನವಿರಬಹುದೇನೋ ಎಂದು ಭಾವಿಸಿದೆ.

ಮೈಸೂರನ್ನು ಜುಲೈ ೫ನೆಯ ತಾರೀಖು ಬಿಟ್ಟೆ. ಅಮರನಾಥಕ್ಕೆ ಹೋಗಬೇಕಾದರೆ ಮೈಸೂರಿನಿಂದ ಡೆಲ್ಲಿಗೆ ಪ್ರಯಾಣ ಮಾಡಿ, ಅಲ್ಲಿಂದ ಪಠಾನ ಕೋಟೆಗೆ ರೈಲಿನಲ್ಲಿ ಹೋಗಿ, ಸುಮಾರು ಮುನ್ನೂರು ಮೈಲಿ ಬಸ್ಸಿನಲ್ಲಿ ಶ್ರೀನಗರಕ್ಕೆ ಹೋಗಬೇಕು. ಪುನಃ ಅಲ್ಲಿಂದ ಸುಮಾರು ಅರವತ್ತು ಮೈಲಿ ದೂರದಲ್ಲಿರುವ ಪಹಿಲಗಾವ್ ಎಂಬ ಹಳ್ಳಿಗೆ ಹೋಗಿ, ಮೂವತ್ತು ಮೈಲಿ ಅಲ್ಲಿಂದ ಮೇಲೆ ಹತ್ತಿ ಹೋಗಬೇಕು. ಸ್ವಲ್ಪ ಮುಂಚೆಯೇ ಹೊರಟೆ. ಹೈದರಾಬಾದಿಗೆ ಆರನೇ ತಾರೀಖು ಸಾಯಂಕಾಲ ಬಂದೆ. ಅಲ್ಲಿಂದ ಔರಂಗಾಬಾದಿಗೆ ರೈಲಿನಲ್ಲಿ ಹೊರಟು ಏಳನೆಯ ತಾರೀಖು ಅಲ್ಲಿಗೆ ಮುಟ್ಟಿದೆ. ಅವರಂಗಜೇಬನ ಜೀವನಕ್ಕೆ ಸಂಬಂಧ ಪಟ್ಟ ಎರಡು ದೃಶ್ಯಗಳು ಅಲ್ಲಿವೆ. ಡೆಲ್ಲಿಯಲ್ಲಿ ಮೊದಲು ಚಕ್ರವರ್ತಿಯಾಗಿದ್ದು ನಂತರ ದಕ್ಷಿಣದಲ್ಲಿ ಮರಾಠರು ಮುಂತಾದವರ ಮೇಲೆ ಯುದ್ಧ ಮಾಡುವುದಕ್ಕಾಗಿ ಔರಂಗಾಬಾದಿನಲ್ಲಿ ಪಾಳೆಯ ಬಿಟ್ಟಿದ್ದನು. ಆತ ಇಲ್ಲಿ ಬಹಳಕಾಲ ಇದ್ದನೆಂದು ತೋರುವುದು. ಇಲ್ಲಿ ತನ್ನ ಮಗಳ ನೆನಪಿಗಾಗಿ ಟಾಜಮಹಲ್‌ನಂತಹ ಒಂದು ಗೋರಿಯನ್ನು ಕಟ್ಟಿಸಿರುವನು. ಅಲ್ಲಿಂದ ಕೆಲವು ಮೈಲಿಗಳ ದೂರದಲ್ಲಿ ಔರಂಗಜೇಬನ ಸಮಾಧಿಸ್ಥಳವಿದೆ. ಇವೆರಡನ್ನೂ ನೋಡಬಹು

ಸಿದೆ. ಔರಂಗಜೇಬನ ವಿಷಯವನ್ನು ಚರಿತ್ರೆಯಲ್ಲಿ ಬೇಕಾದಷ್ಟು ಓದಿರಬಹುದು. ಆದರೆ ಅವರ ಶೀಲ ನಮಗೆ ಗೊತ್ತಾಗುವುದು ಮತ್ತೊಬ್ಬರು ನಮಗೆ ಇದರ ವಿಷಯವಾಗಿ ಏನು ಹೇಳುವರೊ ಅದರಿಂದ ಅಲ್ಲ. ಅವರಿಂದಲೇ ಜೀವನದಲ್ಲಿ ಮಾಡಿರುವ ಕೆಲವು ಅವಶೇಷಗಳನ್ನು ನೋಡಿದಾಗ ಅವರ ಜೀವನದ ಸ್ವಲ್ಪ ಭಾಗ ಹೊಳೆಯುವುದು.

ಔರಂಗಾಬಾದಿನ ಸ್ಟೇಷನ್ನಿಗೆ ಬಂದೆ. ನನಗೆ ಯಾರೂ ಪರಿಚಿತರಿಲ್ಲ. ಎಲ್ಲಿ ಇಳಿದುಕೊಳ್ಳಬೇಕೆಂದು ಗೊತ್ತಿರಲಿಲ್ಲ. ಅಲ್ಲಿ ಇಲ್ಲಿ ಅನುಮಾನದಿಂದ ಸ್ಟೇಷನ್ನಿನಲ್ಲಿ ಅಲೆಯುತ್ತಿದ್ದಾಗ, ಒಬ್ಬರು ನನ್ನನ್ನು ನೋಡಿ ವಿಚಾರಿಸಿ ತಮ್ಮ ಗಾಡಿಯಲ್ಲೇ ಕರೆದುಕೊಂಡು ಹೋಗಿ ಒಂದು ಹೋಟಲಿನಲ್ಲಿ ಬಿಟ್ಟರು. ಔರಂಗಾಬಾದಿನ ಕಾಟನ್ ಮಿಲ್ಲಿನಲ್ಲಿ ಕೆಲಸದಲ್ಲಿದ್ದರು. ಪಾಲಘಾಟ್ ಕಡೆಯಿಂದ ಬಂದವರು. ನೋಡಿದ ಕೆಲವು ಹೊತ್ತಿನಲ್ಲೇ ಯಾವುದೋ ಒಂದು ಗೆಳೆತನ ಹುಟ್ಟಿತು. ಹಿಂದೆ ಎಂದೂ ಅವರನ್ನು ನೋಡಿರಲಿಲ್ಲ. ಪರಿಚಯ ಪತ್ರವಿಲ್ಲ. ಆದರೂ ಅವರು ಬಂದು ತಮ್ಮ ಮನೆಯಲ್ಲಿಳಿದುಕೊಳ್ಳಬಹು ದೆಂದು ಕೇಳಿಕೊಂಡರು. ಅಪರಿಚಿತರಿಂದ ತಕ್ಷಣವೇ ಇಷ್ಟು ಸೌಲಭ್ಯಗಳನ್ನು ಹೇಗೆ ಸ್ವೀಕರಿಸುವುದೆಂದು ಅನುಮಾನಿಸಿ ಕೊನೆಗೆ ಮೂರನೆಯ ದಿವಸ ಅವರ ಮನೆಗೆ ಊಟಕ್ಕೆ ಬರುವು ದಾಗಿ ಒಪ್ಪಿಕೊಂಡೆ. ನನಗೆ ಒಂದು ಆಶ್ಚರ್ಯ, ನಮ್ಮಿಬ್ಬರಿಗೂ ಒಂದು ಆತ್ಮೀಯತೆ ಇಷ್ಟು ಬೇಗ ಹೇಗೆ ಬೆಳೆಯಿತೆಂದು. ನಮ್ಮ ಜೀವನದಲ್ಲಿ ಇಂತಹ ಆಶ್ಚರ್ಯ ಪ್ರಸಂಗಗಳು ಎಷ್ಟೋ ನಡೆಯುತ್ತವೆ. ಕೆಲವರ ಸಮೀಪದಲ್ಲಿ ಎಷ್ಟೋ ಬಳಕೆ ಇರುತ್ತದೆ.

ಆದರೆ ಇದು ಕೇವಲ ಪರಿಚಯದಲ್ಲೇ ಕೊನೆಗಾಣುತ್ತದೆ. ಅದು ಸ್ನೇಹಕ್ಕೆ ತಿರುಗುವುದಿಲ್ಲ. ಮತ್ತೆ ಕೆಲವರನ್ನು ಜೀವನದಲ್ಲಿ ಒಮ್ಮೆ ನೋಡುತ್ತೇವೆ. ಅವರ ಹಿಂದು ಮುಂದು ಯಾವುದೂ ಗೊತ್ತಿರುವುದಿಲ್ಲ. ಆದರೂ ಒಲಿಯುತ್ತೇವೆ. ಇದನ್ನು ಸಹೃದಯತೆ ಎನ್ನಬೇಕೋ, ಪೂರ್ವಜನ್ಮ ಸಂಸ್ಕಾರವೆನ್ನಬೇಕೋ, ತಿಳಿಯದು. ಅಂತೂ ಅವರ ಪ್ರೀತಿ ಎದೆತಟ್ಟಿತು. "ದಯವಿಟ್ಟು ಸಂಕೋಚ ಪಟ್ಟುಕೊಳ್ಳಬೇಡಿ ಏನು ಬೇಕಾದರೂ ಕೇಳಿ. ಸ್ನೇಹ ದೀರ್ಘಕಾಲದ ಮೇಲೆ ನಿಂತರೆ ಮಾತ್ರ ಅದು ನಿಕಟವಾಗುವುದೆಂದು ಭಾವಿಸಬೇಡಿ ಕೇವಲ ಅತ್ಯಲ್ಪ ಕಾಲದಲ್ಲಿಯಾದರೂ ನಿಕಟವಾಗುವುದು" ಎಂದರು. ಅವರ ನಡತೆಯೇ ಅವರ ಮಾತನ್ನು ಉದಾಹರಿಸಿತು. ಮನೆಗೆ ಕರೆದುಕೊಂಡು ಹೋದರು. ಅವರ ಹೆಂಡತಿಯೊಬ್ಬರೇ ಅವರ ದೊಡ್ಡ ಬಂಗಲೆಯಲ್ಲಿದ್ದರು. ಮಕ್ಕಳಿಲ್ಲ ಆ ದಂಪತಿಗಳಿಗೆ. ಹೆಂಡತಿ ಎಂದೋ ಮರೆತು ಹೋದ ಅಣ್ಣ ಬಂದನೆಂದು ಸಡಗರದಿಂದ ಹಲವು ಬಗೆ ಅಡಿಗೆ ಮಾಡಿ ಬಡಿಸಿದರು. ಅವರ ಆತಿಥ್ಯವನ್ನು ಸ್ವೀಕರಿಸಿ ಹಿಂತಿರುಗುವಾಗ ಮನಸ್ಸಿನಲ್ಲಿ ಅವರನ್ನು ಅಗಲಬೇಕಲ್ಲ ಎಂದು ವ್ಯಥೆಯಾಯಿತು. ಕಾಳಿದಾಸನ ಶಾಕುಂತಲದಲ್ಲಿ ಬರುವ ಈ ಶ್ಲೋಕ ನೆನಪಿಗೆ ಬಂತು.

> ತಚ್ಚೇತಸಾ ಸ್ಮರತಿ ನೂನಮಬೋಧಪೂರ್ವಂ
> ಭಾವಸ್ಥಿರಾನಿ ಜನನಾಂತರಸೌಹೃದಾನಿ.
> ಕಾಳಿದಾಸ---ಶಾಕುಂತಲ V ೭೭.

---

[ಗೋಚರವಿಲ್ಲದೆ ನೆನಪಿಗೆಬಂದ ಪೂರ್ವ ಜನ್ಮಗಳ ಸಂಬಂಧ ವಿರಬಹುದು]

ಆ ದಿನದ ಸಂಜೆ ಬೀಬಿಕ ಮುಕಬಾರ ಎಂಬ ಔರಂಗಜೇಬನ ಮಗಳ ಸಮಾಧಿ ಮಂದಿರವನ್ನು ನೋಡಲು ಹೋದೆ. ಹೊಂಬಣ್ಣದ ಅಸ್ತಮಯ ರವಿಯ ಕಾಂತಿ ಸಮಾಧಿ ಮಂದಿರದ ಮೇಲೆ ಬಿದ್ದಿತ್ತು. ಔರಂಗಜೇಬ ತನ್ನ ಪ್ರೀತಿಪಾತ್ರಳಾದ ಮಗಳಿಗೆ ಕಟ್ಟಿದ್ದು ಅದು. ಔರಂಗಜೇಬನಲ್ಲಿದ್ದ ತಂದೆಯೊಲುಮೆ ಅಲ್ಲಿ ಇನ್ನೂ ಸುಳಿದಾಡುವಂತೆ ಇತ್ತು. ಔರಂಗಜೇಬನ ಜೀವನಕ್ಕೆ ಕೈಹಿಡಿದ ಹೆಂಡತಿಯಿಂದ ಅಷ್ಟು ಸುಖ ಬರಲಿಲ್ಲ. ಆದ ಮಕ್ಕಳಿಂದ ಸುಖವಿಲ್ಲ. ತನ್ನ ಕಣ್ಣೆದುರಿಗೆ ಅವರು ವಿರೋಧವಾಗಿ ಹೋಗುವುದನ್ನು ನೋಡಬೇಕಾಯಿತು. ತಾನು ಪಟ್ಟಕ್ಕೆ ಒಂದದ್ದೇ ಹಾಗೆ ಅನ್ಯಾಯ ಕೊಲೆ ಮೆಟ್ಟಿಲನ್ನು ಏರಿ, ಸಿಂಹಾಸನಾರೋಹಣ ಮಾಡಿದನು. ಅಂತಹವನಿಗೆ ಸುಖ ಶಾಂತಿ ಬರುವುದು ಹೇಗೆ? ಪ್ರಪಂಚದಲ್ಲಿ ನ್ಯಾಯವಾಗಿ ಸಂಪಾದಿಸಿದುದರಿಂದಲೇ ಸುಖ ಶಾಂತಿ ಬರುವುದು ಕಷ್ಟ. ಹೀಗಿರುವಾಗ ಹಲವರ ಕಣ್ಣೀರು, ಗೋಳಿನ ಜ್ವಾಲಾಮುಖಿಯ ಮೇಲೆ ಕಟ್ಟಿದ ಮನೆ, ಎಷ್ಟು ಕಾಲ ಸೌಖ್ಯವಾಗಿರಬಹುದು. ಒಂದಲ್ಲ ಒಂದು ದಿನ ಜ್ವಾಲಾಮುಖಿ ಹೊಗೆಯಾಡಿ ಏಳು ವುದು. ಶಿಲಾ ಪ್ರವಾಹವನ್ನು ಹರಿಸುವುದು. ಮೇಲಿರುವುದನ್ನು ಕಣ್ಣು ಮಿಟುಕಿಸುವುದರಲ್ಲಿ ನಿರ್ನಾಮ ಮಾಡುವುದು. ಅಂತಹ ಜೀವನದ ಸಂಜೆಯ ಸಮಯ ಔರಂಗಜೇಬನಿಗೆ. ಪ್ರಪಂಚದ ಸುಖ ಸ್ವಲ್ಪ ಸಿಕ್ಕಿದ್ದು ಅವನ ಮಗಳಿಂದ. ತಂದೆಯ ಮೇಲೆ ಅಷ್ಟು ಮಮತೆ ಅವಳಿಗೆ. ಮದುವೆಯನ್ನು ಕೂಡ ಮಾಡಿ ಕೊಳ್ಳದೆ ತಂದೆಯ ಹತ್ತಿರ ಇದ್ದಳು. ತಂದೆ ಎಲ್ಲಿಗೆ ಹೋದರೆ ಅಲ್ಲಿಗೆ ಹೋಗುತ್ತಿದ್ದಳು. ಔರಂಗಜೇಬನಿಗೂ ಅವಳ ಮೇಲೆ

ಪ್ರಾಣ. ಔರಂಗಜೇಬನ ಮೇಲೆ ಯಾವುದಾದರೂ ಒಂದು ವ್ಯಕ್ತಿಗೆ ಸ್ವಲ್ಪ ಅಧಿಕಾರವಿದ್ದರೆ ಅವಳೇ ಮಗಳು. ಔರಂಗ ಜೇಬನು ಎಲ್ಲರನ್ನೂ ನಿಕೃಷ್ಟ ದೃಷ್ಟಿಯಿಂದ ನೋಡಬಲ್ಲ. ಅಲ್ಲಗಳೆಯು ಬಲ್ಲ. ಆದರೆ ಮಗಳಿಗೆ ಸೋಲುತ್ತಿದ್ದ, ಮರುಗು ತ್ತಿದ್ದ. ಅವಳಿಗಾಗಿ ಏನನ್ನು ಬೇಕಾದರೂ ಮಾಡಲು ಸಿದ್ಧ ನಾಗಿದ್ದ. ಅವಳು ಕಾಲವಾದ ಮೇಲೆ ಅವಳ ಹೆಸರಿನಲ್ಲಿ ಒಂದು ಅತಿ ಸುಂದರವಾದ ಟಾಜಮಹಲನ್ನು ಹೋಲುವ ಸಮಾಧಿ ಮಂದಿರ ಮತ್ತು ಮಸೀತಿ ಕಟ್ಟಿಸಿರುವನು. ಸುತ್ತಲೂ ಹೂ ದೋಟ, ಕೃತಕ ನೀರ ಬುಗ್ಗೆಗಳನ್ನು ನೋಡಬಹುದು. ಔರಂಗಜೇಬನು ತನ್ನ ಆಹಾರ, ಬಟ್ಟೆ, ಬರೆ, ಎಲ್ಲದರಲ್ಲಿಯೂ ಅತಿ ಕಾರ್ಪಣ್ಯವನ್ನು ತೋರುತ್ತಿದ್ದ. ಆದರೆ ಮಗಳ ಸಮಾಧಿ ಮಂದಿರಕ್ಕೆ ಧಾರಾಳವಾಗಿ ಖರ್ಚು ಮಾಡಿದನು. ಪ್ರಪಂಚ ದಲ್ಲಿ ಇದು ಒಂದು ಅಪೂರ್ವ ಪ್ರೇಮ ಪ್ರದರ್ಶನ. ಷಹಜಹಾನ್ ತನ್ನ ಹೆಂಡತಿಗೆ ಟಾಜಮಹಲ್ ಕಟ್ಟಿಸಿದನು. ಅದರಂತೆಯೇ ಹಲವು ಜನ ತಮ್ಮ ಪ್ರೀತಿಯ ಹೆಂಡತಿಯರಿಗೆ ಬೇಕಾದಷ್ಟು ಮಾಡಿರಬಹುದು. ಆದರೆ ತಂದೆ ಎಲ್ಲರನ್ನೂ ಮರೆತು ಮಗಳಿ ಗಾಗಿ ಇಷ್ಟು ಪ್ರೀತಿಯನ್ನು ಪ್ರದರ್ಶಿಸುವುದು ಅಪರೂಪ.

ಇದನ್ನು ನೋಡಿದ ಮೇಲೆ ಪಂಚಖಿ ಎಂಬ ಮತ್ತೊಂದು ಸಮಾಧಿ ಮಂದಿರಕ್ಕೆ ಬಂದೆ. ಅಲ್ಲಿ ಹಲವು ಮಹಮ್ಮದೀಯ ಅರಸು ಮನೆತನದವರಿಗೆ ಗೋರಿಯನ್ನು ಕಟ್ಟಿರುವರು. ಬಹು ರಮ್ಯವಾದ ಸ್ಥಳ. ಒಂದುಕಡೆಯಲ್ಲಿ ಹಲವು ಶತಮಾನದಿಂದಲೂ ದೊಡ್ಡದೊಂದು ನೀರಿನ ಬುಗ್ಗೆ ಬರುತ್ತಿದೆ. ಅದನ್ನು ವಿಧ ವಿಧವಾಗಿ ಹಲವು ಕಡೆ ತೆಗೆದು

ಕೊಂಡು ಹೋಗಿರುವರು. ಸುತ್ತಲೂ ಹಲವು ಹೂಗಿಡಗಳು. ಅದನ್ನು ನೋಡಿದರೆ ಒಂದು ನಂದನವನದ ನೆನಪು ಬರುವುದು. ಇದನ್ನು ನೋಡಿದಾಗ ಈ ಮೊಗಲ ಅರಸರ ಪರಿವಾರ ಇರುವಾಗ ಮಾತ್ರ ಚೆನ್ನಾಗಿ ಬಾಳಿದವರಲ್ಲ. ಸತ್ತಮೇಲೂ ಅದೇ ಸೌಂದರ್ಯ ಗೋರಿಯ ಸುತ್ತಲೂ ತಾಂಡವಾಡುವಂತೆ ಮಾಡುತ್ತಿದ್ದರು. ಆ ಜೀವ ಸೂಕ್ಷ್ಮ ರೂಪಿನಲ್ಲಿ ಅನುಭವಿಸುವುದಕ್ಕೆ ಎಂತಲೋ ಏನೋ. ಎಷ್ಟು ವ್ಯತ್ಯಾಸ ಹಿಂದೂಗಳ ದೃಷ್ಟಿಗೂ ಮಹಮ್ಮದೀಯರ ದೃಷ್ಟಿಗೂ! ಎಂತಹ ಮಹಾಪುರುಷನಾಗಲಿ ಸತ್ತ ಮೇಲೆ ಮಣ್ಣುಪಾಲು ಮಾಡುವೆವು. ಇಲ್ಲವೇ ಅಗ್ನಿ ಪಾಲು ಮಾಡುವೆವು. ಕೆಲವು ಕಾಲದ ಮೇಲೆ ಎಲ್ಲ ಮರೆತೇ ಹೋಗುವುದು. ಪಂಚ ಭೂತಗಳಿಂದ ಬಂದ ದೇಹ ಪಂಚಭೂತಗಳಲ್ಲಿ ತಲ್ಲೀನವಾಗವುದು. ಅವ್ಯಕ್ತದೊಡಲಿನಿಂದ ಬಂದ ಜೀವ, ಕೆಲಕಾಲ ಜಗದ ಸಂತೆಯಲ್ಲಿ ಬೆರೆತು ಪುನಃ ಅಲ್ಲಿಗೆ ಹಾರಿಹೋಗುವುದು—ಎಂದು ಹಿಂದೂಗಳು ವೇದಾಂತ ಹೇಳಬಹುದು. ಆದರೆ ಮಹಮ್ಮದೀಯರು ಮಸೀತಿಗೆ ಕೊಡುವ ಪ್ರಧಾನ್ಯವನ್ನೇ ಗೋರಿಗೂ ಕೊಡುತ್ತಾರೆ. ಜೀವನದ ನಶ್ವರತೆ ಕಣ್ಣುಮುಂದೆ ಸುಳಿಯುವಂತೆ ಮಾಡುವುದು ಗೋರಿ. ಈ ಭಾವನೆ ದೇವರ ಧ್ಯಾನಕ್ಕೆ ಏಕೆ ದಾರಿಯಾಗಬಾರದು ಎನ್ನಬಹುದು ಅವರು. ನಾನು ಯಾವುದನ್ನೂ ಕೀಳು ಅಥವಾ ಮೇಲು ಎನ್ನಲಾರೆ. ಈ ಒಂದೆರಡು ಭಾವನೆ ನನ್ನ ಮನಸ್ಸಿಗೆ ಅಲ್ಲಿರುವಾಗ ಬಂದವು.

ಅಲ್ಲಿ ನೋಡಿದ ಮತ್ತೊಂದು ಮಹಮ್ಮದೀಯ ಆಳ್ವಿಕೆಯ ಅವಶೇಷ ಔರಂಗಜೇಬನ ಗೋರಿ. ಔರಂಗಾಬಾದಿನಿಂದ

ಸುಮಾರು ಎಂಟು ಹತ್ತು ಮೈಲಿ ದೂರದಲ್ಲಿದೆ. ಅವನನ್ನು ಹೂಳಿದ ಕಡೆ ನಾಲ್ಕು ಅಮೃತಶಿಲೆಯನ್ನು ನೆಟ್ಟಿದ್ದರು. ಅವನು ಬಾಳಿನಲ್ಲಿ ಎಷ್ಟು ಆಡಂಬರವಿಲ್ಲದೇ ಇದ್ದನೋ ಹಾಗೆಯೇ ಅವನ ಗೋರಿಯೂ ಕೂಡ ನಿರಾಡಂಬರವಾಗಿತ್ತು. ಔರಂಗ ಜೇಬನ ಹತ್ತಿರ ತಾನೆ ಟೋಪಿ ಹೊಲೆದು ಮಾರಿದ ಹಣ ನಾಲ್ಕು ರೂಪಾಯಿ ಎರಡು ಆಣೆ ಇತ್ತು. ಆ ದುಡ್ಡಿನಿಂದಲೆ ಕೊಂಡ ವಸ್ತ್ರವನ್ನು ತನ್ನ ಶವದ ಮೇಲೆ ಹೊದಿಸಬೇಕೆಂದೂ, ತಾನೇ ಖುರಾನನ್ನು ನಕಲು ಮಾಡಿ ಸಂಪಾದಿಸಿದ ಹಣ ೩೦೫ ರೂಪಾಯಿಯಲ್ಲಿ ತನ್ನ ಗೋರಿಗೆ ಸ್ವಲ್ಪ, ಉಳಿದುದನ್ನು ಫಕೀರರಿಗೆ ದಾನ ಮಾಡಬೇಕೆಂದೂ, ಮರಣಶಾಸನದಲ್ಲಿ ಬರೆ ದಿದ್ದನು. ಯಾರೂ ತನಗೆ ಸುಂದರ ಗೋರಿ ಕಟ್ಟಕೂಡದೆಂದೂ ಹಾಗೆ ಕಟ್ಟಿದರೆ ತನ್ನ ಶಾಪ ಅವನ ಮೇಲೆ ಬೀಳುವುದೆಂದೂ, ವ್ಯಕ್ತಪಡಿಸಿರುವನು. ಅದನ್ನು ಅವನ ಗೋರಿಯ ಹತ್ತಿರವೇ ನೋಡಬಹುದು. ಇಷ್ಟು ಜಿಪುಣ ಮಗಳಿಗೆ ಕೈ ಹಿಡಿತವಿಲ್ಲದೆ ಖರ್ಚು ಮಾಡಿರುವನು. ಪಾಪ ಮಗಳು ಕಾಲವಾದ ಮೇಲೆ ಅವನ ಜೀವನವನ್ನು ಪೋಷಿಸುತ್ತಿದ್ದ ಏಕಮಾತ್ರ ಪ್ರೇಮ ಚಿಲುಮೆ ಬತ್ತಿಹೋಗಿರಬೇಕು. ಜೀವನದಲ್ಲಿ ಸಂಪೂರ್ಣ ಜಿಗುಪ್ಸೆ ಹುಟ್ಟಿ ಕಣ್ಣು ಮುಚ್ಚಿಕೊಂಡಿರಬಹುದು ಎಂದು ಊಹಿಸಿದೆ. ನೆಂಟರೂ ಇಷ್ಟರೂ ತನ್ನ ಸ್ವಂತ ಮಕ್ಕಳು ಕೂಡ ವಿರೋಧವಾದರು. ತಂದೆಯನ್ನು ಸೆರೆಗೆ ಹಾಕಿ ಪಟ್ಟಕ್ಕೆ ಬಂದ ಔರಂಗಜೇಬ. ಅವನ ಮಕ್ಕಳೇ ಕೊನೆಗಾಲಕ್ಕೆ ಅವನ ವಿರೋಧಿಗಳಾದರು. "ಮಾಡಿದ್ದುಣ್ಣೊ ಮಹರಾಯ" ಎಂಬ ಗಾದೆಯಂತೆ."

ಹೈದರಾಬಾದಿನಲ್ಲಿ ಎರಡು ಸ್ಥಳ ಪ್ರತಿಯೊಬ್ಬ ಚರಿತ್ರಕಾರನಿಗೊ, ಹಿಂದೂವಿಗೂ ಪ್ರಮುಖವಾಗಿದೆ ಅವೇ-ಎಲ್ಲೋರ ಅಜಂತಗುಹೆಗಳು. ಹೈದರಾಬಾದಿನಿಂದ ಸುಮಾರು ಇಪ್ಪತ್ತೈದು ಮೈಲಿಗಳು ಹೋಗಬೇಕು ಎಲ್ಲೋರ ಗುಹೆಯನ್ನು ನೋಡಲು. ದೊಡ್ಡ ಬೆಟ್ಟವನ್ನ ಅಂತಸ್ತು ಅಂತಸ್ತುಗಳಾಗಿ ಕೊರೆದಿರುವರು. ಎಷ್ಟು ಶತಮಾನಗಳಾದರೂ ಅಚ್ಚಳಿಯದೆ ಉಳಿದಿವೆ. ಹಿಂದೆ ಬೌದ್ಧ ಭಿಕ್ಷುಗಳು ಧ್ಯಾನ, ಅಧ್ಯಯನ ಮುಂತಾದುವುಗಳಲ್ಲಿ ಅಲ್ಲಿ ಕಾಲ ಕಳೆಯುತ್ತಿದ್ದರು. ಅವು ಆಗಿನ ವಿಶ್ವ ವಿದ್ಯಾನಿಲಯಗಳೆಂದು ಕಾಣುತ್ತವೆ. ಮನಸ್ಸಿನ ಕೆಲಸಕ್ಕೆ ಪ್ರಶಾಂತವಾದ ಸ್ಥಳ. ಈ ಗುಹೆಗಳಲ್ಲಿ ಮೂರು ಬಗೆಗಳಿರುವುವು. ಮೊದಲು ನಮಗೆ ಕಾಣುವುದು ಬೌದ್ಧರದು—ಎರಡನೆಯದು ಹಿಂದೂಗಳದು—ಮೂರನೆಯದು ಜೈನರದು.

ಬೌದ್ಧರ ಗುಹೆಗಳಲ್ಲಿ ಒಳಗೆ ನೋಡಿದರೆ ಅವರು ಬಿಡಿಸಿರುವ ಕಂಬಗಳು, ಒಳಗೆ ಕುಳಿತಿರುವ ಬುದ್ಧನ ವಿಗ್ರಹ, ಎಲ್ಲಾ ತುಂಬಾ ಸರಳವಾಗಿದೆ. ಕೆತ್ತನೆ ತುಂಬಾ ಮಿತವಾಗಿದೆ. ಸರಳವಾದ ಗೋಡೆಕಂಬಗಳಲ್ಲದೆ ಅದರ ಮೇಲೆ ಮತ್ತಾವ ಚಿತ್ರವೂ ಕಾಣವುದಿಲ್ಲ. ಅವರ ಧರ್ಮದಂತೆ ಅವರ ಕಲೆ ಕೂಡ. ಬುದ್ಧ ತನ್ನ ಧಮಕ್ಕೆ ಸ್ವರ್ಗ ನರಕ ದೇವ ದೇವತೆಗಳು, ಇವುಗಳ ಆಧಾರ ಅಥವಾ ಊಹೆಯನ್ನು ತೆಗೆದುಕೊಳ್ಳಲಿಲ್ಲ. ನೀತಿ ಪ್ರಾಧಾನ್ಯವಾದ ಧರ್ಮ ಅದು. ಮುಕ್ತಿಗೆ ಅವನ ಅಷ್ಟಾಂಗ ಮಾರ್ಗ ಸಾಕಾಗಿತ್ತು. ಆದರೆ ಯಾವಾಗ ಹಿಂದೂ ಧರ್ಮಕ್ಕೆ ಸಂಬಂಧ ಪಟ್ಟ ದೇವಸ್ಥಾನಕ್ಕೆ ಬರುತ್ತೀರೋ ಅದೊಂದು ಚಿತ್ರವಿಚಿತ್ರ ವಸ್ತುಗಳ ಪ್ರದರ್ಶನ

ಶಾಲೆ. ಗೋಡೆಯಲ್ಲಿ ಯಾವ ಮೂಲೆಯನ್ನೂ ಹಾಗೆ ಬಿಟ್ಟಿಲ್ಲ. ಹಿಂದೂಗಳ ಕಲ್ಪನಾ ಪ್ರಪಂಚ ಅತಿ ಪ್ರಚಂಡವಾದುದು. ನಮ್ಮ ದೇವ ದೇವತೆಗಳ ಸಂಖ್ಯೆ ಮಾನವ ಜನಸಂಖ್ಯೆಯನ್ನು ಕೂಡ ಮೀರಿರುವುದು! ಹಾಗೆ ಒಂದಂಗುಲ ಸ್ಥಳವನ್ನೂ ಹಿಂದು ಬಿಡಲೊಲ್ಲ. ಅಲ್ಲಿ ಏನನ್ನಾದರೂ ಕೊರೆಯಲಿಚ್ಛಿಸು ವನು. ಅವನಿಗೆ ಖಾಲಿ ಜಾಗ "ಅಯ್ಯೋ ಇಷ್ಟು ಸ್ಥಳ ವ್ಯರ್ಥವಾಯಿತಲ್ಲ" ಎಂದು ಬೆಂಗುದಿಯನ್ನು ತರುವುದು. ದೇವರನ್ನು ನಿರಾಕಾರ ನಿರ್ಗುಣ ಎಂದು ಸಾರಿದ ಧರ್ಮ, ಇಷ್ಟೊಂದು ದೇವ ದೇವತೆಗಳು ಇಷ್ಟು ಹುಲುಸಾಗಿ ಬೆಳೆಯು ವುದಕ್ಕೆ ಯಾವ ಗೊಬ್ಬರವನ್ನು ಹಾಕಿತೊ! ಅವ್ಯಕ್ತ, ನಿರಂಜನ, ನಿರ್ಗುಣ, ವೆಂಬ ಗೊಬ್ಬರವನ್ನೇ ಹಾಕಿರಬೇಕು. ರೂಪ ಅರೂಪಕ್ಕೆ, ಗುಣ ನಿರ್ಗುಣದೆಡೆಗೆ, ಆಕಾರ ನಿರಾಕಾರದೆಡೆಗೆ ಹೋಗಬೇಕಾದರೆ ಇವೇ ಮೆಟ್ಟಲು. ಈ ಮೆಟ್ಟಲಿಲ್ಲದೇ ಇದ್ದರೆ ಆಕಾರದಿಂದ ನಿರಾಕಾರಕ್ಕೆ ಮನುಷ್ಯ ನೆಗೆಯಲಾರ. ಒಂದೇ ಒಂದು ದೇವರು ಈ ಆಕಾರವನ್ನೆಲ್ಲ ತಾಳಿರುವನು ಮತ್ತು ಇವನ್ನು ಮೀರಿರುವನು ಎಂದು ಸಾರುವುದು ಹಿಂದೂಧರ್ಮ.

ಜೈನಗುಹೆಗಳು ಹಿಂದೂಧರ್ಮದ ಗುಹೆಗಳ ಒಂದು ನಕಲು. ಹಿಂದೂಧರ್ಮದಿಂದ ಇಂದ್ರ ಇಂದ್ರಾಣಿ ಮುಂತಾದ ದೇವರನ್ನು ತಂದು ಅವರನ್ನು ಜೈನರನ್ನಾಗಿ ಮಾಡಿರುವರು. ಅಲ್ಲಿಯೂ ವಿಗ್ರಹಗಳ ದಾಂಧಲೆ.

ಇದಾದನಂತರ ಅಜಂತಾ ಗುಹೆಗಳ ಕಡೆಗೆ ಹೊರಟೆ. ಅದು ಇರುವುದೇ ಬೇರೆ ಕಡೆ. ನಾವು ಪುನಃ ಔರಂಗಾಬಾದಿಗೆ ಬರಬೇಕು. ಅಲ್ಲಿಂದ ಸುಮಾರು ಎಪ್ಪತ್ತು ಮೈಲಿ ದೂರ ಬೇರೆ

ಕಡೆಗೆ ಹೋಗಬೇಕು. ಅಲ್ಲಿ ಒಂದು ದೊಡ್ಡ ಕಣಿವೆಯ ಎರಡು ಕಡೆಯಲ್ಲಿಯೂ ಗುಹೆಗಳನ್ನು ಬಿಡಿಸಿರುವರು. ಇಲ್ಲಿ ಪ್ರಧಾನ್ಯ ಗುಹೆಗಳ ಒಳಗೆ ಇರುವ ಚಿತ್ರಗಳಿಗೆ. ಬುದ್ಧನ ಜೀವನಕ್ಕೆ ಸಂಬಂಧ ಪಟ್ಟ ಹಲವಾರು ಚಿತ್ರಗಳನ್ನು ಗೋಡೆಯ ಮೇಲೆಲ್ಲಾ ಬರೆದಿರುವರು. ಆಗಲೆ ಮುಕ್ಕಾಲು ಪಾಲು ಬಿದ್ದು ಹೋಗಿವೆ. ಕೆಲವು ಮಾತ್ರ ಉಳಿದುಕೊಂಡಿವೆ. ಆ ಉಳಿದುಕೊಂಡಿರುವ ಕೆಲವು ಅತಿ ಸುಂದರವಾಗಿವೆ. ಈ ಕಣಿವೆ ಒಂದು ಕುದುರೆ ಲಾಳದ ಆಕಾರದಲ್ಲಿದೆ. ಕೆಳಗೆ ಮಧ್ಯದಲ್ಲಿ ಒಂದು ನದಿ ಹರಿಯುತ್ತಿದೆ. ಸುತ್ತಲೂ ದಟ್ಟಕಾಡು. ಜನನಿವಾಸ ಹತ್ತಿರವಿಲ್ಲ. ಇಲ್ಲಿಂದ ನಾಲ್ಕೈದು ಮೈಲಿಗಳು ಹೋಗಬೇಕು ಊರು ಸಿಕ್ಕಬೇಕಾದರೆ.

ಇಲ್ಲಿಯೇ, ನನಗೆ ಹೊಸದಾಗಿ ಮದುವೆಯಾದ ದಂಪತಿಗಳ ಪರಿಚಯವಾಯಿತು. ನಾನು ಎಲ್ಲೋರಕ್ಕೆ ಹೋದಾಗ ಸಿಕ್ಕಿದರು. ಜೊತೆಯಲ್ಲೇ ಬಸ್ಸಿನಲ್ಲಿ ಬಂದರು. ಅಜಂತ ಗುಹೆಗಳನ್ನು ನೋಡುವಾಗಲೇ ಇವರ ಪರಿಚಯವಾಯಿತು. ಇಂಗ್ಲೀಷಿನಲ್ಲಿ Honey moon ಎನ್ನುವ ಒಂದು ಕಾಲ ಅವರಿಗೆ. ತರುಣ ಪ್ರೇಮದ ಪ್ರಥಮ ಅನುಭವ ಇಬ್ಬರಿಗೂ. ಒಬ್ಬರು ಮತ್ತೊಬ್ಬರೊಡನೆ ಎಷ್ಟು ಮಾತನಾಡಿದರೂ ಸಾಲದು. ಎಷ್ಟು ನೋಡಿದರೂ ಸಾಲದು. ನೊರೆಗೆರೆದು ಕುದಿಯುತ್ತಿರುವ ಈ ಪ್ರೇಮ ಆರಿದ ಮೇಲೆ ಎಷ್ಟು ಉಳಿಯುವುದೋ! ದಂಪತಿಗಳಿಬ್ಬರೂ ಮುಂದೆ ಹಾಗಿರಬೇಕು, ಅದು ಮಾಡೋಣ, ಇದು ಮಾಡೋಣವೆಂದು ಹಲವು ಕಲ್ಪನಾ

ನಸುಗಳನ್ನು ಕಟ್ಟುತ್ತಿದ್ದರು. ಪಾಪ ಮನುಷ್ಯನ ಸ್ವಭಾವ ನಸು ಕಟ್ಟುವುದು. ಇದರಲ್ಲಿ ಈಡೇರುವುದೆಷ್ಟೋ ಭಗವಂತ ಗೇ ಗೊತ್ತು. ನಮ್ಮ ಕಲ್ಪನೆಗೆ ನಿಲುಕದ ಹಲವಾರು ಅದ್ಭು ತಂಕದ ಪಿಶಾಚಿಗಳು ಒಂದು ಹೆದರಿಸುವಾಗ ಎಷ್ಟು ಸ್ವರ್ಣ ನಸುಗಳು ಪರಾರಿಯಾಗುವುವು? ಇವರಿಬ್ಬರೂ ನನ್ನೊಡನೆ ಬಂಬ ಸಲಿಗೆಯಿಂದ ಇದ್ದರು. ಅವರು ಏನು ಹಣ್ಣು ಹಂಪಲು ಳನ್ನು ಕೊಂಡರೂ ನನಗೆ ಕೊಡದೆ ತಿನ್ನುತ್ತಿರಲಿಲ್ಲ. ಈ ದಂಪತಿಗಳ ಜೀವನ ಮೃದು ಮಧುರವಾಗಿರಲೆಂದು ಮನದೊಳಗೆ ಹಾರೈಸಿದೆ. ಉತ್ಸಾಹದಿಂದ ನವ ವಧೂವರರ ಜೀವನರಥ ಹೊರಟಿರುವಾಗ ಶುಭವನ್ನು ಕೋರುವುದು ನಮ್ಮ ಕರ್ತವ್ಯ. ಅವರನ್ನು ಅಗಲುವಾಗ ದೇವರು ಇಬ್ಬರಿಗೂ ಒಳ್ಳೆಯ ಭವಿಷ್ಯ ವನ್ನು ದಯಪಾಲಿಸಲೆಂದು ದೆಹಲಿ ಕಡೆಗೆ ಹೊರಟೆ.

ದೆಹಲಿಯಲ್ಲಿ ಪ್ರಖ್ಯಾತವಾದ ಕುತುಬ್ ಮಿನಾರನ್ನು ನೋಡಲು ಹೊರಟೆ. ಅದನ್ನು ಕುತುಬ್ ದೀನನೇ ಕಟ್ಟಿದನೆಂದು ನಾವೆಲ್ಲ ಓದಿರುವೆವು. ಆದರೆ ಅಲ್ಲಿ ಹೋಗಿ ನೋಡಿದರೆ ಅದರ ಕೆಳಗೆ ಮೂರನೆ ಎರಡು ಭಾಗ ಹಿಂದೂಗಳ ಕಟ್ಟಡದಂತಿದೆ. ಕೊನೆಯ ಮೂರನೆ ಒಂದು ಭಾಗ ಮಹಮ್ಮದೀಯರ ಕೈವಾಡ ದಂತಿದೆ. ಅಲ್ಲಿ ಸ್ಥಳಪುರಾಣವನ್ನು ವಿಚಾರಿಸಲಾಗಿ ಪೃಥ್ವಿರಾಜ, ತನ್ನ ರಾಣಿ ಸಂಯುಕ್ತೆ ಪ್ರತಿ ದಿನವೂ ಯಮುನಾ ನದಿಯನ್ನು ನೋಡುವುದಕ್ಕಾಗಿ ಕಟ್ಟಿದ್ದು ಎನ್ನುತ್ತಾರೆ. ಇದೇ ಬಹುಶಃ ನಿಜವಾಗಿರಬಹುದು. ಕುತುಬ್ ದೀನ ತನ್ನ ಹೆಸರನ್ನು ಅಮರ ಮಾಡುವುದಕ್ಕೆ, ಆ ಪ್ರೇಮಸೌಧದ ಮೇಲೆ ತನ್ನ ಅಹಂಕಾರ

ಮೆರೆಸುವುದಕ್ಕಾಗಿ ಇನ್ನೂ ಸ್ವಲ್ಪ ಕಲ್ಲುಗಳನ್ನು ಇಟ್ಟು ಕಲಶ ಕಟ್ಟಿದನು. ಪೃಥ್ವೀರಾಜ ಸಂಯುಕ್ತೆಯರ ಪ್ರೇಮ ಚಿಹ್ನೆಯ ಮೇಲೆ, ಜಯವನ್ನು ಸಾರುವ ಮತ್ತೊಂದು ಅಹಂಕಾರ ಚಿಹ್ನೆ. ಕುತುಬ್ ಮಿನಾರಿನ ಸುತ್ತಲೂ ಕೆಲವು ಬಿದ್ದು ಹೋದ ಮಸೀದಿಗಳಿವೆ. ಅಲ್ಲಿರುವ ಕಂಬಗಳೆಲ್ಲಾ ಹಿಂದೂ ದೇವಸ್ಥಾನದಂತಿರುವುವು. ಆ ಕಂಬಗಳ ಮೇಲೆ ಕೊರೆದಿರುವ ವಿಗ್ರಹಗಳನ್ನು ಭಿನ್ನಮಾಡಿ, ಸ್ವಲ್ಪ ಬದಲಾಯಿಸಿ ಅದನ್ನು ಮಸೀದಿ ಮಾಡಿರುವನು. ಅವನೇನೋ ಹಿಂದೂ ದೇವರನ್ನು ನಾಶಮಾಡಿರುವೆನೆಂದು ತಿಳಿದುಕೊಂಡಿರಬಹುದು. ಹಿಂದೂ ದೇವರಿಗೆ ಒಂದು ಆಕಾರವಿಲ್ಲ. ಒಂದು ಆಕಾರದಿಂದ ಅವನನ್ನು ಓಡಿಸಿದರೆ ಮತ್ತೊಂದು ಆಕಾರಕ್ಕೆ ಅವನು ಸೇರುವನು. ಕೊನೆಗೆ ಎಲ್ಲಾ ಆಕಾರಗಳನ್ನು ನಾಶಮಾಡಿದರೂ ನಿರಾಕಾರನಾಗಿ ನಿಂತು ಮನುಷ್ಯರ ಹುಚ್ಚನ್ನು ನೋಡಿ ನಗುವನು.

ಜುಲೈ ಹದಿನಂಟನೆಯ ತಾರೀಖು ಡೆಲ್ಲಿ ಯಿಂದ ಕಾಶ್ಮೀರಕ್ಕೆ ಹೋಗುವ ಮುನ್ನ ಅಪ್ಪಣೆ ಪಡೆದು ಬೆಳಗ್ಗೆ ಅಮೃತಸರವನ್ನು ಸೇರಿದೆ. ಅಮೃತಸರದಲ್ಲಿ ಚಿನ್ನದ ತಗಡನ್ನು ಹೊದಿಸಿರುವ ಒಂದು ಸಿಕ್ಕರ ದೇವಸ್ಥಾನವಿದೆ. ನಾನು ಸಿಕ್ಕರ ದೇವಸ್ಥಾನವನ್ನು ನೋಡಿರಲಿಲ್ಲ. ಇದನ್ನು ನೋಡೋಣವೆಂದು ಬಯಸಿದೆ. ಊರಿನ ಮಧ್ಯೆ ಒಂದು ದೊಡ್ಡ ಸರೋವರವಿದೆ. ಅದರ ಮಧ್ಯದಲ್ಲಿ ದೇವಸ್ಥಾನ. ಅದಕ್ಕೆ ಹೋಗುವುದಕ್ಕೆ ನೀರಿನ ಮೇಲೆ ಒಂದು ಸೇತುವೆಯನ್ನು ಕಟ್ಟಿರುವರು. ಸಾವಿರಾರು ಸಿಕ್ ಯಾತ್ರಿಕರು ನೀರಿನಲ್ಲಿ ಮಿಂದು, ದೇವ

ಸ್ಥಾನಕ್ಕೆ ಭಕ್ತಿಯಿಂದ ಹೋಗುವರು. ನಾನೆಷ್ಟೋ ಪ್ರಸಿದ್ಧ ಹಿಂದೂ ದೇವಸ್ಥಾನಗಳನ್ನು ನೋಡಿರುವೆನು. ಅಲ್ಲಿ ಯಾತ್ರಿಕರಲ್ಲಿರುವ ಭಕ್ತಿಗೆ ಯಾವ ಬರಗಾಲವೂ ಇಲ್ಲ. ಆದರೆ ಸ್ವಲ್ಪವಾದರೂ ಶಿಸ್ತಿಲ್ಲ. ನೂಕು, ನುಗ್ಗಾಟ, ಹಣ್ಣುಕಾಯಿ ಮಾಡಿಸುವ ಅವಸರ ಒಂದು ಸಂತೆಯ ನೆನಪನ್ನು ತರುವುದು. ಆದರೆ ಸಿಕ್ಖರ ದೇವಸ್ಥಾನದಲ್ಲಿದ್ದ ಶಿಸ್ತು, ಅಲ್ಲಿದ್ದ ಭಕ್ತಿ ವಾತಾವರಣ, ಮೌನ ಇವನ್ನು ನೋಡಿ ಮೂಕನಾದೆ. ಸಾವಿರಾರು ಜನ ಯಾತ್ರಿಕರು ಭಯಭಕ್ತಿಯಿಂದ ದೇವಸ್ಥಾನಕ್ಕೆ ಬರುವರು. ದಾರಿಯಲ್ಲಿ, ತಾವು ನೈವೇದ್ಯಕ್ಕೆಂದು ತಂದಿದ್ದ ಗೋಧಿಹಿಟ್ಟು, ತುಪ್ಪ, ಸಕ್ಕರೆಯನ್ನು, ಒಂದು ಸ್ಥಳದಲ್ಲಿ ಕೊಟ್ಟು ಬಿಡುವರು. ನಂತರ ದೇವಾಲಯವನ್ನು ಪ್ರವೇಶಿಸುವರು. ಅಲ್ಲೆ ಮಧ್ಯದಲ್ಲಿ ಅವರ ಗ್ರಂಥ ಸಾಹೇಬ ಇದೆ. ಅವರು ವಿಗ್ರಹಾರಾಧಕರು ತಾವಲ್ಲವೆಂದು ತಿಳಿದಿರುವರು! ಅವರ ಹಿಂದಿನ ಗುರುಗಳು ರಚಿಸಿದ ಗ್ರಂಥವನ್ನೇ ದೇವರ ಪೀಠದಲ್ಲಿಟ್ಟು ಅದರ ಮೇಲೆ ಒಂದು ಬಟ್ಟೆಯನ್ನು ಹೊದಿಸಿ ಅದನ್ನು ಪೂಜಿಸುವರು. ಒಂದು ಮೂಲೆಯಲ್ಲಿ ಕೆಲವು ಸಿಕ್ಖರು ಭಕ್ತಿಯಿಂದ ಹಾಡುವರು. ಯಾತ್ರಿಕರು ಒಂದು ಪ್ರದಕ್ಷಿಣೆ ಬರುವರು. ಬರುವಾಗ ಅವರಿಗೆ ಪ್ರಸಾದವೆಂದು ಸ್ವಲ್ಪ ಸಜ್ಜಿಗೆಯನ್ನು ಕೊಡುವರು. ಅದನ್ನು ತೆಗೆದುಕೊಂಡ ಮೇಲೆ, ಯಾವುದಾದರೊಂದು ಮೂಲೆಯಲ್ಲಿ ಸ್ವಲ್ಪ ಹೊತ್ತು ಭಜನೆಯನ್ನು ಕೇಳುತ್ತ, ಧ್ಯಾನಮಾಡಿ ಹಿಂತಿರುಗುವರು. ಸಿಕ್ಖರ ಮತ ಹುಟ್ಟಿದ್ದು ಮಹಮ್ಮದೀಯರ ಧಾಳಿಯನ್ನು ಎದುರಿಸು

ಪ್ರದಕ್ಕೆ. ಇದು ಶಿಸ್ತಿನಿಂದ ಕೂಡಿದ ಕ್ಷಾತ್ರಿಯ ಮತ. ಅವರ ಪ್ರಾರ್ಥನೆಯಲ್ಲಿ, ಪೂಜೆಯಲ್ಲಿ, ಅವರು ಭಕ್ತಿಯಿಂದ ಹಾಡುವ ಹಾಡಿನಲ್ಲಿಯೂ ಇದನ್ನು ಗಮನಿಸುವೆವು.

ಸುಮಾರು ಹತ್ತು ಗಂಟೆಯ ಹೊತ್ತಿಗೆ ಇದನ್ನು ಪೂರೈಸಿಕೊಂಡು ಒಂದು ಹೋಟಲಿಗೆ ಬಂದೆವು. ಅಲ್ಲಿ ದಕ್ಷಿಣ ಇಂಡಿಯಾ ದೇಶದ ಅನ್ನದ ಹೋಟೆಲುಗಳಂತೆ ಅಲ್ಲ. ಒಂದು ದೃಷ್ಟಿಯಿಂದ ನೋಡಿದರೆ ಇದು ಹೋಟೆಲಿನವರಿಗೆ ಲಾಭದಾಯಕವೇ ಸರಿ ಎನ್ನಬಹುದು. ಯಾರಾದರೂ ಒಬ್ಬ ಭೀಮಸೇನಸಂತತಿಯವನು ಆರಾಣೆಯೊ ಎಂಟಾಣೆಯೋ ಕೊಟ್ಟು ಹೊಟ್ಟೆ ತುಂಬ ಊಟಮಾಡಿ ಹೋದರೆ ಮಾಲೀಕನಿಗೆ ಇದರ ನಷ್ಟವನ್ನು ಸಹಿಸಬೇಕಾದರೆ ಒಂದು ಡಜನ್ ಮಿತವಾಗಿ ಉಣ್ಣುವವರನ್ನು ಸುಲಿಯಬೇಕು. ನಮಗೆ ಆ ಹೋಟೆಲಿನಲ್ಲಿ ಒಂದು ಪ್ಲೇಟಿಗೆ ಇಷ್ಟು ಎಂದು ಗೊತ್ತಾಗಲಿಲ್ಲ. ಏನು ಬೇಕು ಎಂದು ಆ ಮನುಷ್ಯ ಕೇಳಿ, ಅನ್ನ ಮತ್ತು ಕೆಲವು ತರಕಾರಿ ತಂದು ಇಟ್ಟ. ಆ ತರಕಾರಿ ಪಲ್ಯಗಳು ಆಯುರ್ವೇದದ ಕಶಾಯ, ಲೇಹಗಳಂತೆ ಇದ್ದುವು. ಅದನ್ನು ತಿನ್ನಲು ಆಗಲಿಲ್ಲ. ಒಂದೆರಡು ಚಪಾತಿಯನ್ನು ತಿಂದು ಮಜ್ಜಿಗೆ ಕೊಡಿ ಎಂದೆ. ದೊಡ್ಡ ಲೋಟದಲ್ಲಿ ಮಜ್ಜಿಗೆ ಮಾಡಿ ಅದಕ್ಕೆ ಮಂಜಿನ ಗಡ್ಡೆ, ಸಕ್ಕರೆ ಬೆರಸಿ ತಂದುಕೊಟ್ಟರು. ಇದನ್ನು ಕುಡಿದಾಗ ಆನಂದವಾಯಿತು. ಅವರ ಊಟದಲ್ಲೆಲ್ಲಾ ರುಚಿಸಿದ್ದು ಆ ಕೊನೆಗೆ ಕೊಟ್ಟ ಮಜ್ಜಿಗೆ. ದುಡ್ಡು ಕೊಡಲು ಹೋಟೆಲು ಮಾಲೀಕನ ಹತ್ತಿರ ಹೋದಾಗ, ಸ್ವಲ್ಪ ನಿಲ್ಲಿ, ನೀವು ಏನೇನು ತೆಗೆದು

ಕೊಂಡಿರುವಿರೋ ಅದನ್ನೆಲ್ಲಾ ನೋಡಬೇಕು ಎಂದ. ಏನಿಲ್ಲ ಎರೀ ಒಂದು ಊಟ ಎಂದೆ. ಊಟವಿರಬಹುದು, ಆ ಊಟದಲ್ಲಿ ಹಲವಾರು ಪ್ಲೇಟುಗಳು ಸೇರಿರುವುವು, ಎಂದು, ಎಂದು, ಪ್ಲೇಟ್ ತೆಗೆದುಕೊಂಡ. ಪಲ್ಯ, ತೊವ್ವೆ, ತರಕಾರಿ, ಉಪ್ಪಿನಕಾಯಿ, ಇನ್ನೂ ಹಲವು ಬಗೆ ತರಕಾರಿ (ತಿನ್ನದೆ ಬಿಟ್ಟಿದ್ದು) ಕೊನೆಗೆ ಮಜ್ಜಿಗೆ, ಹಾಕಿ ಕೂಡಿಸಿ ಮೂರು ರೂಪಾಯಿ ಎಂದ. ಹೊಟ್ಟೆ ತುಂಬದ ಊಟಕ್ಕೆ ಮೂರು ರೂಪಾಯಿ ಕೊಟ್ಟು ಪೆಚ್ಚು ಮುಖ ಹಾಕಿಕೊಂಡು ಸ್ಟೇಷನ್‌ಗೆ ಬಂದೆವು. ಅಮೃತಸರದಿಂದ ಎಪ್ಪತ್ತು ಮೈಲಿ ಪಠಾನ್ ಕೋಟೆಗೆ. ಕಾಶ್ಮೀರಕ್ಕೆ ಹೋಗುವುದಕ್ಕೆ ಅದೇ ಕೊನೆಯ ರೈಲ್ವೆ ನಿಲ್ದಾಣ. ಅಂದೇ ಶ್ರೀನಗರಕ್ಕೆ ಹೋಗಲು ಬಸ್ಸನ್ನು ವಿಚಾರಿಸಲಾಗಿ, ಬಸ್ಸು ಮಾರನೆ ದಿನ ಹೊರಡುವುದೆಂದು, ಪ್ರಯಾಣಮಾಡಲು ಸುಮಾರು ೨೦ ಗಂಟೆ ಬೇಕಾಗುವುದೆಂದು ತಿಳಿಸಿದರು. ಇಳಿದುಕೊಳ್ಳುವುದಕ್ಕೆ ಸ್ಥಳ ಹುಡುಕಬೇಕಾಯಿತು. ಅದೊಂದು ಸಣ್ಣ ಊರು. ಕಾಶ್ಮೀರದ ಮೇಲೆ ಪಾಕಿಸ್ತಾನದ ಆಕ್ರಮಣ ಹೆಚ್ಚಾದ ಮೇಲೆ ಪಠಾನ್ ಕೋಟೆ ಇಂಡಿಯಾ ಮಿಲಿಟರಿಯ ಮುಖ್ಯ ಕೇಂದ್ರವಾಯಿತು. ಅಲ್ಲಿದ್ದ ಹಲವು ಹೋಟಲುಗಳು ಆಗಲೇ ಭರ್ತಿಯಾಗಿದ್ದವು. ಅಂತು ನಾಲ್ಕೈದು ಕಡೆ ವಿಚಾರಿಸಿ ಒಂದು ಹೋಟೆಲಿನ ರೂಮಿನಲ್ಲಿ ಇಳಿದುಕೊಂಡೆವು. ಅಲ್ಲಿ ಒಂದು ವ್ಯತ್ಯಾಸ. ಸ್ನಾನದ ಮನೆ, ಕಕ್ಕಸ್ಸು ಇರುವುದು ಮೇಲಿನ ಅಂತಸ್ತಿನಲ್ಲಿ. ಸಾಧಾರಣವಾಗಿ ನಮ್ಮ ಕಡೆ ಮೇಲೆ ಇಳಿದುಕೊಳ್ಳುವುದಕ್ಕೆ ಮಾಡಿಕೊಂಡು, ಕೆಳಗೆ ಸ್ನಾನಕ್ಕೆ ಕಕ್ಕಸ್ಸು ಮಾಡಿಕೊಳ್ಳುವೆವು. ಅಲ್ಲಿ

ಅದೇ ವಿಚಿತ್ರ. ಮನೆ ಮೇಲುಗಡೆ ಈ ಏರ್ಪಾಡು. ಗಲೀಜು, ನೊಣಗಳ ದಾಂಧಲೆ, ಧೂಳು, ಇವುಗಳ ಸಮೂಹದಲ್ಲಿ ಅಂತು ಒಂದು ದಿನ ನರಕಯಾತನೆ ಅನುಭವಿಸಿ, ಮಾರನೆಯ ದಿನ ಹನ್ನೆರಡು ಗಂಟೆಗೆ ಕಾಶ್ಮೀರದ ಕಡೆಗೆ ಹೊರಟೆವು. ಪಠಾಣ ಕೋಟೆಯಿಂದ ಜಮ್ಮುವಿಗೆ ಎಪ್ಪತ್ತು ಮೈಲಿಗಳು. ಅಲ್ಲಿಗೆ ಸುಮಾರು ನಾಲ್ಕು ಗಂಟೆ ಹೊತ್ತಿಗೆ ತಲುಪಿದೆವು. ಜಮ್ಮು ಕಾಶ್ಮೀರದ ಚಳಿಗಾಲದ ರಾಜಧಾನಿ. ನವೆಂಬರ್ ನಿಂದ ಏಪ್ರಿಲ್ ಕೊನೆಯವರೆಗೆ ರಾಜಧಾನಿ ಇಲ್ಲಿರುವುದು. ಇಲ್ಲಿ ಶ್ರೀನಗರಕ್ಕಿಂತ ಸ್ವಲ್ಪ ಕಡಿಮೆ ಚಳಿ ಇದರ ಎತ್ತರ ಸುಮಾರು ಐದುಸಾವಿರ ಅಡಿಗಳು ಆ ಸಮಯದಲ್ಲಿ ಇಂಡಿಯಾ ದೇಶದ ಕಡೆಯಿಂದ ಹೋಗಬೇಕಾದರೆ ತುಂಬಾ ಕಷ್ಟ. ಜಮ್ಮು ವಿನಿಂದ ಕಾಶ್ಮೀರ ದೇಶ ಮೊದಲಾಗುವುದು.

ಭರತಖಂಡದ ದೇಶೀಯ ಸಂಸ್ಥಾನದಲ್ಲೆಲ್ಲಾ ಕಾಶ್ಮೀರ ಅತಿ ದೊಡ್ಡದು. ಸುಮಾರು ೮೫,೦೦೦ ಚದರಮೈಲಿ ವಿಸ್ತೀರ್ಣ ವಿದೆ. ಅಂದರೆ ಮೈಸೂರಿನ ಮೂರರಷ್ಟಿದೆ. ಆದರೆ ಪ್ರಜಾ ಸಂಖ್ಯೆ ನಲವತ್ತು ಲಕ್ಷ. ಮೈಸೂರಿನ ಅರ್ಧದಷ್ಟು ಆಯಿತು. ಹಿಂದಿನ ಕಾಲದಿಂದಲೂ ಕಾಶ್ಮೀರದ ಶಾಲು ಪ್ರಖ್ಯಾತ ವಾಗಿತ್ತು. ಜನಕಮಹಾರಾಜ ಸೀತೆಯ ಕಲ್ಯಾಣದಲ್ಲಿ ಕಾಶ್ಮೀರ ಶಾಲನ್ನು ಬಳುವಳಿಯಾಗಿ ಕೊಡುವನು. ಧೃತರಾಷ್ಟ್ರ ಕೃಷ್ಣನಿಗೆ ಕೊಡುವನು. ನೆಪೋಲಿಯನ್ ತನ್ನ ಹೆಂಡತಿ ಜೋಸ್ ಫೈನಳಿಗೆ ಕೊಡುವನು. ಪ್ಯಾರಿಸ್ಸಿನಲ್ಲಿ ಅದೊಂದು ಷೋಕಿಯಾಯಿತು ಅವಳನಂತರ.

ಹೂಯರ್ತ್ಸಾಂಗನು ದುರ್ಲಭವರ್ಧನನ ಕಾಲದಲ್ಲಿ ಕಾಶ್ಮೀರಕ್ಕೆ ಬಂದಿದ್ದನು. ಜನರು ಸುಖವಾಗಿದ್ದರೆಂದು, ರಾಜ್ಯ ಸುವ್ಯವಸ್ಥಿತವಾಗಿತ್ತೆಂದೂ ಹೇಳುವನು. ಕಾಶ್ಮೀರದಲ್ಲಿ ಹಲವು ವೀರರಮಣಿಯರೂ ಇದ್ದರು. ಅವರಲ್ಲಿ ಪ್ರಖ್ಯಾತಳಾದವಳು ದಿಡ್ಡಾ ಎಂಬುವಳು. ಮಹಮುದ್ ಘೋರಿ ಕಾಶ್ಮೀರದ ಮೇಲೆ ದಂಡಯಾತ್ರೆ ಮಾಡಿದಾಗ ಆಕೆ ಈತನಿಗೆ ವಿರೋಧವಾಗಿ ಯುದ್ಧಮಾಡಿದಳು. ಘೋರಿಯು ಕೂಡ ನಿರಾಶನಾಗಿ ಹಿಂತಿರುಗಬೇಕಾಯಿತು.

ಮೊದಲೆಲ್ಲಾ ಕಾಶ್ಮೀರದಲ್ಲಿ ಜನರು ಹಿಂದೂ ಮತಕ್ಕೆ ಸೇರಿದ್ದರು. ಸುಮಾರು ಹದಿನಾಲ್ಕನೆ ಶತಮಾನದ ಹೊತ್ತಿಗೆ ಅಲ್ಲಿಯ ರಾಜ ಮಹಮ್ಮದೀಯರ ಪ್ರಾಬಲ್ಯಕ್ಕೆ ಸಿಕ್ಕಿ ಇಸ್ಲಾಂ ಮತಕ್ಕೆ ಸೇರಲು ಅಂದಿನಿಂದಲೂ ಹತ್ತೊಂಬತ್ತನೆ ಶತಮಾನದ ಹೊತ್ತಿಗೆ ಇವರ ಪ್ರಾಬಲ್ಯವೇ ಹೆಚ್ಚಾಗಿ ಶೇಕಡ ಎಪ್ಪತ್ತೈದರಷ್ಟು ಮಂದಿ ಮಹಮ್ಮದೀಯರಾಗಿರುವರು.

ಮೊಗಲಾಯರ ಕಾಲದಲ್ಲಿ ಅಕ್ಬರನ ದಳಪತಿ ಭಗವಾನ್ ದಾಸನು ಕಾಶ್ಮೀರವನ್ನು ಗೆದ್ದನು. ಅಂದಿನಿಂದ ಕಾಶ್ಮೀರ ಮೊಗಲರಿಗೆ ಬೇಸಗೆಯಲ್ಲಿ ವಿಹರಿಸುವ ಸ್ವರ್ಗಧಾಮವಾಯಿತು. ಷಾಹಜಹಾನ್ ಜಹಂಗೀರ್ ಮುಂತಾದವರು ಬೇಸಗೆಯ ಕಾಲದಲ್ಲಿ ಅಲ್ಲಿ ಬಂದು ನೆಲಸುತ್ತಿದ್ದರು. ಅವರ ಕ್ರೀಡೆಗಾಗಿ ಸರೋವರಗಳು, ನಂದನವನಗಳು, ಕೃತಕಬುಗ್ಗೆಗಳೂ ಆದುವು.

ಕ್ರಿ. ಶ. ೧೭೫೦ ರಲ್ಲಿ ಅಹಮದ್ ಷಾ ದುರಾನಿ ಎಂಬ ಅಫಘನ್‌ನು ಅದನ್ನು ತನ್ನ ಆಳ್ವಿಕೆಗೆ ತೆಗೆದುಕೊಂಡನು.

ಕ್ರಿ. ಶ. ೧೮೧೯ ರಲ್ಲಿ ರಣಜಿತ್‌ಸಿಂಗನ ವಶಕ್ಕೆ ಬಂದಿತು. ಇಂಗ್ಲೀಷರಿಗೂ ಸಿಕ್ಕರಿಗೂ ಯುದ್ಧವಾದ ಮೇಲೆ ಇಂಗ್ಲೀಷರು ಕಾಶ್ಮೀರವನ್ನು ಗುಲಾಬ್‌ಸಿಂಗ್ ಎಂಬ ಹಿಂದೂ ರಾಜನಿಗೆ ಎಪ್ಪತ್ತೈದುಲಕ್ಷ ರೂಪಾಯಿಗೆ ಮಾರಿದರು. ಅಂದಿನಿಂದ ಪುನಃ ಹಿಂದೂ ಆಳ್ವಿಕೆ ಮೊದಲಾಯಿತು. ಬಹುಜನ ಮಹಮ್ಮದೀಯರಿರುವ ದೇಶದಲ್ಲಿ ಒಬ್ಬ ಹಿಂದೂ ರಾಜ ಆಳಲು ಮೊದಲಾಯಿತು. ಹೇಗೆ ಬಹುಸಂಖ್ಯಾತ ಹಿಂದೂಗಳಿರುವ ಹೈದರಾಬಾದಿನಲ್ಲಿ ನೈಜಾಮ್ ಆಳುತ್ತಿರುವನೋ ಹಾಗೆ. ೧೮೫೪ ರಲ್ಲಿ ಮೊದಲನೆ ಇಂಗ್ಲಿಷ್ ರೆಸಿಡೆಂಟ್ ಬಂದನು. ಇಂಗ್ಲೀಷರನಂತರ ಈಗ ಮಹಾರಾಜರು ಪ್ರಜಾಪ್ರಮುಖರೊಂದಿಗೆ ರಾಜ್ಯಭಾರವನ್ನು ಮಾಡುತ್ತಿರುವರು.

ಕಾಶ್ಮೀರದಲ್ಲಿ ಶೈವಸಂಪ್ರದಾಯಕ್ಕೆ ಸೇರಿದ ಪೀಠೊಂದು ಶಾಖೆ ಚೆನ್ನಾಗಿ ಅಭಿವೃದ್ಧಿಯಾಗಿದೆ. ರಾಜತರಂಗಿಣಿಯನ್ನು ಬರೆದ ಕಲ್ಹಣ ಕಾಶ್ಮೀರದಿಂದ ಬಂದವನು. ಸುಮಾರು ಕ್ರಿ. ಶ. ಹನ್ನೆರಡನೆ ಶತಮಾನದಲ್ಲಿದ್ದನು ಇದನ್ನೇ ಕಾಶ್ಮೀರದ ಮೊದಲನೆ ಚರಿತ್ರೆ ಎನ್ನಬಹುದು. ಆಳಿದ ಹಲವು ರಾಜರ ಹೆಸರನ್ನು ಕೊಡುವನು. ಆದರೆ ಅದರಲ್ಲಿ ಚಾರಿತ್ರಿಕ ಅಂಶ ಪೆಸ್ಟು, ಅದನ್ನು ವಿಂಗಡಿಸುವುದು ಕಷ್ಟ. ನಮ್ಮಲ್ಲಿರುವುದು ಚಾರಿತ್ರಿಕ ದೃಷ್ಟಿಯ ಅಭಾವ. ನಮ್ಮ ಕಲ್ಪನೆ ಕುದುರೆ ಗರಿಗೆದರಿ ಲಂಗುಲಗಾಮಿಲ್ಲದೆ ಸ್ವೇಚ್ಛೆಯಾಗಿ ಹಾರುವುದು. ಅವರ ಸಾಹಸ, ಅವರ ಆಯುಸ್ಸು, ಅವರ ಪೌರುಷ ಇವು ಪುರಾಣ ಪ್ರಪಂಚಕ್ಕೆ ಸೇರಿರಬಹುದೆನ್ನಿಸುವುದು. ಆದರೂ ಈ

ಕಲ್ಪನೆ ಅತಿಶಯ, ಇದರ ಹಿಂದೆ ಒಂದು ಚಾರಿತ್ರಿಕ ಅಸ್ಥಿ ಪಂಜರ ಇದ್ದಿರಬಹುದು ಎನ್ನಿಸುವುದು. ಚಾರಿತ್ರಿಕ ದೃಷ್ಟಿ ಇಂದ ನೋಡಿದರೆ ರಾಜತರಂಗಿಣಿಯಲ್ಲಿ ಬರುವುದೆಲ್ಲವನ್ನೂ ಒಪ್ಪಿಕೊಳ್ಳದೇ ಇದ್ದರೂ, ಕೆಲವು ವ್ಯಕ್ತಿಗಳೂ ಕೆಲವು ಘಟನೆ ಗಳೂ ಚಾರಿತ್ರಿಕವಾಗಿರಬಹುದು ಎನ್ನಿಸುವುದು. ಸಾಹಿತ್ಯ ದೃಷ್ಟಿಯಿಂದ ಇದು ಒಂದು ಸುಂದರ ಕಾವ್ಯ. ಓದುವ ಹುಡುಗರಿಗೆ ಆನಂದದಾಯಕವಾದ ಕಥಾಸರಿತ್ಸಾಗರವನ್ನು ಬರೆದ ಸೋಮದೇವ ಕಾಶ್ಮೀರಕ್ಕೆ ಸೇರಿದವನು. ಸಂಸ್ಕೃತ ತೆಗೆದುಕೊಂಡ ಹುಡುಗರನ್ನು ಪಿಶಾಚಿಯಂತೆ ಕಾಡುತ್ತಿರುವ ವ್ಯಾಕರಣಶಾಸ್ತ್ರಕರ್ತೃವಾದ ಪಾಣಿನಿ ಈದೇಶದಿಂದ ಬಂದವನು. ಆಯುರ್ವೇದ ಪ್ರಪಂಚದಲ್ಲಿ ಪ್ರಖ್ಯಾತನಾದ ಚರಕ ಈ ದೇಶ ದಿಂದ ಬಂದನು. ಇಡೀ ಭಾರತ ಖಂಡದಲ್ಲಿ ಪ್ರಖ್ಯಾತರಾದವರ ಹೆಸರು ಇಷ್ಟು. ಇದಲ್ಲದೆ ಇನ್ನೂ ಕೆಲವು ಪ್ರಥಮ ದರ್ಜೆಗೆ ಸೇರದ ಪ್ರಖ್ಯಾತವ್ಯಕ್ತಿಗಳಿರುವರು.

ಜಮ್ಮು ಕಾಶ್ಮೀರದೇಶದಲ್ಲಿ ಎರಡನೆಯ ಪಟ್ಟಣ. ಇದನ್ನು ರಾಮಾಯಣದಲ್ಲಿ ಬರುವ ಕಪಿಸೇನಾ ನಾಯಕ ಜಾಂಬವಂತ ಕಟ್ಟಿದನೆಂದು ಹೇಳುತ್ತಾರೆ. ಆಗ ಇಲ್ಲೇ ಹತ್ತಿರ ವಿರುವ ಬೆಟ್ಟದ ಮೇಲೆ ವಾಸವಾಗಿದ್ದನಂತೆ. ಅಂತೂ ಯಾವ ಮೂಲೆಗೆ ಹೋದರೂ ರಾಮಾಯಣ ಮಹಾಭಾರತ ಹಾಸು ಹೊಕ್ಕಾಗಿ ಹೋಗಿದೆ. ಕಪಿಗಳ ರಾಜ್ಯ ಕಿಷ್ಕಿಂಧೆ. ಈಗಿನ ಹಂಪೆಯ ಹತ್ತಿರ. ಅಲ್ಲಿ ಆಂಜನೇಯಬೆಟ್ಟ, ವಾಲಿಸುಗ್ರೀವರು ಯುದ್ಧಮಾಡಿದ ಸ್ಥಳ, ರಾವಣ ಸೀತೆಯನ್ನು ಹೊತ್ತುಕೊಂಡು

ಹೋಗುತ್ತಿದ್ದಾಗ ಅವಳು ತನ್ನ ಸೀರೆ ಸೆರಗನ್ನು ಹರಿದು ಕೆಲವು ಆಭರಣಗಳನ್ನು ಅದರಲ್ಲಿ ಕಟ್ಟಿ ಕೆಳಗೆ ಬಿಸಾಡಿದಳೆಂದೂ, ಅದೇ ಸೀರೆಯ ಸೆರಗೆಂದೂ, ಈಗ ಅಲ್ಲಿರುವ ಒಂದು ಒಂಡೆಯ ಮೇಲಿನ ಗೆರೆಯನ್ನು ತೋರಿಸುವರು. ಕಪಿಸೇನೆಯೆಲ್ಲಾ ಅಲ್ಲಿದ್ದರೆ ಜಾಂಬವಂತ ಹೇಗೆ ಇಲ್ಲಿದ್ದ ಎಂದು ನನ್ನ ತರ್ಕ. ಏನೋ ರಾಮಪಟ್ಟಾಭಿಷೇಕವಾದಮೇಲೆ ಜಾಂಬವಂತ ಕಾಶ್ಮೀರಕ್ಕೆ ಹೋಗಿ ಒಂದು ರಾಜ್ಯವನ್ನು ಕಟ್ಟಿದನೇನೋ ಯಾರು ಬಲ್ಲರು. ಇದೆಲ್ಲಾ ವಾಲ್ಮೀಕಿ ರಾಮಾಯಣವನ್ನು ಮೀರಿದ ಕಥೆ ಇರ ಬಹುದು ಎಂದು ನನಗೆ ನಾನೇ ಸಮಾಧಾನ ಹೇಳಿಕೊಂಡೆ. ಸಾಧಾರಣ ಮನುಷ್ಯನ ದುರ್ಬಲತೆ ಇದು. ಏನೋ ನಮ್ಮ ಊರನ್ನು ಯಾರೋ ಹಿಂದಿನ ಪ್ರಖ್ಯಾತರು ಕಟ್ಟಿದರೆಂದು ಹೇಳಿದರೆ ಒಂದು ತೃಪ್ತಿ. ಅನೇಕ ರಾಜರು, ಸುಲಿಗೆಮಾಡುವ ಪಾಳೆಯಗಾರರೂ, ಠಕ್ಕರೂ ದರೋಡೆಕಾರರೂ ಆಗಿದ್ದರೂ, ತಾವು ಸೂರ್ಯವಂಶ, ಚಂದ್ರವಂಶದಿಂದ ಬಂದವರೆಂದೂ, ರಾಮ, ಕೃಷ್ಣ, ಪಾಂಡವರೆಲ್ಲಾ ತಮ್ಮ ವಂಶಕ್ಕೆ ಸೇರಿದವರೆಂದು ಕೊಂಡರೆ ಒಂದು ಸಮಾಧಾನ. ಏನಾದರಾಗಲೀ ನಮ್ಮ ಪುರಾಣಗಳ ಪ್ರಭಾವ ಬಹು ಪ್ರಬಲವಾದುದು. ಒಂದು ನೀರಿನ ಪಾತ್ರೆಯಲ್ಲಿ ಸ್ವಲ್ಪ ಸಕ್ಕರೆಯನ್ನು ಒಂದು ಕಡೆ ಬೆರಸಿದರೆ, ಹೇಗೆ ಅದು ಕರಗಿ, ಆ ನೀರಿನ ಪ್ರತಿಯೊಂದು ಬಿಂದುವಿನಲ್ಲಿಯೂ ಇರು ವುದೋ ಹಾಗೆ ಭರತಖಂಡದಲ್ಲಿ ರಾಮಾಯಣ, ಮಹಾಭಾರತ ಶೀಲಗಳು ಕರಗಿಹೋಗಿವೆ. ಯಾವ ಊರನ್ನು ತೆಗೆದು ಕೊಂಡರೂ ಅಲ್ಲಿ ರಾಮ ಲಕ್ಷ್ಮಣ ಹನುಮಂತ ಬಂದಿದ್ದ ಎನ್ನುವರು. ಕೇವಲ ಚಾರಿತ್ರಿಕ ದೃಷ್ಟಿಯಿಂದ ನೋಡಿದಾಗ

ಸಂಬಲಸಾಧ್ಯವಾದರೂ ಸಂಸ್ಕೃತಿಯ ದೃಷ್ಟಿಯಿಂದ ದೊಡ್ಡ ಕೆಲಸವಮಾಡಿದೆ. ಅಖಂಡ ಭರತಖಂಡವನ್ನು ಒಂದುಗೂಡಿಸಿದೆ. ಅಲ್ಲಿ ಜಾಂಬವಂತನ ಗುಹೆ ಯಾವುದಾದರೂ ಇದೆಯೇ ಎಂದು ವಿಚಾರಿಸಲಾಗಿ ಇಲ್ಲವೆಂಬ ಉತ್ತರ ಬಂದಿತು.

ಜಮ್ಮುವಿನಿಂದ ಶ್ರೀನಗರಕ್ಕೆ ಪ್ರಯಾಣ ಮಾಡುವಾಗ ನಿಜವಾಗಿ ನಮ್ಮ ಕಾಶ್ಮೀರಯಾತ್ರೆ ಮೊದಲಾಯಿತು ಎನ್ನಬಹುದು. ನಮ್ಮದು Tourist Special Bus. ಕೇವಲ ಹದಿನಾಲ್ಕು ಜನರನ್ನು ತೆಗೆದುಕೊಳ್ಳುತ್ತಿತ್ತು. ಬಹಳ ಅನುಕೂಲವಾಗಿತ್ತು. ಹೆಚ್ಚಿಗೆ ಜನರನ್ನು ಹಾಕುತ್ತಿರಲಿಲ್ಲ. ಬಸ್ಸಿನಲ್ಲಿ ಸ್ವಲ್ಪಹೊತ್ತು ಪ್ರಯಾಣಮಾಡಲು ಪ್ರಾರಂಭವಾದಮೇಲೆ ಪ್ರಯಾಣಿಕರು ಒಬ್ಬೊಬ್ಬರಾಗಿ ಪರಿಚಯವಾದರು. ಅದೊಂದು ದೊಡ್ಡ ಸಂಸಾರವೇ ಆಯಿತು. ಅಲ್ಲಿಂದ ಒಂದು ದಿನಕ್ಕಿಂತ ಹೆಚ್ಚು ಪ್ರಯಾಣ ಮಾಡಬೇಕಾಗಿತ್ತು. ಅಲ್ಲಿ ಕಲವು ವ್ಯಕ್ತಿಗಳ ಪರಿಚಯವನ್ನು ಮಾತ್ರ ಕೊಡುತ್ತೇನೆ. ಮುಕ್ಕಾಲು ಪಾಲು ಜನರು ಅಲ್ಲಿದ್ದವರು ಸಿಕ್ಕರು. ಇದ್ದ ಸಿಕ್ಕರಲ್ಲಿ ಇಬ್ಬರು ಹೆಂಗಸರನ್ನು ಬಿಟ್ಟರೆ ಮಿಕ್ಕವರೆಲ್ಲರೂ ಮಿಲಿಟರಿಯವರು. ನನ್ನ ಪಕ್ಕದಲ್ಲಿ ಕುಳಿತವನು ಒಬ್ಬ ಸಿಕ್ಕರ ಕ್ಯಾಪ್ಟನ್. ಸುಮಾರು ೨೫ ಅಥವಾ ೨೬ ವರುಷದ ತರುಣ. ಜಮ್ಮುವಿನಲ್ಲಿ ಬಂದು ನನ್ನ ಹತ್ತಿರ ಕುಳಿತುಕೊಂಡನು. ವಿದ್ಯಾವಂತ, ಆದರೆ ಅವನ ಮುಖದಲ್ಲಿ ಯಾವುದೋ ದುಃಖ ಹೊಗೆಯಾಡುತ್ತಿತ್ತು. ಮಧ್ಯೆ ಮಧ್ಯೆ ನಿಟ್ಟುಸಿರು ಬಿಡುತ್ತಿದ್ದನು. ಸೇನೆಗೆ ಸೇರಿದ ತರುಣ. ಕಾಶ್ಮೀರದ ಯುದ್ಧದಲ್ಲಿ ಆಗಲೇ

ಅವನು ಕೆಲವು ವೇಳೆ ಕಾದಾಡಿದ್ದ. ಸಾವು, ಕೊಲೆ, ಹಿಂಸೆ, ಮಾಮೂಲು ಇವರಿಗೆ. ಈ ವಾತಾವರಣದಲ್ಲಿ ಹೃದಯ ಜಡ್ಡು ಕಟ್ಟಿಹೋಗುವುದು. ಆದರೂ ಇಂತಹ ಜಡ್ಡು ಕಟ್ಟಿದ ಹೃದಯವನ್ನು ಪ್ರವೇಶಮಾಡಿದ ದಾರುಣದುಃಖ ಯಾವುದಿರಬಹುದೆಂದು, ಸ್ವಲ್ಪ ಹೊತ್ತಾದಮೇಲೆ, "ಏನು ನೀವು ಆರೋಗ್ಯದಲ್ಲಿಲ್ಲವೇನೋ" ಎಂದು ೧೨ ಪ್ರಶ್ನೆ ಮಾಡಿದೆ. "ಆರೋಗ್ಯ ಇದೆ. ಆದರೆ ಯಾವುದೋ ಒಂದು ವಿಪತ್ತಿನ ಸುಳಿಗೆ ಸಿಕ್ಕಿಕೊಂಡಿರುವೆ" ಎಂದು ತನ್ನ ಆತ್ಮ ಕಥೆಯನ್ನು ಸಂಕ್ಷೇಪವಾಗಿ ಹೇಳಿದ. ಹಿಂದಿನ ದಿನ ಡೆಲ್ಲಿಯಿಂದ ಜಮ್ಮುವಿಗೆ ಬರುತ್ತಿದ್ದ ವಿಮಾನ ಪಠಾನ್ ಕೋಟೆಯ ಹತ್ತಿರ ಬಿದ್ದುಹೋಗಿ ಅದರಲ್ಲಿದ್ದ ತನ್ನ ಒಬ್ಬನೇ ತಮ್ಮ ಸತ್ತುಹೋದನೆಂದೂ, ತನ್ನ ತಂದೆಗೆ ಇಬ್ಬರೇ ಮಕ್ಕಳೆಂದೂ, ಈಗ ತಂದೆ-ತಾಯಿಯನ್ನು ಸಮಾಧಾನ ಮಾಡುವುದಕ್ಕೆ ಶ್ರೀನಗರಕ್ಕೆ ಹೋಗುತ್ತಿರುವನೆಂದೂ ಹೇಳಿದನು. ತಾನು ಇದೇ ಸ್ಥಳದವನೆಂದೂ ತಾವು ಯಾವುದರೂ ವಿಷಯಗಳನ್ನು ತಿಳಿದುಕೊಳ್ಳಬೇಕಾದರೆ ತನ್ನನ್ನು ಕೇಳಬಹುದೆಂದೂ ಹೇಳಿದನು. ಆ ಮನುಷ್ಯನನ್ನು ನೋಡಿ ಅಯ್ಯೋ ಪಾಪ ಎನ್ನಿಸಿತು. ಜೀವನದ ಸ್ವರೂಪವೇ ಹೀಗೆ. ನಮ್ಮ ಸಂಬಂಧವೆಲ್ಲಾ ತಾತ್ಕಾಲಿಕ. ಅಣ್ಣ-ತಮ್ಮ ಅಕ್ಕ-ತಂಗಿ, ತಂದೆ-ತಾಯಿ, ಗಂಡ-ಹೆಂಡಿರು ಎಲ್ಲಾ ಒಂದೇ ಬಸ್ಸಿನಲ್ಲಿ ಪ್ರಯಾಣಮಾಡುವ ಪ್ರಯಾಣಿಕರ ತಂಡದಂತೆ. ಕೆಲವು ಕಾಲ ಒಟ್ಟಿಗೆ ಹೋಗುವೆವು. ಒಬ್ಬರು ಮತ್ತೊಬ್ಬರ ದುಃಖದಲ್ಲಿ ಭಾಗಿಗಳಾಗುವೆವು. ಆದರೆ ಅವರ ನಿಲ್ದಾಣ

ಬಂದಾಗ ಅವರ ಪಾಡಿಗೆ ಅವರು ಹೋಗುವರು. ಅಂತೂ ನಮ್ಮ ಕಣ್ಣಿಗೆ ಕಾಣದೆ ಎಲ್ಲಾದರೂ ಹೋಗಲಿ, ದೇವರು ಅವರಿಗೆ ಒಳ್ಳೆಯದನ್ನು ಮಾಡಲಿ ಎಂದು ನಾವು ಪ್ರಾರ್ಥಿಸಬೇಕು, ಎಂದು ವೇದಾಂತವನ್ನು ಹೇಳಿದೆ. ಪಾಪ ನೊಂದ ಎದೆಗೆ ನನ್ನ ವೇದಾಂತ ಯಾವ ತೃಪ್ತಿಯನ್ನು ಕೊಟ್ಟಿತೋ ಗೊತ್ತಾಗಲಿಲ್ಲ. ಅಂತೂ ನಾವು ಶ್ರೀನಗರಕ್ಕೆ ಸೇರುವವರೆಗೆ ಒಳ್ಳೆಯ ಸ್ನೇಹಿತನಾದ.

ಮತ್ತೊಬ್ಬ ಕಾಶ್ಮೀರಪಂಡಿತ. ಸ್ವಲ್ಪ ಸಂಸ್ಕೃತ ಗೊತ್ತಿತ್ತು. ಜೊತೆಗೆ ಇಂಗ್ಲೀಷು, ಪಂಜಾಬಿ, ಕಾಶ್ಮೀರಿಯೂ ಗೊತ್ತಿತ್ತು ಆತನಿಗೆ. ತುಂಬಾ ಮಾತಾಳಿ. ಜಮ್ಮುವಿನಲ್ಲಿ ಒಸ್ಸಿಗೆ ಬಂದು ಕೂತೊಡನೆಯೇ ಎಲ್ಲರೊಡನೂ ಮಾತನಾಡಲು ಪ್ರಾರಂಭಿಸಿದ. ಹಿಂದೂಧರ್ಮ, ಅದರ ಆಚಾರ, ಅದರ ದೇವ-ದೇವಿಯರು ಇತ್ಯಾದಿ. ಎಲ್ಲಾ ಕುಳಿತುಕೊಂಡು ಕೇಳಿದರು. ಸ್ವಲ್ಪ ಜನರು ಅವನ ಹತ್ತಿರ ವಾದ ಮಾಡಿದರು. ಆ ಮನುಷ್ಯ ಎಲ್ಲರೂ ಹೇಳುವುದನ್ನು ಕೇಳುವುದಕ್ಕಿಂತ ತಾನು ಹೇಳುವುದನ್ನು ಮಾತ್ರ ಕೇಳಬೇಕೆಂದು ಎಲ್ಲರನ್ನೂ ಒತ್ತಾಯಪಡಿಸುತ್ತಿದ್ದ. ಆ ಮನುಷ್ಯನ ಮಾತಿನ ಮಳೆಯಿಂದ ಕಿವಿ ಚಿಟ್ಟು ಹಿಡಿದುಹೋಯಿತು.

ಮತ್ತೊಬ್ಬ ಸ್ನೇಹಿತನು ನಮ್ಮ ಗೆಳೆಯರ ಪಕ್ಕದಲ್ಲಿ ಕುಳಿತಿದ್ದ. ಆತನು ಮಿಲಿಟರಿ ಗುಂಪಿಗೆ ಸೇರಿದವನು. ಇಂಗ್ಲೀಷ್ ಬಲ್ಲವನು. ಸ್ವಲ್ಪ ವೈಜ್ಞಾನಿಕ ಪುಸ್ತಕಗಳನ್ನು ಓದಿದ್ದನೆಂದು ಕಾಣುವುದು. ಆ ಮನುಷ್ಯ ತನ್ನ ವೈಜ್ಞಾನಿಕ ಭಂಡಾರ

ವನ್ನೆಲ್ಲಾ ಬಿಡುವಿಲ್ಲದೆ ಎರಚುತ್ತಿದ್ದ. ನಮ್ಮವರಿಗೆ ಬೇಕಾ ಗಿರಲಿಲ್ಲ. ಆದರೆ ಆ ಮನುಷ್ಯನ ಬಾಯಿಯಿಂದ ಬರುತ್ತಿದ್ದ ಪ್ರವಾಹವನ್ನು ತಡೆಯಲು ಅವರಿಗೆ ಸಾಧ್ಯವಾಗಲಿಲ್ಲ. ಆ ಮನುಷ್ಯನು ಹೇಳುವುದನ್ನೆಲ್ಲ ಕೇಳುತ್ತಲೋ ಅಥವಾ ಕಿವುಡುಕಿವಿ ಕೊಡುತ್ತಲೋ ಸುಮ್ಮನೆ ಸ್ವಲ್ಪದೂರ ಹೋದರು. ಸೂರ್ಯ ಚಂದ್ರ ಭೂಮಿ, ನಮಗೂ ಅವಕ್ಕೂ ಇರುವ ದೂರ, ಬೆಳಕು ಅದರ ವೇಗ, ನಕ್ಷತ್ರಗಳೂ, ತಾರೆಸಿಹಾರಿಕೆ. ಎಲಕ್ಟ್ರಾನ್, ಪ್ರೋಟಾನ್, ನ್ಯೂಟ್ರಾನ್, ಪಾಸಿಟ್ರಾನ್, ಐನಿಸ್ಟೀನ್, ಎಡಿಂಗ್‌ಟನ್, ಜೀನ್ಸ್, ಡಾರ್ವಿನ್, ಹಕ್ಸ್ಲೀ, ಮೆಂಡಲ್ ಮೊದಲಾದ ಆಧುನಿಕ ವೈಜ್ಞಾನಿಕ ಮಹಾಪುರುಷರ ಪವಿತ್ರ ನಾಮೋಚ್ಚಾರಣೆ. ಒಂದು ಕಿವಿಗೆ ಪಂಡಿತನ ಬಾಯಿಂದ ಬೀಳುವ ಸಂಸ್ಕೃತ ಶ್ಲೋಕಗಳ ಆಘಾತವಾಯಿತು. ಅದು ನಿಲ್ಲುವ ಹೊತ್ತಿಗೆ ಆಧುನಿಕ ವೈಜ್ಞಾನಿಕರ ಅಷ್ಟೋತ್ತರ ನಾಮೋಚ್ಚಾರಣೆ ಕೇಳಿ ಕಿವಿ ಚಟ್ಟು ಹಿಡಿದುಹೋಯಿತು. ಅಂತೂ ವಾಕ್ ಪ್ರವಾಹ ನಿರರ್ಗಳವಾಗಿ ಎಷ್ಟು ಕಾಲತಾನೆ ಹರಿದೀತು. ಮನುಷ್ಯನ ಬಾಯಿ ಒಂದು ಯಂತ್ರವಲ್ಲ. ಬರುಬರುತ್ತಾ ಮಾತುಧ್ವನಿ ನಿಧಾನವಾಯಿತು. ಅಂತೂ ದೇವರಿಗೆ ನಾವು ಮಾಡಿದ ಪ್ರಾರ್ಥನೆ ಫಲವಾಗಿ ಕನಿಕರ ಗೊಂಡು ನಿದ್ರಾಮಹಾದೇವಿಯನ್ನು ಈತನೆಡೆಗೆ ಕಳುಹಿಸಿದ. ಮಧ್ಯೆಮಧ್ಯೆ ತೂಕಡಿಸಿ ನಂತರ ತೆಪ್ಪಗಾದ. ಇದು ಬಸ್ಸಿನ ಒಳಗಡೆ ಇರುವ ಸಂಕ್ಷಿಪ್ತ ಸಂಸಾರ ಚಿತ್ರವಾಯಿತು. ಇದು ವರೆವಿಗೂ ಒಳಗಡೆ ಇರುವವರ ಪುರಾಣವೇ ಆಯಿತು. ಹೊರಗಿನ

ಚಿತ್ರವೇ ಕೊಡಲಿಲ್ಲವೆಂದು ಗೊಣಗಾಡ ಬಹುದು. ಬಸ್ಸು ಇನ್ನೂ ಗುಡ್ಡಮೇಡುಗಳಲ್ಲಿ ಹೋಗುತ್ತಿತ್ತು. ಸುತ್ತಲೂ ಬೋಳುಬೆಟ್ಟವಲ್ಲದೆ ಮತ್ತೇನು ಕಾಣುವುದಿಲ್ಲ. ಹಲವು ಕಡೆ ಮಳೆಗಾಲದಲ್ಲಿ ಹರಿದು ಈಗ ತೆಪ್ಪಗಾದ ನದಿಯ ಮರಳು ಮತ್ತು ಹಿಮಾಲಯದಿಂದ ಉರುಳಿಬಂದ, ನುಣುಪಾದ ಮತ್ತು ಗುಂಡಾದ ಕಲ್ಲುಗಳು ಮಾತ್ರ ಕಾಣುತ್ತಿವೆ. ಬಸ್ಸು ಬರುಬರುತ್ತ ಮೇಲಕ್ಕೆ ಏರುತ್ತಿದೆ. ಜಮ್ಮುವಿನಿಂದ ಹೋಗು ವಾಗ ಸುಮಾರು ಹತ್ತು ಹದಿನೈದು ಮೈಲಿ ದೂರಕ್ಕೊಂದು ಮಿಲಿಟರಿ ಕೇಂದ್ರಗಳು. ಅವೆಲ್ಲಾ ಒಂದು ಡೇರೆಯ ನಗರ ಗಳಂತೆ ಕಾಣುತ್ತಿದ್ದುವು. ಅವರು ಮಾಡುವ ಕವಾತು, ಆಟ, ಊಟ, ಇವನ್ನು ನೋಡುತ್ತಾ ಹೋಗುತ್ತಿದ್ದೆವು. ಇದೇ ಭಾರತೀಯ ಸೈನ್ಯದಳ, ಕಾಶ್ಮೀರ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಇಂಡಿಯನ್ ಯೂನಿಯನ್‌ನವರು ಕಳುಹಿಸಿದ್ದರು. ಹಿಂದಿನಿಂದಲೂ ಸೈನ್ಯವೆಂದರೆ ನಮಗೊಂದು ತಾತ್ಸಾರ. ಇಂಗ್ಲೀಷಿನವರು ಇದ್ದಾಗ ಸೈನ್ಯವಿದ್ದುದು ಅವರ ಸಂರಕ್ಷಣೆಗಾಗಿ. ಭಾರತ ಹಿತವಲ್ಲ ಅವರಿಗೆ ಮುಖ್ಯ, ಅವರ ಹಿತ. ಆದರೆ ಎಂದು ಭಾರತ ಸ್ವತಂತ್ರ ವಾಯಿತೋ ಅಂದಿನಿಂದ ಆ ಸೈನ್ಯವನ್ನು ನಮ್ಮದೆಂದು ಭಾವಿಸತೊಡಗಿದೆವು. ನನ್ನ ಪಕ್ಕದಲ್ಲಿ ಕುಳಿತಿದ್ದ ಮಿಲಿಟರಿ ಸಹೋದರನನ್ನು ಸೈನ್ಯದ ವಿಚಾರವಾಗಿ ಹಲವಾರು ಪ್ರಶ್ನೆ ಗಳನ್ನು ಕೇಳಿದೆನು. ಅವೆಲ್ಲಕ್ಕೂ ಅವನು ಉತ್ತರವನ್ನು ಹೇಳಿ, ಈಗಿರುವ ಭರತಖಂಡದ ಸೈನ್ಯ ಶಿಸ್ತಿನಲ್ಲಿ ಸಾಹಸ ದಲ್ಲಿ ಪ್ರಪಂಚದ ಮತ್ತಾವುದಕ್ಕೂ ಹಿಂದಿಲ್ಲವೆಂದು ಹೇಳಿ

ದನು. ಇಂಗೊಂದು ಸಂತೋಷದ ಸುದ್ದಿ. ಹಲವು ವರ್ಷ ಗಳು ಪ್ರಯತ್ನಪಟ್ಟು ಹಲವು ಜೀವಿಗಳನ್ನು ಬಲಿಕೊಟ್ಟು ಸ್ವಾತಂತ್ರ್ಯಸಸಿಯನ್ನು ಈಗತಾನೆ ಪಡೆದುಕೊಂಡಿರುವೆವು. ಸಸಿ ಚೆನ್ನಾಗಿ ಬೆಳೆಯಬೇಕಾದರೆ ವೀರ ಕ್ಷತ್ರಿಯಯೋಧರ ಬೇಲಿ ಅವಶ್ಯಕ.

ರಾತ್ರಿ ಹತ್ತು ಗಂಟೆಹೊತ್ತಿಗೆ "ಬಟೋಟಿ" ಎಂಬ ಗ್ರಾಮವನ್ನು ಸೇರಿದೆವು. ಅದರ ಎತ್ತರ ಸುಮಾರು ೫೦೦೦ ಅಡಿಗಳು. ಆಗತಾನೆ ಜೋರು ಮಳೆ ಬೀಳುತ್ತಿತ್ತು. ಛಳಿ. ಬಸ್ಸಿನಲ್ಲಿ ಉರುಳಿ ಉರುಳಿ ಆಯಾಸವಾಗಿತ್ತು. ಅಲ್ಲಿ ಒಂದು Travellers' Bungalow ನಲ್ಲಿ ತಂಗಿದೆವು. ರಾತ್ರಿ ಊಟಮಾಡಿ ಮಲಗಿದೆವು. ಬೆಳಗೆ ಸ್ನಾನ ಆಹ್ನಿಕಗಳನ್ನು ತೀರಿಸಿಕೊಂಡು ಬಸ್ಸಿಗೆ ಹತ್ತಲು ಹೋಗುತ್ತಿರುವಾಗ ಒಬ್ಬ ಹೆಂಗಸು ಕೈಯಲ್ಲಿ ಒಂದು ಪರಕೆ ಹಿಡಿದುಕೊಂಡು ಒಂದು ಸಲಾಮು ಮಾಡಿದಳು. ಏನಾದರೂ ಭಕ್ಷೀಸು ಕೊಡಬೇಕೆಂದು ಕೇಳಿದಳು. ಆಕೆ ನೋಡುವುದಕ್ಕೆ ತುಂಬಾ ಸುಂದರವಾಗಿ ದ್ದಳು. ಈ ಹೆಂಗಸು ಯಾರು? ಏಕೆ ಭಕ್ಷೀಸ್ ಬೇಡು ತ್ತಿರುವಳು ಎಂದು ನನಗೆ ಗೊತ್ತಾಗಲಿಲ್ಲ. ನಂತರ ಗೊತ್ತಾ ಯಿತು. ಅವಳು ಅಲ್ಲಿ ಕಸಗುಡಿಸುವವಳೆಂದು. ಅಪರೂಪ ಇಂತಹ ಸುಂದರಸ್ತ್ರೀಯರು ಇರುವುದು ನಮ್ಮ ಕಡೆ ಕಸ ಗುಡಿಸುವವರಲ್ಲಿ. ಪ್ರಕೃತಿ ಕಾಶ್ಮೀರ ದೇಶದ ಜನಗಳಿಗೆ ಕೊಟ್ಟ ವರವಿದು. ಸೌಂದರ್ಯವನ್ನು ನೆಲದಮೇಲೆ ಹೇಗೆ ಎರೆಚಿ ದೆಯೋ, ಪರ್ವತದ ಮೇಲೆ ಹೇಗೆ ಎರಚಿದೆಯೋ, ಹಾಗೆ ಜನ ರಿಗೆಲ್ಲಾ ನಿಷ್ಪಕ್ಷಪಾತವಾಗಿ ಹಂಚಿರುವುದು. ಒಳ್ಳೆಯ ದೇವತೆ ಗಳಂತೆ ಕಾಣುವರು ಅಲ್ಲಿಯ ಹೆಂಗಸರು.

ಬಸ್ಸು ಅತಿಸುಂದರವಾದ ಪ್ರದೇಶದಲ್ಲಿ ಹೋಗುತ್ತಿತ್ತು. ಬೆಟ್ಟ ಕಣಿವೆಗಳನ್ನು ದಾಟಿ ದಟ್ಟವಾದ ಕಾಡಿನೊಳಗೆ ಇಕ್ಕಟ್ಟಾದ ಬೆಟ್ಟದ ರಸ್ತೆಯಲ್ಲಂತೂ ಏನಾದರೂ ಬಸ್ಸು ಹೋಗುವಾಗ ಸ್ವಲ್ಪ ಅತ್ತಲಾಕಡೆ ಇತ್ತಲಾಕಡೆ ಹೋದರೂ ಒಂದು ಬೆಟ್ಟದ ಕೆಳಗೆ ಬೀಳಬೇಕಾಗಿತ್ತು. ಡ್ರೈವರುಗಳಿಗೆ ಎಚ್ಚರಿಕೆ ಕೊಡಬೇಕೆಂದು ದಾರಿಯ ಪಕ್ಕದಲ್ಲಿ "ಜೋಪಾನವಾಗಿ ಮುಂದುವರಿಯಿರಿ" ಎಂಬ ಬೋರ್ಡುಗಳು ಬೇರೆ ಮಧ್ಯೆ ಮಧ್ಯೆ. ಕೆಲವುಕಡೆ "ನಿಧಾನವಾಗಿ ಹೋಗಿ ಪ್ರಕೃತಿಸೌಂದರ್ಯವನ್ನು ಅನುಭವಿಸಿ. ವೇಗವಾಗಿ ಹೋದರೆ, ಮೃತ್ಯುದಾಡೆಗೆ ಹೋಗುತ್ತೀರಿ" ಎಂದು ಬರೆದು ಕೆಳಗೆ ಒಂದು ರುಂಡ ಮತ್ತು ಎರಡು ಮೂಳೆಗಳನ್ನು ಚಿತ್ರಿಸಿದ್ದರು. ನೋಡುವುದಕ್ಕೆ ಭಯಾನಕವಾಗಿತ್ತು. Science ಲ್ಯಾಬರೆಟರಿಗಳಲ್ಲಿ ವಿಷದ ಸೀಸೆಗಳ ಮೇಲೆ ಹಾಗೆ ಚೀಟಿಗಳನ್ನು ಅಂಟಿಸುವರು. ನಾನು ಆ ದಾರಿಯ ಪಕ್ಕದಲ್ಲಿರುವ ಬೋರ್ಡನ್ನು ನೋಡಿ, "ನಿಧಾನವಾಗಿ ಹೋದರೆ ಈ ಜಗದ ಸೌಂದರ್ಯ, ವೇಗವಾಗಿ ಹೋದರೆ ಆ ಜಗದ ರಹಸ್ಯ ಕಾಣುವುದು" ಎಂದೆ. ಆ ಜಗದ ರಹಸ್ಯವೆಂದರೇನು? ಎಂದರು. ಅಂದರೆ ಜೀವನದ ಅತ್ತಲಾಕಡೆ ಇರುವ ಜಗತ್ತು, ಸಾವು. ಸಾವಿನಲ್ಲಿ ಏನಿದೆ? ಎಲ್ಲಾ ಶೂನ್ಯ ಮೌನವೆಂದರು. ಬದುಕಿರುವವನಿಗೆ ಸಾವು ಶೂನ್ಯ ಮೌನ. ಆದರೆ ಸತ್ತವನಿಗೆ ಹೇಗಿರುತ್ತದೆಯೋ ಯಾರಿಗೆ ಗೊತ್ತು. ಜಾಗ್ರತನಾಗಿರುವವನು ಮಲಗಿಕೊಂಡಿರುವವನನ್ನು ನೋಡಿ ಆ ಮನುಷ್ಯ ಸುಮ್ಮನೆ ಇರುವನು ಎನ್ನಬಹುದು. ಆದರೆ ಯಾವ ಕನಸಿನ ಪ್ರಪಂಚದಲ್ಲಿ ಎಷ್ಟು ವಿರಾಮವಿಲ್ಲದೆ ಅಲೆಯುತ್ತಿರುವನೋ ಅವನು ಯಾರಿಗೆ ಗೊತ್ತು?

ಅಂತೂ ದೃಶ್ಯ ಬಹಳ ರಮ್ಯವಾಗಿತ್ತು. ಆಗತಾನೆ ಮಳೆ ಹುಯ್ದು ನಿಂತಿತ್ತು. ಸುತ್ತಮುತ್ತಲಿರುವ ಗಿಡ ಮರಗಳಿಗೆಲ್ಲಾ ಅಭಿಷೇಕವನ್ನು ಮಾಡಿದಂತಿತ್ತು. ಬೆಟ್ಟದ ಕೆಳಗಿರುವ ಕಣಿವೆಯಲ್ಲಿ ಮಂಜಿನ ಮಂದೆ ಸೋವಾರಿಯಾಗಿ ಮುಂದುವರಿಯುತ್ತಿತ್ತು. ಮೇಲುಗಡೆ ಶುಭ್ರ ನೀಲಿ ಆಗಸ. ರಸ್ತೆಯ ಪಕ್ಕದಲ್ಲಿರುವ coniferous trees ನೋಡಲು ರಮ್ಯ. ಶಂಖದ ಆಕಾರವಾಗಿ ಒಂದೇಸಮನೆ ಮೇಲೆ ಹೋಗು ವುವು. ಮೈಸೂರಿನ ಕಡೆ ಅಂತಹ ಗಿಡಗಳನ್ನು ಯಾವುದಾ ದರೂ ಒಂದು ಪಾರ್ಕಿನಲ್ಲಿ ಸಂದರ್ಶಿಸಬಹುದೇ ವಿನಃ ಹೊರ ಗಡೆ ಎಲ್ಲಾ ಇರುವುದು ಒರಟು ಒರಟಾಗಿ ಶಾಖೋಪಶಾಖೆ ಗಳನ್ನು ಹಲವಾರುಕಡೆ ಚದುರಿ ಬೆಳೆದಿರುವ ಆಲ, ಬಸುರಿ, ಅಶ್ವತ್ಥ ಗಿಡಗಳು. ಯಾವಾಗಲೂ ಈ ಗಿಡಗಳನ್ನು ನೋಡಿ ದವರು ಕೋನಿಫರಸ್ ಮರಗಳನ್ನು ನೋಡಿದಾಗ ಬಗೆಬಗೆಯ ಬಟ್ಟೆಗಳನ್ನು ಹಾಕಿಕೊಂಡಿರುವ ಜನರನ್ನು ನೋಡ.ವವನು ಒಂದೇ ಬಗೆಯ ಬಟ್ಟೆಯನ್ನು ಹಾಕಿಕೊಂಡು ನಡೆಯುವ ಮಿಲಿ ಟರಿಯವರನ್ನು ಸಂದರ್ಶಿಸಿದ ಜ್ಞಾಪಕ ಬರುವುದು. ಬಸ್ಸಿನ ಒಂದು ರಸ್ತೆಪಕ್ಕದಲ್ಲಿ ಚೀನಾಬ್ ನದಿ ಹರಿಯುವುದನ್ನು ನೋಡಿದೆವು. ಬೆಟ್ಟಗಳ ಮಧ್ಯೆ ಇಕ್ಕಟ್ಟಾದ ಕಣಿವೆಯಲ್ಲಿ ರಭಸದಿಂದ ಹರಿಯುತ್ತಿತ್ತು ಆ ನದಿ. ಮಳೆ ನಿಂತಮೇಲೆ ಮಕ್ಕಲುಮಣ್ಣೆಲ್ಲಾ ಮಿಶ್ರಮಾಡಿ ತನ್ನೊಡಲೊಳಗೆ ಸೇರಿಸಿ ಭರದಿಂದ ಸಾಗುತ್ತಿತ್ತು. ಈಗ ಅದೆಲ್ಲ ಪಾಕೀಸ್ಥಾನವನ್ನು ಫಲವತ್ತಾಗಿ ಮಾಡುವುದಕ್ಕೆ !

ಹೀಗೆ ಬೆಳಿಗ್ಗೆ ಹತ್ತು ಘಂಟೆಯುವರೆವಿಗೂ ಹೋದ ಮೇಲೆ ರಾಮಬಾಣವೆಂಬ ಸಣ್ಣ ಗ್ರಾಮಕ್ಕೆ ಬಂದೆವು. ರಾಮಬಾಣವೆಂಬ ಹೆಸರು ಮನೋರಂಜಕವಾಗಿತ್ತು. ಆ ಹೆಸರು ಹೇಗೆ ಬಂದಿತೋ ಎಂದು ಆ ಬಸ್ಸಿನಲ್ಲಿದ್ದವರನ್ನು ವಿಚಾರಿಸಿದೆ. ಆದರೆ ಅವರಿಗೆ ಇದಾವುದೂ ತಿಳಿದಿರಲಿಲ್ಲ. ಹಿಂದೆ ಯಾರೋ ಒಬ್ಬ ದುಷ್ಟಸಿದ್ಧನೇನೊ, ಅವನನ್ನು ಸಂಹರಿಸಲು ರಾಮಬಾಣ ಬಿಟ್ಟ ಅಥವಾ ಸಿಕ್ಕಿದ ಸ್ಥಳವಿರಬಹುದು ಎಂದುಕೊಂಡೆ. ರಾಮಾಯಣದ ಹಿನ್ನಲೆಯನ್ನು ಮಧ್ಯೆ ಮಧ್ಯೆ ಕಾಶ್ಮೀರದಲ್ಲಿ ನೋಡಬಹುದು. ಅಂತೂ ಜಾಂಬವಂತನ ಸ್ಥಳ ನೋಡಿ ಆಯಿತು. ಸೀತಾಲಕ್ಷ್ಮಣ ಹನುಮಂತರ ಹೆಸರನ್ನು ಎಲ್ಲಿಯಾದರೂ ಕೇಳುತ್ತೇವೆಯೋ ಎಂದು ಹೋಗುತ್ತಿದ್ದೆವು. ಅಲ್ಲಿ ದಾರಿ ತುಂಬ ಕಡಿದಾಗಿತ್ತು. ಒಂದು ಕಡೆ ವೇಗವಾಗಿ ಹರಿಯುವ ಚೀನಾಬ್ ನದಿ, ಮತ್ತೊಂದು ಕಡೆ ಬಸ್ಸಿಗೆ ತಾಕುವಂತೆಯೇ ಬೆಟ್ಟದ ಗೋಡೆ. ಒಂದು ವೇಳೆ ಮಳೆ ಬಂದರೆ ಇದ್ದಕ್ಕಿದ್ದಂತೆಯೇ ರಸ್ತೆ ಪಕ್ಕದಲ್ಲಿರುವ ನುಣುಪಾದ ಸ್ಲೇಟಿನ ವರ್ಣದ ಕಲ್ಲುಗಳು ಉರುಳಿ ವಾಹನ ಸಂಚಾರಕ್ಕೆ ಆತಂಕವನ್ನು ತಂದೊಡ್ಡುವುವು. ಹಾಗೇನಾದರೂ ಒಮ್ಮೆ ಆದರೆ ಐದಾರು ಗಂಟೆಗಳು ಬೇಕು ಆ ಮಣ್ಣನ್ನು ಆಚೆಗೆ ದಬ್ಬಿ ಬಸ್ಸು ಮುಂದೆ ಹೋಗುವುದಕ್ಕೆ ದಾರಿಮಾಡಬೇಕಾದರೆ. ನಮ್ಮ ಬಸ್ಸನ್ನು ಯಾರೋ ದಾರಿಯಲ್ಲಿ ನಿಲ್ಲಿಸಿದರು. "ಮುಂದೆ ಒಂದು ಮೈಲಿ ಹೋದಮೇಲೆ ರಸ್ತೆ ಕುಸಿದಿದೆ. ವಾಹನವನ್ನು ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಬಿಡುವೆವು" ಎಂದರು. ಇದಕ್ಕೆ ಕಾರಣ ನೆನ್ನೆ ಹೀಗೆ ಒಂದು

ಮಿಲಿಟರಿ ಲಾರಿ ಹೋಗುತ್ತಿದ್ದಾಗ ಮೊಗಚಿಕೊಂಡು ಚೀನಾಬ್ ನದಿಗೆ ಬಿದ್ದು ಅದರಲ್ಲಿದ್ದ ಸುಮಾರು ಎಂಟು ಹತ್ತು ಸುರಿತ ಮಿಲಿಟರಿ ಅಧಿಕಾರಿಗಳು ನಾಶವಾದರಂತೆ. ನಮ್ಮ ಬಸ್ಸು ಡ್ರೈವರು ಇವನ ಮಾತನ್ನು ಕೇಳಿ "ನನ್ನ ಸ್ವಂತ ಜವಾಬ್ದಾರಿಯ ಮೇಲೆ ತೆಗೆದುಕೊಂಡು ಹೋಗುತ್ತೇನೆ" ಎಂದು ಬರೆದುಕೊಟ್ಟು ಮುಂದಕ್ಕೆ ಹೊರಟ. ಅಪಾಯಕರವಾದ ರಸ್ತೆಯಲ್ಲಿ ನೀನು ಹೇಗೆ ಹೋಗುವುದಕ್ಕೆ ಒಪ್ಪಿಕೊಂಡೆ ಎಂದು ಕೇಳಿದಾಗ "ಅಯ್ಯೋ ಇದು ಬೆಳಗೆದ್ದರೆ ಆಗುವ ದೃಶ್ಯ. ಇದಕ್ಕೆಲ್ಲಾ ಅಂಜುತ್ತಿದ್ದರೆ ಈ ರಸ್ತೆಯಲ್ಲಿ ಬಸ್ಸನ್ನು ನಡೆಸುವುದಕ್ಕೇ ಆಗುವುದಿಲ್ಲ" ಎಂದನು. ಅಂತೂ ಆ ರಸ್ತೆ ಎಡಗಡೆ ಕಡೆ ಹರಿಯುತ್ತಿದ್ದ ಚೀನಾಬ್ ನದಿಯನ್ನು ನೋಡಿದಾಗ ನನಗೇನೋ ಅಂಜಿಕೆಯಾಯಿತು. ಚೀನಾಬ್ ಮಹಾತಾಯಿ ಮಿಲಿಟರಿ ಮನುಷ್ಯರ ಜೀವನದ ಸವಿಯನ್ನು ನೆನ್ನೆ ನೋಡಿರುವಳು. ಯಾವಾಗ ಈ ಸಿವಿಲಿಯನ್ ನರಪಿಳ್ಳೆಗಳು ತನ್ನ ಬಾಯಿಗೆ ಬೀಳುವರೋ ಎಂದು ನಮ್ಮನ್ನು ನೋಡುತ್ತಿರುವಳೋ ಎಂದುಕೊಂಡೆ. ಬಸ್ಸು ಸ್ವಲ್ಪ ದೂರ ಹೋದಮೇಲೆ ನಿಂತಿತು. ರಸ್ತೆ ಮಧ್ಯದಲ್ಲಿ ಬೆಟ್ಟದ ಒಂದು ಪಕ್ಕ ಮೊಗಚಿಕೊಂಡು ಬಿದ್ದಿತ್ತು. ಯಾವ ವಾಹನವೂ ಅದನ್ನು ದಾಟಲು ಅಸಾಧ್ಯ. ಕೆಲವು ಅಂಗುಲ ಎಡಗಡೆ ಸರಿದರೂ ಹಸಿದ ಚೀನಾಬ್ ಮಾರಿ ಪಾಲೆ! ಕೆಲವು ಕೂಲಿಗಳ ತಂಡ ಬಂದು ಮಣ್ಣನ್ನು ಎತ್ತಲು ಮೊದಲುಮಾಡಿದರು. ಒಂದು ಬಸ್ಸು ಹೋಗುವುದಕ್ಕೆ ಸ್ವಲ್ಪ ದಾರಿ ಮಾಡಲು ಸುಮಾರು ಎರಡು ಘಂಟೆ ಹಿಡಿಯಿತು. ನಂತರ ನಿಧಾನವಾಗಿ ಹೋಗಿ ಬನಿಹಾಲ್—ಎಂಬ ಗ್ರಾಮ

ವನ್ನು ಸೇರಿದೆವು. ಸುಮಾರು ಒಂದು ಗಂಟೆಯಾಗಿತ್ತು. ಅಲ್ಲಿ ಊಟಮಾಡಿದ ಮೇಲೆ ಬಸ್ಸು ಪೀರ್‌ಪಾಜಲ್ ಎಂಬ ಹದಿನೇಳುಸಾವಿರ ಅಡಿ ಎತ್ತರವಿರುವ ಬೆಟ್ಟದ ಸಾಲನ್ನು ದಾಟಿ ಕೊಂಡು ಕಾಶ್ಮೀರದ ಕಣಿವೆಯೊಳಗೆ ಇಳಿಯಲು ಅನು ವಾಯಿತು.

ಬನಿಹಾಲ್‌ನಿಂದ ಪೀರ್‌ಗುಹೆಗೆ ಸುಮಾರು ಇಪ್ಪತ್ತು ಮೈಲಿಗಳು. ಬರೀ ಬೋಳು ಬೆಟ್ಟದ ಮೇಲೆ ಹೋಗಬೇಕು. ಚಳಿಗಾಲದಲ್ಲಿ ಈ ಬೆಟ್ಟವೆಲ್ಲಾ ನೀರ್ಗಲ್ಲಿನಿಂದ ಆವೃತವಾಗಿ ಶ್ರೀನಗರಕ್ಕೆ ಈ ಕಡೆಯಿಂದ ಹೋಗಲು ದಾರಿಯೇ ಇರು ವುದಿಲ್ಲ. ಏಪ್ರಿಲ್‌ನಿಂದ ಅಕ್ಟೋಬರಿಗೆ ಮಾತ್ರ ಇಲ್ಲಿಂದ ಹೋಗಬಹುದು. ಆದ್ದರಿಂದಲೇ ಪಾಕೀಸ್ಥಾನದ ಕಡೆಯಿಂದ ಕಾಶ್ಮೀರಕ್ಕೆ ವಿರೋಧಿಗಳು ಕಾಲಿಟ್ಟಾಗ ಇಂಡಿಯಾದೇಶದಿಂದ ಅತ್ತಲಾಕಡೆಗೆ ರಸ್ತೆ ಇಲ್ಲದೆ ಹೋಗಲು ತೊಂದರೆಯಾಗಿ ವಿಮಾನದಲ್ಲಿ ಸೈನಿಕರನ್ನು ಕಳುಹಿಸಬೇಕಾಯಿತು. ನಾನು ಹಲವಾರು ಘಾಟಿ ರಸ್ತೆಯಲ್ಲಿ ಪ್ರಯಾಣ ಮಾಡಿರುವೆನು. ಮೈಸೂರಿನಿಂದ ದಕ್ಷಿಣ ಕನ್ನಡ ಕಡೆಗೆ ಅಥವಾ ಸತ್ಯಮಂಗಲದ ಕಡೆ ಹೋಗಬೇಕಾದರೆ ಘಾಟಿ ರಸ್ತೆಯಲ್ಲಿ ಹೋಗಬೇಕು. ಉದಕಮಂಡಲಕ್ಕೆ ಹೋಗುವಾಗ ಘಾಟಿ ರಸ್ತೆಯಲ್ಲಿ ಹೋಗ ಬೇಕು. ಆದರೆ ಫೀರ್‌ಪಂಜಲ್ ಬೆಟ್ಟದ ಮೇಲೆ ಬಸ್ಸಿನಲ್ಲಿ ಹೋಗುವಾಗ ಸಿಕ್ಕುವ ದೃಶ್ಯ ಬೇರೆ ಕಡೆ ಸಿಕ್ಕುವುದಿಲ್ಲ. ಕಾಶ್ಮೀರ ಕಣಿವೆ ಇರುವುದು ಹಿಮಾಲಯ ಪರ್ವತದ ಕೊನೆಯ ಬೆಟ್ಟದ ಸಾಲು ಮತ್ತು ಫೀರ್‌ಪಂಜಲ್ ಪರ್ವತಸ್ತೋಮದ ಮಧ್ಯೆ. ಕೇವಲ ರಸ್ತೆಯಲ್ಲೇ ಹೋಗಬೇಕಾದರೆ ೧೯೦೦೦

ಅಡಿ ಬೆಟ್ಟವನ್ನು ಹತ್ತಿ ಇಳಿಯಬೇಕು. ಅದು ಅಸಾಧ್ಯವಾಗಿ ಸುಮಾರು ಹತ್ತುಸಾವಿರ ಅಡಿವರೆಗೆ ರಸ್ತೆಯಲ್ಲಿ ಸುತ್ತಿಸುತ್ತಿ ಹೋಗಿ ನಂತರ ಬೆಟ್ಟದ ಒಳಗೆ ಗುಹೆಯನ್ನು ಕೊರೆದು ಶ್ರೀನಗರ ಕಣಿವೆಯೊಳಗೆ ಕರೆದುಕೊಂಡು ಹೋಗುವರು. ಹತ್ತುವುದೊಂದು ರೋಮಾಂಚನಕಾರಿಯಾದ ಪ್ರಯಾಣ. ಹತ್ತುಸಾವಿರ ಅಡಿಯುವರೆಗೂ ಬೆಟ್ಟವನ್ನು ಸುತ್ತಿಸುತ್ತಿ ಹತ್ತುವೆವು. ಅಲ್ಲೊ ಎದುರಿಗೆ ಬರುವ ಮಿಲಿಟರಿ ಲಾರಿ ಚಸ್ಸಿನ ಕಾಟ ಹೇಳತೀರದು. ಆ ಇಕ್ಕಟ್ಟಾದ ರಸ್ತೆಯಲ್ಲಿ ದೊಡ್ಡ ದೊಡ್ಡ ಗೂಡ್ಸ್‌ಗಾಡಿಗಳಂತೆ ಲಾರಿಗಳ ಸಾಲು ಒಂದನ್ನೊಂದು ಎಡಬಿಡದೆ ಬರುತ್ತಿರುತ್ತವೆ. ಅಂತಹ ಕಡಿದಾದ ರಸ್ತೆಯಲ್ಲಿಯೂ ಅವರ ವೇಗ ಹೇಳತೀರದು. ನಿರ್ಲಕ್ಷ್ಯವಾಗಿ ವೇಗದಿಂದ ಹೋಗುವರು. ಇದು ನಮಗೆ ನಿರ್ಲಕ್ಷ್ಯವಾಗಿ ಕಾಣುವುದು. ಏಕೆಂದರೆ ಇಂತಹ ರಸ್ತೆಯಲ್ಲಿ ಹೋಗುವುದು ಅಪರೂಪ. ಆದರೆ ಯಾರು ನಿತ್ಯ ಇಲ್ಲಿ ಪ್ರಯಾಣ ಮಾಡುತ್ತಿರುವರೋ ಅವರಿಗೆ ಭಯಾನಕವೆಲ್ಲ ಅಳಿಸಿಹೋಗಿ ಸಾಮಾನ್ಯದೃಶ್ಯವಾಗಿದೆ. ನಮ್ಮ ಜೀವನದಲ್ಲೂ ಹೀಗೆ. ಸುಖವಾಗಿ ಯಾವ ಅಡ್ಡಿ ಆತಂಕಗಳೂ ಇಲ್ಲದೆ ನೆಮ್ಮದಿಯಿಂದ ಜೀವನ ನಡೆಸುತ್ತಿರುವವರೆಗೆ ಏನಾದರೂ ಒಂದು ಕಷ್ಟಬಂದರೂ ಪ್ರಪಂಚವೇ ಮುಳುಗಿಹೋದಂತೆ ಕಾಣುವುದು. ಆದರೆ ಯಾರು ನಿತ್ಯ ಕಷ್ಟ ಅಪಾಯ ಇವುಗಳ ಮಡುವಿನಲ್ಲಿ ಬೆಳೆದಿರುವರೋ ಅವರಿಗೆ ಇದು ಅಷ್ಟು ಮನಸ್ಸಿಗೆ ತಾಕುವುದಿಲ್ಲ. ಫೀರ್ ಪಂಜಲ್ ಸುರಂಗಮಾರ್ಗಕ್ಕೆ ಬಂದೆವು. ಹಿಂದುಗಡೆ ಕಾಶ್ಮೀರದ ಒಂದುಬಗೆಯ ದೃಶ್ಯ ಕೊನೆಗೊಂಡಿತು. ರಮ್ಯಕಾಶ್ಮೀರಕಣಿವೆ

ಯೊಳಗೆ ಹೋಗುವ ಸುರಂಗಮಾರ್ಗಕ್ಕೆ ಪ್ರವೇಶಿಸಿದೆವು. ಆ ಸುರಂಗಮಾರ್ಗ ೬೫೦ ಅಡಿಉದ್ದ ಹದಿನೈದುಅಡಿ ಅಗಲ ಎದೆ. ಒಳಗೆ ಹಿಮದಂತೆ ಶೀತಲವಾದ ನೀರು ಸುರಂಗದ ಹಲವಾರು ಕಡೆಯಿಂದ ಜಿನುಗುತ್ತಿತ್ತು. ಗಾಢಾಂಧಕಾರ ಸ್ವಲ್ಪ ಹೊತ್ತು. ನಂತರ ಗುಹೆಯ ಆಚೆಕಡೆ ಪ್ರವೇಶಿಸಿ ದೆವು. ಭೂಮಿಯಿಂದ ಸ್ವರ್ಗಲೋಕಕ್ಕೆಬಂದಂತೆ ಇತ್ತು. ಜಾಗ್ರತಾವಸ್ಥೆಯಲ್ಲಿದ್ದವನು ಮಲಗಿ ತಕ್ಷಣ ರಮ್ಯ ಸ್ವಪ್ನ ಲೋಕಕ್ಕೆ ಬಂದಂತೆ ಭಾಸವಾಯಿತು. ಇದೊಂದು ಅಲೌಕಿಕ ದೃಶ್ಯ. ಈ ಕಣಿವೆ ಸುಮಾರು ೬೦ ಮೈಲಿ ಉದ್ದ, ೮೦ ಮೈಲಿ ಅಗಲಎದೆ. ಇದೆಲ್ಲಾ ಹಿಂದೆ ಒಂದು ಸರೋವರವಾಗಿ ತ್ತಂತೆ. ಯಾರೋ ಒಬ್ಬ ಋಷಿ ಇದನ್ನು ಖಾಲಿಮಾಡಿದ ರಂತೆ. ಇದು ಇದ್ದರೂ ಇರಬಹುದು. ನಿಜವಾಗಿ ಋಷಿ ಇದನ್ನು ಖಾಲಿ ಮಾಡದೆ ಇದ್ದರೂ ಪ್ರಕೃತಿಯೇ ಕಾಶ್ಮೀರ ಕಣಿವೆ ಪಶ್ಚಿಮಕ್ಕೆ ಒಂದು ರಸ್ತೆಯನ್ನು ಮಾಡಿ ನೀರಿನ ಲೀಲೆಯನ್ನು ಕೊನೆಗಾಣಿಸಿ, ಅಲ್ಲಿ ನರಮನುಷ್ಯರ ಲೀಲೆಗೆ ಅಣಿಮಾಡಿದಳೆಂದು ತೋರುವುದು. ನೀರಿಗೊಂದು ಕಾಲ, ಕಾಡಿಗೊಂದು ಕಾಲ, ಮನುಷ್ಯರಿಗೊಂದು ಕಾಲತಾನೆ. ಸೃಷ್ಟಿ ನಾಟಕದಲ್ಲಿ ಎರಡು ಅಂಕಗಳಾದ ಮೇಲೆ ಮೂರನೆ ಅಂಕದಲ್ಲಿ ಮನುಷ್ಯನಾಟ. ಅವನ ಅಳು, ನಗು, ಸೋಲು, ಗೆಲವು, ಸುಖ, ದುಃಖ ಆದಮೇಲೆ ಪುನಃ ಮರುಳೋ ಕಾಡೋ ತುಂಬ ಬಹುದು. ಬಹುಶಃ ಮರಳಿನ ಅಂಕ ನಾಲ್ಕನೆಯದಿರಬಹುದು. ಮನುಷ್ಯ ಅತಿ ಆಸೆಯಿಂದ ಭೂಮಿಯ ಸಾರವನ್ನೆಲ್ಲಾ ಹೀರಲು ಯತ್ನಿಸಿ, ಅಲ್ಲಿರುವ ಗಿಡಮರಗಳನ್ನೆಲ್ಲಾ ನಿರ್ಮೂಲ

ಮಾಡುತ್ತಾ ಬಂದು ಕೊನೆಗೆ ತಾನು ಕುಳಿತುಕೊಂಡಿರುವ ಕೊಂಬೆಯನ್ನೇ ಕಡಿದುಕೊಂಡು ಬೀಳುವನು. ಈಗಿನ ಸಹರಾಮರುಭೂಮಿ ಬಹಳ ಹಿಂದೆ ಫಲವತ್ತಾದ ದೇಶವಾಗಿತ್ತಂತೆ. ಈಗೆಲ್ಲಾ ಮರುಳು ಕಾಡಾಗಿರುವುದು. ಅದು ನಾಲ್ಕನೇ ಅಂಕ. ಅಲ್ಲೆಲ್ಲಾ ಮೌನ ಇರುವುದು. ಮನುಷ್ಯನ ಅಟ್ಟಹಾಸವನ್ನು ನೋಡಿ ನಗುತ್ತಿರುವುದು. ಆದರೆ ಕಾಶ್ಮೀರ ಕಣಿವೆ ಇರುವುದು ಮೂರನೆ ಅಂಕದಲ್ಲಿ. ಕಾಶ್ಮೀರದಲ್ಲೆಲ್ಲಾ ಅತ್ಯಂತ ಫಲವತ್ತಾದ ಪ್ರದೇಶ ಈ ಕಣಿವೆ. ಜನಸಂದಣಿ ಹೆಚ್ಚಾಗಿರುವುದು ಕೂಡ ಇಲ್ಲೆ. ಅರ್ಧಕ್ಕಿಂತ ಹೆಚ್ಚು ಜನ ಇಲ್ಲಿರುವರು. ಜೀಲಂ ನದಿ ಹಿಮಾಲಯದಿಂದ ಬಂದು ಡೊಂಕುಡೊಂಕಾಗಿ ಈ ಕಣಿವೆಯಲ್ಲಿ ಹರಿದು ಪಾಕೀಸ್ಥಾನಕ್ಕೆ ಹೋಗುವುದು. ನದಿಯ ಇಕ್ಕೆಲದಲ್ಲಿಯೂ ಭತ್ತದ ಪೈರು. ಹಲವು ಬಗೆ ಹಣ್ಣಿನ ಗಿಡಗಳು. ನೆಲದ ಮೇಲೆ ಎಲ್ಲಿ ನೋಡಿದರೂ ಬಗೆಬಗೆಯ ಹೂವಿನ ಗಿಡಗಳು. ಸ್ವಲ್ಪ ದೂರದಲ್ಲಿಯೇ ಹಿಮಾಲಯದ ಪರ್ವತಸ್ತೋಮದ ಹಿನ್ನಲೆ. ವಿರಾಟ್ ರಂಗ ಭೂಮಿಯನ್ನು ಪ್ರಕೃತಿ ಮನುಷ್ಯನಿಗೆ ನಿರ್ಮಿಸಿದಂತೆ ಇತ್ತು. ಬಸ್ಸಿನಿಂದ ಕೆಳಗಿರುವ ದೃಶ್ಯವನ್ನು ನೋಡುವಾಗ ವಿಮಾನದಿಂದ ಕೆಳಗೆ ಕಾಣುವ ದೃಶ್ಯದಂತೆ ಇತ್ತು. ಕಾಶ್ಮೀರ ಕಣಿವೆ ಇರುವುದು ಐದುಸಾವಿರ ಅಡಿಗಳ ಎತ್ತರದಲ್ಲಿ. ಹತ್ತುಸಾವಿರ ಅಡಿಗಳಿಂದ ಐದುಸಾವಿರ ಅಡಿಗಳವರೆವಿಗೂ ಇಳಿದೆವು. ನಂತರ ಸರಳರೇಖೆಯಂತಿರುವ ರಸ್ತೆಯಲ್ಲಿ ಬಸ್ಸು ವೇಗದಿಂದ ಓಡಲು ಮೊದಲಾಯಿತು. ಸ್ವಲ್ಪವೂ ಏರುಇಳಿತಗಳಿಲ್ಲ. ಇಲ್ಲಿಂದ ಶ್ರೀನಗರಕ್ಕೆ ದಾರಿಯ ಇಕ್ಕೆಡೆಗಳಲ್ಲಿಯೂ ಪಾಪ್ಲರ್ ಮರಗಳು

ನೇರವಾಗಿ ಆಕಾಶಕ್ಕೆ ಏರುವುವು. ಹೋಗುವಾಗ ದಾರಿಯಲ್ಲಿ ಸಿಕ್ಕಿದ ಒಂದು ಪ್ರೇಕ್ಷಣೀಯ ದೃಶ್ಯವೇ ಅವಂತಿಪುರ. ಇದೊಂದು ಹಾಳೂರು. ಮೇಲೆ ಮುಚ್ಚಿ ಹೋದ ಮಣ್ಣನ್ನು ತೆಗೆದು ಒಂದು ಪಾಳುಬಿದ್ದ ಗುಡಿ ಕಣ್ಣಿಗೆ ಕಾಣುವಂತೆ ಮಾಡುವರು. ಅತಿ ಸುಂದರವಾದ ಶಿಲ್ಪ ಕಲೆ ಇದೆ. ಈ ಪುರವನ್ನು ಅವಂತಿವರ್ಮ ಎನ್ನುವನು ಕ್ರಿ. ಶ. ೯ನೇ ಶತಮಾನ ದಲ್ಲಿ ಕಟ್ಟಿದ ಎನ್ನುತ್ತಾರೆ. ಇದು ಕಣ್ಣಿಗೆ ಕಾಣದೆ ಹೂತು ಹೋಗಿದ್ದುದರಿಂದ ಮಹಮ್ಮದೀಯರು ಹಾಗೇ ಬಿಟ್ಟರು ಎಂದು ಕಾಣುವುದು. ಹಾಗೇನಾದರೂ ಇದು ಅವರ ಕಣ್ಣಿಗೆ ಕಾಣು ತ್ತಿದ್ದರೆ, ಇಲ್ಲಿಯ ಕಲ್ಲುಗಳನ್ನು ತೆಗೆದುಕೊಂಡುಹೋಗಿ ಒಂದು ಮಸೀತಿಗೆ ಹಾಕುತ್ತಿದ್ದರು. ಅದು ಸಾಧ್ಯವಿಲ್ಲದೆ ಇದ್ದರೆ ಇದರ ವಿಗ್ರಹಗಳನ್ನು ಭೇದಿಸಿ ಇದನ್ನೇ ಒಂದು ಮಸೀತಿ ಮಾಡುತ್ತಿದ್ದರು. ಅವಂತಿಪುರದ ಹೆಸರನ್ನು ಕೇಳಿ ನನ್ನ ಮನಸ್ಸಿಗೆ ಹಲವು ದೃಶ್ಯಗಳು ಬಂದುವು. ಕಥಾಸರಿತ್ ಸಾಗರ, ಬೃಹತ್ ಜಾತಕ ಮುಂತಾದುವಲ್ಲಿ ಇಂತಹ ಹೆಸರು ಎಷ್ಟು ಬರು ವುದೋ, ಆ ಬಣ್ಣಬಣ್ಣದ ಕಥೆಗಳ ಆಧಾರವಾದ ಆ ಊರು ಹಿಂದೆ ಅಭ್ಯುದಯ ಕಾಲದಲ್ಲಿ ಎಷ್ಟು ಸುಂದರವಾಗಿತ್ತೊ ಎಂದು ಊಹಿಸಿದೆ. ಇಂತಹ ಹೆಸರುಗಳು ಈಗ ಸಿಕ್ಕುವುದೇ ಅಪರೂಪ. ಆ ಹೆಸರೇ ಕೇಳುವುದಕ್ಕೆ ಆನಂದದಾಯಕ ವಾಗಿತ್ತು.

ಜುಲೈ ೨೨ನೇ ಸಾಯಂಕಾಲ ಏಳು ಘಂಟೆಯ ಹೊತ್ತಿಗೆ ಶ್ರೀನಗರವನ್ನು ಸೇರಿದೆವು. ಮಾರನೆ ಎರಡು ದಿನಗಳು ಶ್ರೀನಗರ ಮತ್ತು ಸುತ್ತಮುತ್ತಲಿರುವ ಸ್ಥಳಗಳನ್ನು

ನೋಡಿದೆವು. ಶ್ರೀನಗರವೆಂದರೆ ಸಂಪತ್ತಿನ ನಗರ. ಅಶೋಕ ಈ ಪಟ್ಟಣವನ್ನು ಕಟ್ಟಿದ ಎನ್ನುತ್ತಾರೆ. ಜೇಲಂ ನದಿಯ ಎರಡು ತೀರದಲ್ಲಿಯೂ ನಗರ ಹಬ್ಬಿದೆ. ಎರಡು ದಡವನ್ನು ಸೇರಿಸುವುದಕ್ಕೆ ಏಳು ಕಡೆ ಸೇತುವೆ ಕಟ್ಟಿರುವರು. ಜನಸಂಖ್ಯೆ ಸುಮಾರು ಎರಡೂವರೆ ಲಕ್ಷ. ನಗರದ ಒಂದು ಕಡೆ ಶಂಕರಾಚಾರ್ಯರ ಬೆಟ್ಟವಿದೆ. ಮತ್ತೊಂದು ಕಡೆ ಹರಿಪರ್ವತವೆಂಬ ಸಣ್ಣ ಗುಡ್ಡವಿದೆ. ಇದರ ಮಧ್ಯೆ ಜೇಲಂ ನದಿ ಹರಿಯುತ್ತಿದೆ. ನಗರದ ಉತ್ತರಕ್ಕೆ ಹಲವು ಉದ್ಯಾನವನಗಳು ಇವೆ. ನಗರ ನೋಡುವುದಕ್ಕೆ ಸುಂದರವಾಗಿದೆ. ಚೀನಾಬ್ ಮರಗಳು ನೋಟಕ್ಕೆ ಒಂದು ಆನಂದ. ಬೇಕಾದಷ್ಟು ದೋಣಿಗಳಿಂದ ತುಂಬಿದೆ ಜೇಲಂ ನಾಲೆ.

ಇಲ್ಲಿ ಪ್ರೇಕ್ಷಕರು ಹಲವರು ವಾಸಿಸುವುದು ದೋಣಿಯ ಮನೆಗಳಲ್ಲಿ. ಅಂದರೆ ದೋಣಿಯೊಳಗೆ ಎಲ್ಲಾ ಸೌಕರ್ಯಗಳೂ ಇರುವುವು. ಸ್ನಾನದ ಮನೆ, ಊಟದ ಮನೆ, ಮಲಗಿಕೊಳ್ಳುವ ಮನೆ, ಜೊತೆಗೆ ರಾತ್ರಿ ಹೊತ್ತು ವಿದ್ಯುದ್ದೀಪಗಳು ಬೇರೆ ಇರುವುವು. ದಡದಿಂದ ವಿದ್ಯುತ್ ಶಕ್ತಿಯನ್ನು ತಂತಿಗಳ ಮೂಲಕ ತೆಗೆದುಕೊಳ್ಳುವರು. ಜೊತೆಗೆ ರೇಡಿಯೋ ಬೇರೆ ಇಟ್ಟುಕೊಳ್ಳಬಹುದು. ದೋಣಿಯ ಜೀವನ ಬೇಜಾರಾದರೆ, ಜಗದ ಗಡಿಬಿಡಿಯ ಬಾಗಿಲನ್ನು ತೆರೆದು ಆ ರೇಡಿಯೋ ಮೂಲಕ ಬರುವ ಅನಾಹತ ಧ್ವನಿಗಳನ್ನು ಕೇಳಿ ಸಂತೋಷ ಪಡಬಹುದು! ಒಂದು ತಿಂಗಳಿಗೆ ಒಂದು ನೂರು ರೂಪಾಯಿಯಿಂದ ಐದುನೂರು ರೂಪಾಯಿಗಳವರೆವಿಗೂ ದೋಣಿ ಬಾಡಿಗೆಗೆ ದೊರಕವುವು. ಎಲ್ಲಿ ಬೇಕಾದರೂ ದೋಣಿಯಮೇಲೆ

ಹೋಗಬಹುದು ಜೇಲಂ ನದಿಯ ಮೇಲೆ ಡಾಲ್ ಸರೋವರದ ಮೇಲೆ ಸುತ್ತಲೂ ನೋಡುತ್ತಾ ನಿಧಾನವಾಗಿ ತೇಲಬಹುದು.

ಶ್ರೀನಗರದ ಊರಿನ ಹೊರಗೆ ಸರೋವರದ ತೀರದಲ್ಲಿ ಹಲವು ಉದ್ಯಾನವನಗಳಿವೆ. ಅವುಗಳಲ್ಲಿ ಶಾಲಿಮಾರ್ ಉದ್ಯಾನ ವನ ನಮ್ಮ ಬೃಂದಾವನದಂತಿದೆ. ಆದರೆ ಇಲ್ಲಿಯಷ್ಟು ವೈವಿಧ್ಯತೆಯಾಗಲೀ, ವಿದ್ಯುದಾಲಂಕಾರವಾಗಲೀ ಇಲ್ಲ. ಹಿಂದೆ ಮೊಗಲರ ಕಾಲದಲ್ಲಿ ರಚನೆ ಹೇಗಿತ್ತೋ ಹಾಗೆಯೇ ಇದೆ. ಈ ಉದ್ಯಾನವನಗಳನ್ನು ನೋಡುವುದಕ್ಕೆ ಹೋಗಿದ್ದಾಗ ಜೊತೆಗೆ ಒಂದು ಸಂಸಾರ ಬಂದಿತು.- ಒಟ್ಟು ಐದು ಉದ್ಯಾನ ವನಗಳನ್ನು ನೋಡಿದೆವು. ಪ್ರತಿ ಉದ್ಯಾನವನದಲ್ಲಿಯೂ ಅವರು ಏನನ್ನಾದರೂ ತಿನ್ನದೆ ಇರಲಿಲ್ಲ. ದೊಡ್ಡ ಬುಟ್ಟಿಯಲ್ಲಿ ತಿಂಡಿ, ದೊಡ್ಡ ಥರ್ಮಾಸ್ ಫ್ಲಾಸ್ಕಿನಲ್ಲಿ ಟೀ ತಂದಿದ್ದರು. ಪ್ರತಿ ಪಾರ್ಕಿಗೂ ಹೋಗುವರು. ಆಳು ಜಮಖಾನ ಹಾಸುವನು. ಇವರು ತಿಂಡಿ ಗಂಟು ಬಿಚ್ಚುವರು, ತಿನ್ನುವರು, ಚಾ ಕುಡಿಯು ವರು, ನಂತರ ಪಾನ್ ಅಗಿಯುವರು. ಒಂದು ಉದ್ಯಾನ ನೋಡುವುದಕ್ಕೂ ಮತ್ತೊಂದು ನೋಡುವುದಕ್ಕೂ ಕಾಲದ ಅಂತರ ಅರ್ಧ ಗಂಟೆ ಇರಬಹುದು. ಆದರೂ ಅಂತಹ ಸುಂದರ ಸ್ಥಳಕ್ಕೆ ಹೋಗಿ, ಅಲ್ಲಿ ಏನೂ ತಿನ್ನದೆ ಬಂದರೆ ಕಾಲವೃಥಾ ಹರಣವಾಗುವುದೆಂದು ಅವರ ಭಾವನೆ. ಅವರ ಪಾಲಿಗೆ ಸೌಂದರ್ಯ ಹೊಟ್ಟೆಬಾಕತನವನ್ನು ಪ್ರಚೋದಿಸುವುದಕ್ಕೆ ಆಯಿತೇ ಹೊರತು ಅವರನ್ನು ಸೌಂದರ್ಯದಲ್ಲಿ ಮೈಮರೆಯು ವಂತೆ ಮಾಡಲು ಆಗಲಿಲ್ಲ. ಐದು ಉದ್ಯಾನವನಗಳನ್ನು ನೋಡಿ ಆದ ಮೇಲೂ ಅವರ ತಿಂಡಿಯ ಗಂಟು ಬರಿಯದಾಗ

ಲಿಲ್ಲ! ಆಳು ಅದನ್ನು ಇನ್ನು ಶ್ರೀನಗರಕ್ಕೆ ಹೊತ್ತುಕೊಂಡು ಹೋಗುತ್ತಿದ್ದನು.

ಅಂದಿನ ಸಂಜೆ ಡಾಲ್ ಸರೋವರದಲ್ಲಿ ದೋಣಿಯ ಮೇಲೆ ಸ್ವಲ್ಪ ದೂರ ಹೋದೆವು. ಅತಿ ತಿಳಿಯಾದ ನೀರು. ನೀರಿನಲ್ಲಿ ಹಲವು ವಿಧವಾದ ನೀರಿನ ಸಸ್ಯಗಳು ಬೆಳೆದಿದ್ದುವು. ನೀರಿನ ಸಸ್ಯಗಳ ಒಂದು ವಸ್ತುಪ್ರದರ್ಶನ ಶಾಲೆಯಂತಿತ್ತು ಡಾಲ್ ಸರೋವರ

ಮಾರನೆದಿನದ ಬೆಳಿಗ್ಗೆ ಶಂಕರಾಚಾರ್ಯರ ಬೆಟ್ಟಕ್ಕೆ ಹೋದೆವು. ಮೈಸೂರು ನಗರದ ಸಮೀಪದಲ್ಲಿ ಚಾಮುಂಡಿ ಬೆಟ್ಟದಂತಿದೆ. ಸುಮಾರು ಚಾಮುಂಡಿಬೆಟ್ಟದ ಅರ್ಧದಷ್ಟು ಇರಬಹುದು. ಮೇಲಿನಿಂದ ಶ್ರೀನಗರ, ಜೀಲಂನದಿ, ಡಾಲ್ ಸರೋವರ, ಮತ್ತು ಡಾಲ್ ಸರೋವರದಲ್ಲಿ ಪ್ರತಿಬಿಂಬಿಸುತ್ತಿರುವ ದೂರದಲ್ಲಿರುವ ಹಿಮಾಲಯ ಪಂಕ್ತಿ ನೋಡಲು ಕಣ್ಣಿಗೆ ಒಂದು ಹಬ್ಬ. ಸ್ವಲ್ಪದೂರ ಸರೋವರದಮೇಲೆ ಸಸ್ಯಗಳು ತೇಲುವಂತೆ ಕಂಡವು. ಅದನ್ನು ತೇಲುವ ತೋಟ ಎನ್ನುವರು. ಅಂದರೆ ಬಿದಿರಿನಲ್ಲಿ ಒಂದು ದೊಡ್ಡ ಚಾಪೆಯನ್ನು ಹೆಣೆದು ಅದರ ಮೇಲೆ ಸ್ವಲ್ಪ ಮಣ್ಣನ್ನು ಹರಡಿ ತೇಲಿ ಬಿಡುವರು. ಆ ಮಣ್ಣಿನ ಮೇಲೆ ಹಲವು ತರಕಾರಿ ಬೀಜಗಳನ್ನು ಹಾಕುವರು. ಅದು ಕ್ರಮೇಣ ಮೊಳೆತು ಸಸಿಗಳಾಗಿ ನೀರಿನಮೇಲೆ ತೇಲುತ್ತಾ ಇರುವುವು. ಅವು ಫಲಕ್ಕೆ ಬಂದೊಡನೆಯೇ ದೋಣಿಯಲ್ಲಿ ಹೋಗಿ ಅವನ್ನು ಬಿಡಿಸಿಕೊಂಡು ಬರುವರು. ಇದೊಂದು ನವೀನ ದೃಶ್ಯ ನಮಗೆ. ಸಾಧಾರಣವಾಗಿ ನೆಲದಮೇಲೆ ನೀರನ್ನು ಹರಿಸಿಕೊಂಡು ತರಕಾರಿ ಬೆಳೆಯುವೆವು.

ಇಲ್ಲಿ ನೆಲವನ್ನೇ ನೀರಿಗೆ ತೆಗೆದುಕೊಂಡು ಹೋಗಿ ಬೆಳೆ ತೆಗೆಯು ವರು!

ಇದನ್ನು ಶಂಕರಾಚಾರ್ಯ ಬೆಟ್ಟ ಎನ್ನುವುದಕ್ಕೆ ಕಾರಣ ವೇನೊ ತಿಳಿಯದು. ಶಂಕರಾಚಾರ್ಯ ಬೆಟ್ಟದಮೇಲೆ ಒಂದು ಶಿವನ ದೇವಸ್ಥಾನವಿದೆ. ಇದನ್ನು ಗೋಪಾದಿತ್ಯನೆಂಬುವನು ಕ್ರಿ. ಪೂ. ನಾಲ್ಕನೇ ಶತಮಾನದಲ್ಲಿ ಕಟ್ಟಿದ ಎನ್ನುತ್ತಾರೆ. ಆ ದೇವಸ್ಥಾನವನ್ನು ನೋಡಿದರೆ ಎಲ್ಲೋ ಕಳೆದು ಎರಡು ಮೂರು ಶತಮಾನಗಳ ಹಿಂದೆ ಕಟ್ಟಿದಂತೆ ಕಾಣುವುದು. ಶಂಕರಾ ಚಾರ್ಯರು ಅಲ್ಲಿಗೆ ಹಿಂದೆ ಯಾವಾಗಲೊ ಬಂದಿದ್ದರಂತೆ. ಅವರು ಬಂದು ಹೋದಮೇಲೆ ಅವರ ಜ್ಞಾಪಕಾರ್ಥವಾಗಿ ಆ ದೇವಸ್ಥಾನವನ್ನು ಕ್ರಿ. ಪೂ. ನಾಲ್ಕನೇ ಶತಮಾನದಲ್ಲಿ ಕಟ್ಟಿ ದರು ಎನ್ನುವರು. ಆದರೆ ಚಾರಿತ್ರಿಕದೃಷ್ಟಿಯಿಂದ ನೋಡಿದರೆ ಶಂಕರಾಚಾರ್ಯರ ಕಾಲ ಕ್ರಿ. ಶ. ಎಂಟನೇ ಶತಮಾನದಲ್ಲಿ. ಅಂತೂ ಚರಿತ್ರೆ, ಪುರಾಣಗಳ ಕಲಸುಮೇಲೋಗರ. ಭಾರತೀಯ ರಲ್ಲಿ ಚಾರಿತ್ರಿಕದೃಷ್ಟಿಯ ಅಭಾವ ತಲೆಎತ್ತಿ ಕಾಣುವುದು. ಸ್ವಲ್ಪ ಹಿಂದಿನದು ಆಯಿತು ಎಂದರೆ ಆಗಲೆ ಅದು ಕ್ರಿ. ಪೂ. ಕ್ಕೆ ಹೊರಟುಹೋಗುವುದು! ಗತಕಾಲದ ವೈಭವವನ್ನು ಮೆಲಕು ಹಾಕುವುದರಲ್ಲಿ ನಿಸ್ಸೀಮರು ತಾನೆ ನಾವು. ಎಲ್ಲಾ ಹಿಂದೆ ಇತ್ತು. ಸ್ವರ್ಣಯುಗ, ರಾಮರಾಜ್ಯ, ಆಗಿಹೋಯಿತು. ಎಷ್ಟು ಹಿಂದೆ ಹೋದರೆ ಅಷ್ಟು ಪವಿತ್ರವೆನ್ನುವುದು ನಮ್ಮ ಮನೋಭಾವ.

ಹೇಗಾದರೂ ಆಗಲಿ ಹಿಂದೆ ಶಂಕರಾಚಾರ್ಯರು ಇಲ್ಲಿಗೆ ಬಂದಿದ್ದರು ಎಂಬ ಸ್ಥಳಪುರಾಣವನ್ನು ಕೇಳಿದಾಗ ಮೈ

ರೋಮಾಂಚವಾಗುವುದು. ಶಂಕರಾಚಾರ್ಯರು ಬದುಕಿದ್ದು ಮೂವತ್ತೆರಡು ವರ್ಷವಂತೆ. ಅದರೊಳಗೆ ಅವರು ಶಾಸ್ತ್ರ ಓದಿದರು, ಸಾಧನೆಮಾಡಿದರು, ಸಿದ್ಧಿ ಪಡೆದರು. ವಿರೋಧಿ ಪಂಗಡ ಗಳೊಂದಿಗೆ ಹೋರಾಡಿದರು. ಭರತಖಂಡದ ನಾಲ್ಕು ಮೂಲೆ ಯಲ್ಲೂ ನಾಲ್ಕು ಮಠಗಳನ್ನು ಸ್ಥಾಪನೆಮಾಡಿದರು. ಹಿಮಾಲಯ ದ ಒಡಲಿನಲ್ಲಿರುವ ಬದರೀನಾರಾಯಣಕ್ಕೂ ಹೋದರು. ಶ್ರೀನಗ ರದ ಹತ್ತಿರವಿರುವ ಬೆಟ್ಟಕ್ಕೂ ಬಂದಿದ್ದರು, ಎಂದರೆ ನಮಗೆ ಊಹಿಸಲೂ ಅಸಾಧ್ಯವಾಗುವುದು. ದಕ್ಷಿಣದ ಮಲಬಾರಿನಲ್ಲಿ ಹುಟ್ಟಿದರು. ಆಗಿನ ಕಾಲದಲ್ಲಿ ವಾಹನ ಸೌಕರ್ಯಗಳಿರಲಿಲ್ಲ. ಬಸ್ಸು, ರೈಲು, ವಿಮಾನದ ಯುಗವಲ್ಲ. ಆಗ ಭರತಖಂಡ ವನ್ನೆಲ್ಲಾ ಪ್ರಯಾಣಮಾಡಿ, ತನ್ನ ಪ್ರತಿಭೆಯನ್ನು ಬೀರಿ, ಹಿಂದೂ ಧರ್ಮದ ಕಳೆಗಳನ್ನು ಕಿತ್ತು ಜೀವತುಂಬಿದರು ಎಂದರೆ ಎಂತಹವನಿಗಾದರೂ ಅದ್ಭುತ ಪ್ರಸಂಗವಿದು.

ಶಂಕರಾಚಾರ್ಯರ ದೇವಸ್ಥಾನದಲ್ಲಿ ಶಿವಸದರ್ಶನವಾದ ಮೇಲೆ ಅಲ್ಲಿ ಒಂದು ಬಂಡೆಯಮೇಲೆ ಕುಳಿತುಕೊಂಡು ಕೆಳ ಗಿರುವ ಶ್ರೀನಗರವನ್ನು ನೋಡುತ್ತಿದ್ದೆ. ಹಲವು ಸಿಪಾಯಿ ಗಳು ಪಂಗಡ ಪಂಗಡವಾಗಿ ದೇವಸ್ಥಾನಕ್ಕೆ ಬಂದು ಹೋಗು ತ್ತಿದ್ದರು. ಶ್ರೀನಗರದಲ್ಲಿ ಘರ್ಷಣೆ ಪ್ರಾರಂಭವಾದಮೇಲೆ ಭರತಖಂಡದ ಸೇನೆಯ ದೊಡ್ಡದೊಂದು ಕೇಂದ್ರ ಇಲ್ಲಿರುವುದು. ಇಲ್ಲಿ ಭರತಖಂಡದಲ್ಲಿ ಹಲವು ಭಾಷೆ ಮಾತನಾಡುವವರೆಲ್ಲ ಸಿಕ್ಕುವರು. ಬಂಗಾಳಿಯವರಾಯಿತು, ಮರಾಠಿಯವರಾಯಿತು, ಹಿಂದೂಸ್ಥಾನಿಯವರಾಯಿತು, ತಮಿಳು, ಮಲೆಯಾಳ, ತೆಲುಗು ಮಾತನಾಡುವವರೂ ಸಿಕ್ಕಿದರು. ಹಾಗೆ ಕುಳಿತುಕೊಂಡಿದ್ದಾಗ

ಬೆಂಗಳೂರು ಕಡೆಯಿಂದ ಒಬ್ಬ ಕನ್ನಡ ಮಾತನಾಡುವವನು ಸಿಕ್ಕಿದನು. ಎಲ್ಲಾ ದೇಶ, ಭಾಷೆ, ಮತದವರನ್ನು ಇಲ್ಲಿ ಸ್ವಲ್ಪ ಹೊತ್ತು ಕುಳಿತುಕೊಂಡು ನೋಡಿದ್ದಾಯಿತು.

ಶ್ರೀನಗರದಲ್ಲಿ ಹಲವಾರು ಹೋಟೆಲ್‌ಗಳಿವೆ. ಅಲ್ಲಿ ಪಾಳೆಯ ಬಿಟ್ಟಿರುವ ಸಿಪಾಯಿಗಳಲ್ಲಿ ಹಲವರು ದಕ್ಷಿಣಕ್ಕೆ ಸೇರಿದವರು. ಆ ಸಿಪಾಯಿಗಳ ಮನೋರಂಜನೆಗೆಂದೊ, ಲಾಭದೆಸೆಯಿಂದಲೋ ಮಸಾಲೆದೋಸೆ ಮುಂತಾದುವನ್ನು ಮಾಡುವುದನ್ನು ಕಲಿತುಕೊಂಡಿರುವರು. ಪ್ರತಿಯೊಂದು ಹೋಟೆಲ್‌ನ ಮುಂದುಗಡೆಯೂ ದೊಡ್ಡ ದೊಡ್ಡ ಅಕ್ಷರಗಳಲ್ಲಿ ದಾಕ್ಷಿಣಾತ್ಯದ ತಿಂಡಿಯನ್ನು ಬರೆದಿರುವರು. ಪಾಪ! ತಮ್ಮ ದೇಶವನ್ನು ರಕ್ಷಿಸಿದ ಭಾರತೀಯ ಸಿಪಾಯಿಗಳ ಮನೋರಂಜನೆಗೆ ಇರಬೇಕು! ಶ್ರೀನಗರ ನೋಡುವುದಕ್ಕೆ ಸುಂದರವಾಗಿದೆ. ಈ ಸೌಂದರ್ಯಕ್ಕೆ ಕಾರಣ ಪ್ರಕೃತಿಯ ಹಿನ್ನೆಲೆ. ಇಲ್ಲಿರುವ ಮರಗಿಡಗಳು, ಹಿಮಾಲಯಪಂಕ್ತಿ, ಜೀಲಂ ನದಿ, ಹಲವು ಸರೋವರ, ಉದ್ಯಾನವನ ಇವು ಪ್ರೇಕ್ಷಕರಿಗೆ ತುಂಬಾ ಸಂತೋಷದಾಯಕವಾಗಿದೆ. ಮೊಗಲರ ಬೇಸಗೆಯ ಕ್ರೀಡಾವನವಾಗಿತ್ತು. ಜಹಾಂಗೀರ್ ತನ್ನ ವಿಲಾಸಕ್ಕೆ ನಿಶಾತ್ ಬಾಗ್ ಮತ್ತು ಶಾಲಿಮಾರ್ ಉದ್ಯಾನವನಗಳನ್ನು ಕಟ್ಟಿದನು. ಅದರಲ್ಲಿ ಹಲವು ಬಗೆಯ ಕೃತಕ ಬುಗ್ಗೆಗಳು ಇರುವದು. ಮಹಮ್ಮದೀಯರಿಗೆ ಎಲ್ಲಿ ಹೋದರೂ ಈ ಕೃತಕ ಬುಗ್ಗೆಗಳನ್ನು ಕಂಡರೆ ತುಂಬಾ ಪ್ರೀತಿ. ಬಹುಶಃ ಇದಕ್ಕೆ ಕಾರಣ, ಅವರು ಅರಬ್ಬಿದೇಶದಲ್ಲಿ ಹುಟ್ಟಿರುವುದು ಎಂದು ಕಾಣುವುದು. ಮರಳು ಕಾಡಿನಲ್ಲಿ ಮಳೆ ಅಪರೂಪ. ಸರೋವರ ಎಲ್ಲೊ ಅಲ್ಲೊಂದು

ಇಲ್ಲೊಂದು ಇರುವುದು. ಯಾವಾಗಲೂ ಅವರಿಗೆ ನೀರಿನ ಮೇಲೆ ಪ್ರೀತಿ. ಯಾವದು ಮನುಷ್ಯನಿಗೆ ಅತ್ಯಂತ ಅವಶ್ಯಕವೋ ಅದು ಅಭಾವವಾಗಿರುವಾಗ ಸಮಯ ಸಿಕ್ಕಿದೊಡನೆಯೇ ಅದನ್ನು ಪಡೆಯಲು ಯತ್ನಿಸುವನು. ಅದು ಮೊದಲು ಕಲ್ಪನೆಯ ಮೂಲಕ ಬರಬಹುದು. ನಂತರ ವಾಸ್ತವಿಕ ಪ್ರಪಂಚದಲ್ಲಿಯೂ ನೋಡಬಹುದು. ಆದಕಾರಣವೆ ಮಹಮ್ಮದೀಯರ ಸ್ವರ್ಗಗಲ್ಲಿ ಎಲ್ಲಿ ನೋಡಿದರೂ ನೀರು, ಚಿಲುಮೆ, ಕೃತಕ ಬುಗ್ಗೆಗಳು, ಉದ್ಯಾನವನಗಳು ಎಂದು ಚಿತ್ರಿಸುವರು ಭರತಖಂಡದಲ್ಲಿ ಈಗಲೂ ಅವರಿಗೆ ಸಂಬಂಧಪಟ್ಟ ಮಸೀತಿ. ಅರಮನೆ, ಉದ್ಯಾನವನ ಇದನ್ನು ನೋಡಿದರೆ ನೀರಿಗೆ ಎಷ್ಟು ಪ್ರಾಧಾನ್ಯ ಕೊಟ್ಟಿರುವರು ಎಂಬುದನ್ನು ಕಾಣುವೆವು. ಡೆಲ್ಲಿಯಲ್ಲಿರುವ ರೆಡ್‌ಪೋರ್ಟ್, ಆಗ್ರದ ಕೋಟೆ, ತಾಜಮಹಲ್, ಶ್ರೀರಂಗಪಟ್ಟಣ, ಗುಂಬಜ್ ಇಲ್ಲೆಲ್ಲಾ ಅದನ್ನು ನೋಡುವೆವು. ಹಾಗೆ ಚಾರಪುಂಜಿ ಮುಂತಾದಕಡೆ ಇರುವ ಜನ ಕಟ್ಟಿಸಿಕೊಳ್ಳುವ ಸ್ವರ್ಗದಲ್ಲಿ ಕಡಿಮೆ ಮಳೆ, ಕಡಿಮೆ ಮರಗಿಡ, ಬಟ್ಟಬಯಲು, ಇಂತಹುದನ್ನು ಕಲ್ಪಿಸಿಕೊಳ್ಳುವನು. ಒಬ್ಬನ ಸ್ವರ್ಗ ಮತ್ತೊಬ್ಬನಿಗೆ ನರಕವಾಗಿ ಕಾಣುವುದು ಕೆಲವು ವೇಳೆ. ಮೊಗಲಾಯರು ವಿಲಾಸಪ್ರಿಯರು. ಕಾಶ್ಮೀರ ಕಣಿವೆಯನ್ನು ತಮ್ಮ ನಂದನವನವಾಗಿ ಮಾಡಿಕೊಂಡರು. ಅವರು ಅನುಭವಿಸಿ ಮಿಕ್ಕಿರುವುದು ಈಗ ಇತರರ ಅನುಭವಕ್ಕೆ ಸ್ವಲ್ಪ ಇದೆ. ಆದರೆ ಯಾರು ಇದನ್ನು ಅನುಭವಿಸುವರು? ಅಲ್ಲಿರುವ ಜನರೋ ಅಥವಾ ಹೊರಗಿನಿಂದ ಬರುವ ಜನರೋ ಎಂದು ಪ್ರಶ್ನೆ ಮಾಡಿದರೆ, ಎಲ್ಲಾ ಹೊರಗಡೆಯಿಂದ ಬರುವ ಜನರು ಎನ್ನಬೇಕಾಗು

ವುದು. ಕಾಶ್ಮೀರ ಜನರಲ್ಲಿ ಹೆಚ್ಚು ಪಾಲು ಅತಿ ಬಡವರು. ದೇಶ ವಿಸ್ತಾರವಾಗಿದ್ದರೂ ಫಲವತ್ತಾಗಿಲ್ಲ. ಅಲ್ಲಿರುವ ಜನರಿಗೆ ಸಾಕಾದಷ್ಟು ಹೊಟ್ಟೆಗೆ ಸಿಕ್ಕುವುದು ಕಷ್ಟ. ಶ್ರೀನಗರದ ದಾರಿಯಲ್ಲಿ ಹೋಗುತ್ತಿದ್ದಾಗ ಅಲ್ಲಿರುವ ಭಾರವಾದ ಗಾಡಿಯನ್ನು ಮುಂದೆ ಇಬ್ಬರು ಗಂಡಸರು ಹಿಂದೆ ಇಬ್ಬರು ಗಂಡಸರು ನೂಕಿಕೊಂಡು ಹೋಗುವುದು ಸಾಮಾನ್ಯ ದೃಶ್ಯ. ಎತ್ತು, ಕುದುರೆಗಳನ್ನು ಕಟ್ಟಿ ಎಳೆಯುವುದಕ್ಕಿಂತ ಮನುಷ್ಯ ಕಡಿಮೆ ಕೂಲಿಗೆ ದೊರಕುತ್ತಾನೆ! ಅಂದರೆ ಅವರ ಆರ್ಥಿಕಮಟ್ಟ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ಊಹಿಸಬಹುದು. ಹೊರಗಿನಿಂದ ಜನ ಕಾಶ್ಮೀರಕ್ಕೆ ಬರುವಂತೆ ಹಲವಾರು ಉಪಾಯಗಳನ್ನು ಕಾಶ್ಮೀರ್ ಸರ್ಕಾರ ಹೂಡುವುದು. ಕಾಶ್ಮೀರ್ ಸರ್ಕಾರಕ್ಕೆ ಬರುವ ವರಮಾನದಲ್ಲಿ ಕಂದಾಯಕ್ಕೆ ಎರಡನೆಯದೇ ಪ್ರೇಕ್ಷಕರಿಂದ ಬರುವ ವರಮಾನ. ಇಂತಹ ಜನ ಸೌಂದರ್ಯದ ಹತ್ತಿರವೇ ಇದ್ದರೂ ಎಷ್ಟು ಸೌಂದರ್ಯವನ್ನು ಅನುಭವಿಸಬಲ್ಲರು? ಮೊದಲು ಮನುಷ್ಯ ಹಸಿವಿನಿಂದ ದೂರವಿರಬೇಕು. ಸೌಂದರ್ಯೋಪಾಸನೆ ಮಾಡಬೇಕಾದರೆ. ಸ್ವಾಮಿ ವಿವೇಕಾನಂದರು ಹಸಿದ ಹೊಟ್ಟೆಗೆ ವೇದಾಂತಕೊಡಬೇಡಿ ಎನ್ನುತ್ತಿದ್ದರು. ಹಾಗೆಯೇ ಕಾಶ್ಮೀರದ ಸೌಂದರ್ಯವನ್ನು ಅಲ್ಲಿಯ ಜನರು ಉಂಡು ಇತರರಿಗೆ ಕೊಡಬೇಕಾದರೆ ಸಾಮಾನ್ಯ ಜನರ ಆರ್ಥಿಕ ಮಟ್ಟವನ್ನು ಉತ್ತಮಪಡಿಸಬೇಕು.

೨೪ನೇ ಜುಲೈ ಶ್ರೀನಗರದಿಂದ ಪಹಿಲ್‌ಗಾಂಗೆ ಬಸ್ಸಿನಲ್ಲಿ ಹೊರಟೆವು. ಸುಮಾರು ೩೦ ಮೈಲಿ ಬಸ್ಸಿನಲ್ಲಿ ಬಂದಮೇಲೆ ಅನಂತನಾಗ್ ಎಂಬ ಒಂದು ಚಿಲುಮೆ ಸಿಕ್ಕುವುದು. ಇದು

ಪವಿತ್ರ ಯಾತ್ರಾಸ್ಥಳವೆಂದು ಇಲ್ಲಿಯ ಜನರು ಇದನ್ನು ಪೂಜಿಸುವರು. ಇಲ್ಲಿಂದ ನೀರು ಜಿನುಗಿ ಬಂದು ತೊರೆಯಾಗಿ ಹೋಗುವುದು. ಇಲ್ಲಿರುವ ಜನರಿಗೆ ಇದು ತಲಕಾವೇರಿ ಇದ್ದಂತೆ. ಇದನ್ನು ನೋಡಿ ಆದಮೇಲೆ ಬಸ್ಸಿನ ನಿಲ್ದಾಣದಲ್ಲಿದ್ದಾಗ ಹಲವಾರು ಪಂಡಾಗಳು ದೊಡ್ಡ ದೊಡ್ಡ ಪುಸ್ತಕಗಳನ್ನು ತಲೆಯಮೇಲೆ ಇಟ್ಟುಕೊಂಡು ಬಂದರು. ನೀವು ದಯವಿಟ್ಟು ನಮ್ಮಲ್ಲಿ ಬಂದು ಇಳಿದುಕೊಳ್ಳಬೇಕು. ಇದು ಪವಿತ್ರ ತೀರ್ಥ. ಇದನ್ನು ಮರೆತು ಹೋಗಕೂಡದು, ಎಂದು ಹೇಳಿ ತಮ್ಮ ಪುಸ್ತಕದ ಹಾಳೆಯನ್ನು ತಿರುಗಿಸಿ ಇಲ್ಲಿಗೆ ಹಿಂದೆ ಸ್ವಾಮಿ ವಿವೇಕಾನಂದರು ಬಂದಿದ್ದರು. ಅವರ ಸಹಿ ಪುಸ್ತಕದಲ್ಲಿದೆ. ಬೇಕಾದರೆ ನೀವೆ ನೋಡಿ ಎಂದು ತೋರಿಸಿದರು. ಸ್ವಾಮಿ ವಿವೇಕಾನಂದರು ಅಲ್ಲಿಗೆಬಂದದ್ದು ಸುಮಾರು ಅರವತ್ತು ವರ್ಷಗಳ ಹಿಂದೆ ಇರಬೇಕು. ಈ ಪುಸ್ತಕವನ್ನು ತಂದು ತೋರಿಸಿದವನಿಗೆ ಇನ್ನೂ ನಲವತ್ತು ವರ್ಷಗಳಿರಬಹುದು. ನೀನು ವಿವೇಕಾನಂದರನ್ನು ನೋಡಿದ್ದೆಯಾ ಎಂದು ಕೇಳಿದಾಗ, “ ಇಲ್ಲ ನಮ್ಮ ತಂದೆಯವರು ನೋಡಿದ್ದರು. ನಮ್ಮ ತಂದೆಯವರ ಮನೆಯಲ್ಲಿಯೇ ಇಳಿದುಕೊಂಡಿದ್ದರು, ದಯವಿಟ್ಟು ನಮ್ಮ ಮನೆಯಲ್ಲಿ ಈಹೊತ್ತು ತಂಗಿ ಹೋಗಬೇಕು. ಅಮರನಾಥಕ್ಕೆ ನಾವೆ ನಿಮ್ಮ ಜೊತೆಗೆ ಬಂದು ದಾರಿ ತೋರುತ್ತೇವೆ ” ಎಂದರು. ಅವರೊಂದು ದೊಡ್ಡ ತಂಡ. ಆ ಬಿಸಿಲಿನಲ್ಲಿ ದೊಡ್ಡ ಪುಸ್ತಕದ ಗಂಟನ್ನು ತಂದು ಮರದ ನೆರಳಿನಲ್ಲಿ ಕುಳಿತುಕೊಂಡು, ಬಸ್ಸು ಬಂದೊಡನೆಯೆ ಯಾತ್ರಾರ್ಥಿಕರು ಯಾವ ದೇಶದಿಂದ ಬರುತ್ತಾರೆ, ಆಯಾ ದೇಶದ ಪ್ರಮುಖರು ಯಾರು

ತಮ್ಮ ಹತ್ತಿರ ಇದ್ದರು ಎಂದು ಪುರಾತನ ಹೆಸರುಗಳನ್ನು ಹುಡುಕಿ ಪ್ರಯಾಣಿಕರ ಮುಂದೆ ಇಡುವರು. ತಮ್ಮ ಕುಲ ಮನೆ ದೇಶವನ್ನು ನೋಡಿದಾಗ ಜನರಿಗೆ ಒಂದು ಬಗೆಯ ಸಂತೋಷವಾಗುವುದು ಸ್ವಾಭಾವಿಕ. ಈ ಪುಸ್ತಕ ಹಲವು ತಲೆತಲಾಂತರಗಳಿಂದ ಇಲ್ಲಿನವರಿಗೆ ಬಂದಿದೆ. ಇದೊಂದು ಪವಿತ್ರ ಪಿತ್ರಾರ್ಜಿತ ಆಸ್ತಿ.

ಪಂಡಾಗಳ ಕಾಟ ತಾಳಲಾರದೆ ಸಮಯವಿದ್ದರೆ ಹಿಂತಿರುಗುವಾಗ ನಿಲ್ಲುತ್ತೇವೆ ಎಂದು ಹೇಳಿ ಹೊರಟೆವು. ಸುಮಾರು ನಾಲ್ಕು ಗಂಟೆ ಹೊತ್ತಿಗೆ ಪಹಲ್‌ಗಾವ್ ಎಂಬ ಗ್ರಾಮವನ್ನು ಸೇರಿದೆವು. ಇದೊಂದು ರಮ್ಯವಾದ ಸ್ಥಳ. ಏಳುವರೆ ಸಾವಿರ ಅಡಿ ಎತ್ತರದಲ್ಲಿದೆ. ಸುತ್ತಲೂ ಹಿಮಾವೃತ ಪರ್ವತಗಳು ಎದ್ದು ಕಾಣುತ್ತಿದ್ದವು. ದೂರದಲ್ಲಿ ಹಲವು ಕಡೆ ಕರಗದೆ ಇರುವ ಮಂಜು ಮುಸುಕಿತ್ತು. ಎರಡು ಹಿಮಪ್ರವಾಹಗಳು ಇಲ್ಲಿ ಸಂಧಿಸುವುವು. ಸುತ್ತಲೂ ದಟ್ಟವಾದ ಕಾಡು. ಅಮರನಾಥಕ್ಕೆ ಹೋಗಬೇಕಾದರೆ ಇದೇ ಕೊನೇ ಗ್ರಾಮ. ಹಲವು ಅಂಗಡಿಗಳಿವೆ. ಇಲ್ಲಿ ಮನೆಗಿಂತ ಹೋಟೆಲ್‌ಗಳೇ ಜಾಸ್ತಿ ಎನ್ನಬಹುದು. ಅಮರನಾಥ ಯಾತ್ರೆಗೆ ಹೋಗುವವರು ಇಲ್ಲಿ ತಂಗುವ ಸ್ಥಳ. ನಮ್ಮ ಮುಂದಿನ ಪ್ರಯಾಣಕ್ಕೆ ಬೇಕಾಗುವ ಎಲ್ಲವನ್ನೂ ಇಲ್ಲಿಂದಲೇ ಸಿದ್ಧಪಡಿಸಿಕೊಳ್ಳಬೇಕು. ಟೆಂಟು, ಪಾತ್ರೆ, ಸೌದೆ, ಆಹಾರ ದಿನಸಿಗಳು, ಸಾಮಾನು ಹೊರುವುದಕ್ಕೆ ಕುದುರೆ, ಆಳು ಎಲ್ಲವನ್ನೂ ಇಲ್ಲಿಂದಲೇ ಗೊತ್ತುಮಾಡಿಕೊಂಡು ಹೋಗಬೇಕು.

ಒಂದು ಹೋಟೆಲ್‌ನಲ್ಲಿ ಸಾಮಾನುಗಳನ್ನಿಟ್ಟು ಸಂಜೆ

ಸ್ವಲ್ಪ ತಾರಾಡಿಗೊಂಡು ಬರೋಣವೆಂದು ಹೊರಗೆ ಹೋದೆವು. ಆ ಹಿಮಪ್ರವಾಹದ ದಡದಮೇಲೆ ಸ್ವಲ್ಪ ದೂರ ನಡೆದು ಕೊಂಡು ಹೋದೆವು. ಮೇಲಿರುವ ಕಾಡಿನಲ್ಲಿ ಮರಗಳನ್ನು ಕಡಿದು ತೊಲೆಮಾಡಿ ಅದನ್ನು ನದಿಯಲ್ಲಿ ತೇಲಿಬಿಡುವರು. ಆ ದೊಡ್ಡದೊಡ್ಡ ತೊಲೆಗಳು ನದಿಯಲ್ಲಿ ಒಂದಾದಮೇಲೊಂದು ತೇಲಿಬರುತ್ತಿದ್ದವು. ಕೆಲವುವೇಳೆ ಮುಂದೆ ಹೋಗುತ್ತಿದ್ದ ತೊಲೆ ಸ್ವಲ್ಪ ದೂರದವರೆಗೆ ಹೋಗಿ ಅಲ್ಲೇ ಹಲಕೆಲವು ನಿಮಿಷ ಕಲ್ಲಿನ ಅಂಚಿನಲ್ಲಿ ಸಿಕ್ಕಿಕೊಳ್ಳುವುದು. ಹಿಂದಿನಿಂದ ಬಂದ ತೊಲೆ ಇದನ್ನು ದಾಟಿಹೋಗುವುದು. ಸ್ವಲ್ಪ ಕಾಲ ವಾದಮೇಲೆ ಸಿಕ್ಕಿಕೊಂಡ ತೊಲೆ ನೀರಿನ ರಭಸ ಮತ್ತು ಹಿಂದಿ ನಿಂದ ಬರುವ ತೊಲೆಯ ಪೆಟ್ಟು ಇವುಗಳಿಗೆ ಸಿಕ್ಕಿ ಪುನಃ ನಡು ನೀರಿಗೆ ಬಂದು ಹರಿದುಕೊಂಡು ಹೋಗುವುದು. ತುಂಬಾ ಹೊತ್ತು ಇದನ್ನೇ ನೋಡುತ್ತಿದ್ದೆ. ಇದರೊಂದಿಗೆ ಮಾನವ ಜೀವನ ಪಯಣವನ್ನು ಹೋಲಿಸಬಹುದು ಎಂದುಕೊಂಡೆ. ಆಧ್ಯಾತ್ಮಿಕಜೀವನತರಂಗದಲ್ಲಿ ಹೋಗುತ್ತ ಇರುವವನು ತನ್ನ ಸಂಸ್ಕಾರಗಳ ವಶಕ್ಕೆ ಸಿಕ್ಕಿ ಇದ್ದಕ್ಕೆ ಇದ್ದಂತೆಯೇ ಒಂದು ಮೂಲೆಗೆ ಸರಿಯುವನು. ಹಾಗೆಯೇ ಕೆಲವು ಕಾಲ ತಳ್ಳು ವುದು. ಹಿಂದಿನಿಂದ ಪುನಃ ಮತ್ತಾವುದೂ ಘರ್ಷಣೆಗೆ ಸಿಕ್ಕಿ ಕದಲಿ ಮಧ್ಯಕ್ಕೆ ಬಂದು ನೀರಿನಲ್ಲಿ ತೇಲಿಹೋಗಲು ಪ್ರಾರಂಭಿ ಸುವುದು.

ಸಂಜೆ ಮಂಜಿನಗುಡ್ಡಗಳ ಹಿಂದೆ ಸೂರ್ಯ ಮರೆ ಯಾದ. ಶುಕ್ಲಪಕ್ಷದ ಚಂದ್ರನಿಗೆ ಕ್ರಮೇಣ ಕಾಂತಿ ಏರುತ್ತ ಬಂದಿತು. ಹಾಲು ಚೆಲ್ಲಿದಂತೆ ಇರುವ ಚಂದ್ರಕಾಂತಿಯಲ್ಲಿ ಆ ಸುಂದರ ಗ್ರಾಮ ಕ್ರಮೇಣ ಮೌನವಾಯಿತು. ಆ

ಗ್ರಾಮದ ಜನಸಂಖ್ಯೆ ಇನ್ನೂರುಜನ ಇರಬಹುದು. ಆಗಲೇ ನಾವು ನಾಗರೀಕತೆಗೆ ತುಂಬಾ ದೂರದಲ್ಲಿರುವಂತೆ ಭಾಸ ವಾಯಿತು. ರಾತ್ರಿ ಚಳಿಗೆ ಶುರು ಆಯಿತು. ಎತ್ತರ ಆಗಲೇ ಏಳೂವರೆ ಸಾವಿರ ಅಡಿ. ನಮ್ಮ ಊಟಿ ಇರುವಂತೆ. ಜೊತೆಗೆ ಸುತ್ತಲೂ ಹಿಮಾವೃತ ಬೆಟ್ಟಗಳು. ಇಲ್ಲೇ ಇಷ್ಟು ಚಳಿ ಯಾದರೆ ಮುಂದೆ ಮುಂದೆ ಹೋದಂತೆಲ್ಲಾ ಹೇಗೆ ಸಹಿಸುವುದು ಎಂಬ ಅಂಜಿಕೆಯಾಯಿತು. ಶಿವನ ದರ್ಶನ ಸುಲಭವೆ? ಹಿಮಾಲಯ ವಾಸಿ, ದಿಗಂಬರ, ವೈರಾಗ್ಯನಿಧಿ, ಶಿವನ ದರ್ಶನಕ್ಕೆ ಹೋಗಬೇಕಾದರೆ ಸ್ವಲ್ಪವೂ ಕಷ್ಟಪಡಬೇಡವೆ! ಅಲ್ಲಿ ನಮಗೆ ಒಬ್ಬ ತೆಲಗು ಸೈನ್ಯಾಧಿಕಾರಿಯ ಪರಿಚಯವಾಯಿತು ಜಮ್ಮು ನಲ್ಲಿದ್ದವನು. ಯಾರೋ ಪಹಿಲ್‌ಗಾಮ್‌ನಿಂದ ಅಮರನಾಥಕ್ಕೆ ಒಂದು ದಿನದಲ್ಲಿ ಹೋಗಿಬರಬಹುದು ಎಂದು ಹೇಳಿದರಂತೆ. ಅದರಂತೆ ಯಾವ ಕಂಬಳಿಗಿಂಬಳಿ ಏನೂ ಇಲ್ಲದೆ ತನ್ನ ಸಣ್ಣ ಒಂದು ಸೂಟ್‌ಕೇಸನ್ನು ಹಿಡಿದುಕೊಂಡು ಬಂದಿದ್ದ. ಹೋಟೆಲಿ ನಲ್ಲಿ ಅತನನ್ನು ನಾವು ಕಂಡೆವು. ಆತ ತಾನು ನಾಳೆ ಬೆಳಿಗ್ಗೆ ಅಮರನಾಥಕ್ಕೆ ಹೋಗಿ ಸಾಯಂಕಾಲದ ಹೊತ್ತಿಗೆ ಬಂದು ಬಿಡುತ್ತೇನೆ ಎಂದ. ನಮಗೆ ಆಶ್ಚರ್ಯವಾಯಿತು. ಏನೋ ಮಿಲಿಟೆರಿಯಲ್ಲಿರುವ ಮನುಷ್ಯ ತುಂಬಾ ಕಷ್ಟವನ್ನು ಸಹಿಸುವ ಸಾಮರ್ಥ್ಯವಿದೆ, ಬಂದರೂ ಬರಬಹುದು ಎಂದು ಊಹಿಸಿ ದೂರ ಎಷ್ಟು ಇದೆ ಗೊತ್ತೆ? ಎಂದು ಕೇಳಿದೆ. ಏನು ಎಂಟು ಹತ್ತು ಮೈಲಿಗಳಿರಬಹುದು ಎಂದ. ಪಾಪ! ಆ ಮನುಷ್ಯನಿಗೆ ಸರಿಯಾದ ದಾರಿಯೆ ತಿಳಿಯದು. ಆತನಿಗೆ, ಅಲ್ಲಿಗೆ ಸೇರಬೇಕಾ ದರೆ ಹೋಗುವಾಗ ಮೂರುದಿನ ಹಿಡಿಯುವುದು. ಬರುವಾಗ

ಬೇಗವೆಂದರೆ ಎರಡು ದಿನವಾದರೂ ಹಿಡಿಯುವುದು. ದಾರಿಯಲ್ಲಿ ಊಟಕ್ಕೆ ಯಾವ ಹೋಟೆಲ್‌ನವರೂ ಇರುವುದಿಲ್ಲ. ಎಲ್ಲಾ ನಾವೆ ತೆಗೆದುಕೊಂಡು ಹೋಗಬೇಕು. ಬರುವಹಾಗೆ ಇದ್ದದೆ ನಮ್ಮ ಜೊತೆಯಲ್ಲಿ ಬನ್ನಿ ಎಂದೆವು. ಆತ ಬರುವುದಕ್ಕೆ ಒಪ್ಪಿಕೊಂಡನು.

೨೫ ನೇ ತಾರೀಖು ಹೋಗುವುದಕ್ಕೆ ಅಣಿಯಾದೆವು. ನಮಗೆ ದಾರಿಯಲ್ಲಿ ಬೇಕಾಗಬಹುದಾದ ಸಾಮಾನನ್ನೆಲ್ಲಾ ಇಲ್ಲಿಂದಲೇ ತೆಗೆದುಕೊಂಡು ಹೋಗಬೇಕು. ನಮಗೆ ಅವಶ್ಯಕವಾಗಿ ಬೇಕಾಗಿದ್ದುದು ಡೇರೆ. ಅದು ಚೆನ್ನಾಗಿರಬೇಕು. ಮೇಲೆಮೇಲೆ ಹೋದಂತೆಲ್ಲಾ ಚಳಿ ಹೆಚ್ಚಾಗುವುದು. ಕೆಲವು ವೇಳೆ ಮಳೆ ಬಂದರೂ ಬರುವುದು. ಆ ಹಿಮರಾಶಿಯಲ್ಲಿ ಬೆಚ್ಚನೆ ಸ್ಥಳವೆಂದರೆ ಡೇರೆ ಒಂದೆ. ಮೈಸೂರು ಕಡೆಯಿಂದ ಹೋಗುವವರಿಗೆ ಹೆಚ್ಚು ಚಳಿ ಅಥವಾ ಬಿಸಿಲನ್ನು ಸಹಿಸಿ ಅಭ್ಯಾಸವಿಲ್ಲ. ಪ್ರಕೃತಿ ನಮ್ಮನ್ನು ಚಿರವಸಂತದಲ್ಲಿಟ್ಟಿರುವುದರಿಂದ ಒಂದು ದೃಷ್ಟಿಯಿಂದ ನಾವು ಅದಕ್ಕೆ ಚಿರಋಣಿಯಾದರೂ ದೇಶದ ಬೇರೆಕಡೆ ಹೋದರೆ ಸುಲಭವಾಗಿ ನಮಗೆ ಸಹಿಸುವುದಕ್ಕೆ ಆಗುವುದಿಲ್ಲ. ಉತ್ತರ ಇಂಡಿಯಾದಲ್ಲಿ ಬೇಸಗೆ ಕಾಲದಲ್ಲಿ ಉಷ್ಣ ೧೨೦ ಡಿಗ್ರಿವರೆಗೂ ಹೋಗುವುದು. ಮೈಸೂರು, ಬೆಂಗಳೂರಿನಲ್ಲಿ ಹೆಚ್ಚೆಂದರೆ ೯೨ ಅಥವಾ ೯೩ ಡಿಗ್ರಿ. ಅದೂ ಕೆಲವು ದಿನಗಳು ಮಾತ್ರ ಇರುವುದು. ಉತ್ತರದಲ್ಲಿ ಶೀತಕಾಲದಲ್ಲಿ ೪೦ ಅಥವಾ ೫೦ ಡಿಗ್ರಿ ವರೆಗೂ ಇಳಿಯುವುದು. ನಮ್ಮದು ೬೦ ರ ಸಮೀಪದಲ್ಲೇ ಇರುವುದು. ಅದಕ್ಕೆ ಮದ್ರಾಸು ಮಂಗಳೂರು ಕಡೆ ಹೋದಾಗ ಆವಿಗೆಮನೆಯಲ್ಲಿರುವಂತೆ ಭಾಸ

ವಾಗುವುದು. ಚಳಿಗಾಲದಲ್ಲಿ ಕಾಶಿ, ಡೆಲ್ಲಿ ಮುಂತಾದ ದೇಶಕ್ಕೆ ಹೋದರೆ ಹಿಮದ ಮನೆಯಲ್ಲಿರುವಂತೆ ಕಾಣುವುದು. ಪ್ರಕೃತಿಯ ಶೀತ ಉಷ್ಣಗಳ ಅತಿರೇಕವನ್ನು ಸಹಿಸುವ ಶಕ್ತಿ ನಮಗೆ ಇಲ್ಲ. ಸಮಶೀತೋಷ್ಣವಲಯದಂತಹ ಹವದಲ್ಲಿ ಬೆಳೆದು ನಮ್ಮ ದೇಹ ಬಹು ಸೂಕ್ಷ್ಮವಾಗಿದೆ. ಹಾಕಿಕೊಳ್ಳುವುದಕ್ಕೆ ಬಟ್ಟೆಬರೆ ಇಳಿದುಕೊಳ್ಳುವುದಕ್ಕೆ ಡೇರೆ ಇವನ್ನು ಮೊದಲು ಅಣಿಮಾಡಿಕೊಳ್ಳಬೇಕಾಯಿತು. ಶೀತವನ್ನು ಸಹಿಸುವುದಕ್ಕೆ ಸನ್ನದ್ಧರಾಗಿ ಹಾಸಿಗೆಬಟ್ಟೆಬರೆಯನ್ನೆಲ್ಲಾ ಗಂಟುಕಟ್ಟಿದಾಗ, ಒಬ್ಬೊಬ್ಬರ ಹಾಸಿಗೆಯನ್ನು ಹೊಡಬೇಕಾದರೆ ಹೆಣಭಾರವಾಯಿತು. ಜೊತೆಗೆ ದಾರಿಯಲ್ಲಿ ಸೌದೆ ಕೂಡ ಸಿಕ್ಕುವುದಿಲ್ಲ. ಇಲ್ಲಿಂದಲೇ ಒಂದು ಮೂಟೆ ಇದ್ದಿಲನ್ನು ತೆಗೆದುಕೊಂಡೆವು. ಎರಡು ಲಾಂದ್ರಗಳು ಅಡಿಗೆಮಾಡುವುದಕ್ಕೆ ಬೇರೆ ಸಣ್ಣದೊಂದು ಗುಡಾರ, ಆಹಾರ ಸಾಮಗ್ರಿಗಳು ಇವುಗಳನ್ನೆಲ್ಲ ಒಂದುಗೂಡಿಸಿದಮೇಲೆ ಇದೇ ಒಂದು ಸಣ್ಣ ಬೆಟ್ಟವಾಯಿತು. ಇದನ್ನು ಹೊರುವುದಕ್ಕೆ ನಾಲ್ಕು ಕುದುರೆಗಳನ್ನು ಗೊತ್ತುಮಾಡಿದೆವು. ಕುದುರೆ ಒಂದಕ್ಕೆ ಆಳಿನ ಸಮೇತ ಹೋಗಿಬರುವುದಕ್ಕೆ ಹದಿನೈದು ರೂಪಾಯಿಗಳು. ಈಗಿನ ಕಾಲದಲ್ಲಿ ಇದು ತುಂಬಾ ಕಡಿಮೆ ಎನ್ನಬಹುದು. ಒಂದು ದಿನಕ್ಕೆ ಮೂರು ರೂಪಾಯಿ ಆಯಿತು ಆಳು ಕುದುರೆ ಸೇರಿ. ಆಳೆ ನಮಗೆ ದಾರಿ ತೋರುವವರಾದರು. ೨೬ ನೇ ತಾರೀಖು ಬೆಳಿಗ್ಗೆ ಸ್ನಾನ ಆಹ್ನೀಕಗಳನ್ನು ಪೂರೈಸಿಕೊಂಡು ಸುಮಾರು ಒಂಭತ್ತು ಗಂಟೆಗೆ ಹೊರಟೆವು.

ಮೊದಲನೇ ದಿನದ ಪ್ರಯಾಣ ಉತ್ಸಾಹ ಭಕ್ತಿಯಿಂದಲೇ ಸಾಗಿತು. ಎಲ್ಲರ ಕೈಯಲ್ಲಿಯೂ ಒಂದೊಂದು

ಕೋಲು. ಬೆಟ್ಟ ಹತ್ತುವಾಗ ಈ ಕೋಲು ಮೂರನೆ ಕಾಲಾಗುವುದು. ನಮ್ಮ ಭಾರವನ್ನೆಲ್ಲ ಅದರಮೇಲೆ ಬಿಡಬಹುದು. ಹಿಮದಮೇಲೆ ನಡೆಯುವಾಗಲಂತೂ ಅದು ಅತ್ಯಂತ ಪ್ರಯೋಜನಕಾರಿ. ಮೊದಲು ಕೋಲನ್ನು ಹಿಮದಲ್ಲಿ ಅದುಮಿ ನಂತರ ನಿಧಾನವಾಗಿ ಕಾಲನ್ನು ಮುಂದಕ್ಕೆ ಎಳೆದುಕೊಂಡು ಹೋಗುವುದಕ್ಕೆ ಸಹಕಾರಿ. ಬಿಸಿಲು ಚುರುಕಾಗಿಯೇ ಇತ್ತು. ಅದರ ಝಳದಿಂದ ಪಾರಾಗಲು ಒಂದು ಕೈಯಲ್ಲಿ ಛತ್ರಿ ಮತ್ತೊಂದು ಕೈಯಲ್ಲಿ ನಡೆದುಕೊಂಡು ಹೋಗುವುದಕ್ಕೆ ಒಂದು ಊರುಗೋಲು. ಹೆಗಲಮೇಲೆ ಮಳೆ ಬಂದರೆ ಹಾಕಿಕೊಳ್ಳುವುದಕ್ಕೆ ಮಳೆ ಅಂಗಿ. ಇದಲ್ಲದೆ ಒಬ್ಬೊಬ್ಬರ ಮೇಲು ನಾಲ್ಕೈದು ಬಟ್ಟೆಗಳಿದ್ದವು. ಜೊತೆಗೆ ಬಾಯಾರಿಕೆ ಆದರೆ ಕುಡಿಯಲು ನೀರು ಅಥವಾ ಕಾಫಿಯ ಥರ್ಮೋಸ್ ಫ್ಲಾಸ್ಕ್. ಮಧ್ಯೆಮಧ್ಯೆ ಮನೋರಂಜಕ ದೃಶ್ಯಗಳನ್ನು ಹಿಡಿಯುವುದಕ್ಕಾಗಿ ಕ್ಯಾಮರಾ. ಇವುಗಳಿಂದ ಸುಸಜ್ಜಿತರಾಗಿ ಹೊರಟಾಗ ಯೋಧರು ಯುದ್ಧಕ್ಕೆ ಹೋಗುವಾಗ ಹೇಗಿರುತ್ತಾರೆಯೋ ಹಾಗೆ ಇದ್ದೆವು, ನಾವು ಯಾತ್ರಿಕರು!

ಪಹಿಲ್ ಗ್ರಾಮದಿಂದ ಚಂದನವಾಡಿ ಎಂಬ ಮೊದಲನೆ ನಿಲ್ದಾಣಕ್ಕೆ ಸುಮಾರು ೯ ಮೈಲಿಗಳು. ಇದರ ಎತ್ತರ ಸುಮಾರು ೯೫೦೦೦ ಅಡಿಗಳು. ದಾರಿ ಅಷ್ಟೇನು ಕಡಿದಾಗಿರಲಿಲ್ಲ. ನಿಧಾನವಾಗಿ ಏರುತ್ತ ಬಂದೆವು. ಶಿವನಿಗೆ ಸಂಬಂಧಪಟ್ಟ ಹಲವಾರು ಭಾವನಗಳನ್ನು ಮನಸ್ಸಿನಲ್ಲಿಯೇ ಮೆಲಕುಹಾಕುತ್ತಾ ಹೊರಟೆವು. ಬರುಬರುತ್ತಾ ನಾವು ಹೇರಿಕೊಂಡಿದ್ದ ಭಾರ ಕ್ರಮೇಣ ನಮಗೆ ಅರಿವಾಗಲು ಮೊದ

ಲಾಯಿತು. ಒಂದು ಕೈನಲ್ಲಿ ಛತ್ರಿ ಮತ್ತೊಂದು ಕೈನಲ್ಲಿ ಕೋಲು ಇದ್ದುದರಿಂದ ಸರಾಗವಾಗಿ ಕೈಯನ್ನು ಬೀಸಿ ಕೊಂಡುಹೋಗಲು ಆಗಲಿಲ್ಲ. ಛತ್ರಿಯನ್ನು ಮುಂದಿನ ಕುದುರೆಯ ಮೇಲಿಟ್ಟು ಕೋಲೊಂದೇ ಸಾಕೆಂದು, ಒಂದು ಕೈಯನ್ನಾದರೂ ಬೀಸಿಕೊಂಡು ಹೋಗುವಾಗ ಸ್ವಲ್ಪ ವಿರಾಮ ವಿರುವುದೆಂದು ಭಾವಿಸಿದೆ. ಇದಾದ ಮೇಲೆ ಒಂದು ಹೆಗಲಿ ನಲ್ಲಿ ನೇತಾಡುತ್ತಿದ್ದ ಥರ್ಮಾಸ್‌ಫ್ಲಾಸ್ಕ್ ಮತ್ತೊಂದು ಹೆಗಲಿನಲ್ಲಿ ನೇತಾಡುತ್ತಿದ್ದ ಕ್ಯಾಮರಾದಲ್ಲಿ ಭಾರವಾದ ಥರ್ಮಾಸ್‌ಫ್ಲಾಸ್ಕನ್ನು ಕುದುರೆಯಮೇಲೆ ನೇತುಹಾಕಿದೆ. ಭುಜದಮೇಲೆ ಇದ್ದ ಮಳೆ ಅಂಗಿಯೇ ಸುಮಾರು ಐದಾರು ಪೌಂಡಿತ್ತು. ಅದನ್ನು ಮಳೆ ಬಂದಾಗ ತೆಗೆದುಕೊಂಡರೆ ಸಾಕೆಂದು ಹಿಂದೆ ಬರುತ್ತಿದ್ದ ಕುದುರೆಯನ್ನು ಕಾದು ಅದನ್ನೂ ಅದರಮೇಲೆ ಹೇರಿದೆ. ಮುಂದೆ ಮುಂದೆ ಹತ್ತುವಾಗ ದೇಹ ದಿಂದ ಉತ್ಪನ್ನವಾದ ಬೆವರು ಶಾಖ ಇದನ್ನು ತಡೆಯಲಾರದೆ ಉಣ್ಣೆಯ ಶಾಖದ ಬಟ್ಟೆಯನ್ನು ತೆಗೆದುಹಾಕಿದೆ. ಕೊನೆಗೆ ಬರಿಯ ಒಂದು ಬಳಬನೀನು ಮೇಲೊಂದು ಷರಟು ಮಾತ್ರ ಉಳಿಯಿತು. ಇದೂ ಭಾರವಾಗಿ ಕಂಡವು. ಮುಂದೆ ಕಷ್ಟ ವಾದ ದಾರಿಯಲ್ಲಿ ಹೋಗುತ್ತ ಹೋಗುತ್ತ ಕೆಲವುವೇಳೆ ದೇಹವೇ ಭಾರವಾಗಿ ಕಂಡಿತು. ನಾವು ಪ್ರಯಾಣಕ್ಕೆ ಮುಂಚೆ ಹಾಕಿಕೊಂಡಿದ್ದ ಪಂಚಕೋಶಗಳು, ಈಗ ಸುಮಾರು ಐದಾರು ಮೈಲಿ ಬೆಟ್ಟದ ರಸ್ತೆಯಲ್ಲಿ ನಡೆದಾದಮೇಲೆ ನಮ್ಮ ದೇಹದ ಮೇಲಿರುವ ಒಂದೆರಡು ಕೋಶವನ್ನು ನೋಡಿದಾಗ ಎಷ್ಟೊಂದು ಉಪಾಧಿಗಳು ಜಾರಿಹೋಗಿವೆ ಎನ್ನಿಸಿತು! ನಿತ್ಯ

ಜೀವನದಲ್ಲಿಯೂ ಅಷ್ಟೆ. ಮನುಷ್ಯ ಹಲವಾರು ಕೋಶಗಳನ್ನು ಹೇರಿಕೊಳ್ಳುವನು, ಜೀವನದ ಪಯಣದಲ್ಲಿ ಸುಖವಾಗಿರುವುದಕ್ಕೆ. ಆದರೆ ಸ್ವಲ್ಪ ಪ್ರಯಾಣಮಾಡಿದಂತೆಲ್ಲ ಅವನಿಗೆ ಇದರಿಂದ ಬರುವ ಸುಖಕ್ಕಿಂತ ದುಃಖವೆ ಹೆಚ್ಚು ಎಂದು ಈಕೋಶಗಳನ್ನು ಒಂದೊಂದಾಗಿ ಕಳೆದುಕೊಂಡು ಕೊನೆಗೆ ದಿಗಂಬರನಾಗಿ ದೇವರ ಮುಂದೆ ನಿಲ್ಲಬೇಕಾಗುವುದು.

ಮೇಲೆ ಏರಿದಂತೆಲ್ಲ ಆಯಾಸ ಜಾಸ್ತಿಯಾಗಹತ್ತಿತು. ಸ್ಫೂರ್ತಿ, ಭಕ್ತಿ ಒಳಗೆ ಇದ್ದರೂ, ದೇಹ ಅದಕ್ಕೆ ಸರಿಸಮನಾಗಿ ಓಡಲು ಸಾಧ್ಯವಾಗುತ್ತಿರಲಿಲ್ಲ. ಕೆಲವುವೇಳೆ ಅಲ್ಲೆ ಸೌಂದರ್ಯ ನೋಡುವ ನೆವದಿಂದ ಕೆಲವು ನಿಮಿಷ ವಿಶ್ರಮಿಸಿಕೊಳ್ಳುತ್ತಿದ್ದೆವು. ಪಕ್ಕದಲ್ಲೆ ಮಂಜುಳಧ್ವನಿಯಿಂದ ಹರಿಯುತ್ತಿರುವ ಝರಿ ವೇದಘೋಷವನ್ನು ಮಾಡಿಕೊಂಡು ಹರಿಯುವಂತೆ ಕಾಣುತ್ತಿತ್ತು. ಬೀಸುವ ಗಾಳಿಗೆ ಆಡುವ ಮರಗಳು ದೇವರಿಗೆ ಚಾಮರವನ್ನು ಹಾಕುವಂತೆ ಕಾಣುತ್ತಿದ್ದವು. ದೂರದೂರದಲ್ಲಿ ಕಾಣುವ ಹಿಮಾವೃತಗಿರಿಶಿಖರಗಳು ಧ್ಯಾನಮಗ್ನ ಯೋಗಿಯ ನೆನಪನ್ನು ತರುತ್ತಿತ್ತು. ಆಕಾಶದಲ್ಲಿ ಎಲ್ಲೋ ನಮ್ಮ ಕಣ್ಣಿಗೆ ಕಾಣದ ಕಡೆಯಿಂದ ಬರುವ ವಿಹಂಗಮರವ ಅನಾಹತ ಧ್ವನಿಯಂತೆ ಇತ್ತು. ಮೇಲಿನ ನೀಲಿಯಾಗಸ ಶಿವನ ಮನೆಯಂತೆ ಇತ್ತು. ಇದು ನಮ್ಮ ದೇಹದ ಆಯಾಸವನ್ನು ಪರಿಹರಿಸುತ್ತಿತ್ತು. ಮನಸ್ಸಿನಲ್ಲಿ ಭಾವನಾತರಂಗ ಉದಿಸುವಂತೆ ಮಾಡಿತು. ನಿಜವಾಗಿ ದೇಹದ ಆಯಾಸಕ್ಕಾಗಿ ನಿಂತೆವೇ ಅಥವಾ ಸೌಂದರ್ಯೋಪಾಸನೆಗೆ ನಿಂತೆವ ಎಂದು ಯಾರಾದರೂ ಕೇಳಿದಾಗ, ನಿಸ್ಸಂಕೋಚವಾಗಿ ಹೇಳಬೇಕಾದರೆ ದೇಹದ ಬಳ

ಲಿಕೆಗೆ ನಿಂತೆವೆನ್ನಬೇಕಾಗುವುದು. ಹೊರಗಿನ ಸೌಂದರ್ಯವನ್ನು ನೋಡಬೇಕಾದರೆ ನಿಲ್ಲಬೇಕಾಗಿರಲಿಲ್ಲ. ನಿಧಾನವಾಗಿ ನಡೆಯು ತ್ತಲೇ ನೋಡಿಕೊಂಡು ಹೋಗಬಹುದು. ಆದರೂ ಮನುಷ್ಯನ ಒಂದು ದುರ್ಬಲತೆ ಇದು. ತನ್ನ ಆಂತರ್ಯವನ್ನು ಮುಚ್ಚುವು ದಕ್ಕೆ ನಟನೆಯ ಒಂದು ಪೋಷಾಕನ್ನು ಹೊರಗೆ ಹಾಕಿಕೊಳ್ಳು ವನು. ಇದನ್ನು ಬರೆಯುವಾಗ ಹಿಂದೆ ಮೈಸೂರು ಚಾಮುಂಡಿ ಬೆಟ್ಟವನ್ನು ಹತ್ತುವಾಗ ನಡೆದ ಒಂದು ಪ್ರಸಂಗ ಜ್ಞಾಪಕ ಬರುವುದು. ಅವರಲ್ಲಿ ಒಬ್ಬರು ತುಂಬಾ ಹಿರಿಯರು. ಕೆಲವು ಮೆಟ್ಟಲುಗಳನ್ನು ಹತ್ತಿ ಆಯಾಸವಾದಮೇಲೆ ಪಕ್ಕದಲ್ಲಿರುವವ ರಿಗೆ "ಹಿಂದಿನ ದೃಶ್ಯ ನೋಡಿ; ಎಷ್ಟು ಚೆನ್ನಾಗಿದೆ. ಸುಮ್ಮನೆ ಓಡಿಹೋದರೆ ಪ್ರಯೋಜನವೇನು"? ಎನ್ನುತ್ತಿದ್ದರು.

ಅಂದಿನ ಮಧ್ಯಾಹ್ನ ಹನ್ನೆರಡುಗಂಟೆ ಹೊತ್ತಿಗೆ ಚಂದನ ವಾಡಿಯನ್ನು ಮುಟ್ಟಿದೆವು. ಅಲ್ಲಿ ಎಡಗಡೆ ಒಂದು ನದಿ, ಬಲ ಗಡೆ ಒಂದು ನದಿ. ಅದರ ಮಧ್ಯೆ ಡೇರೆಯನ್ನು ಹಾಕಿ ತೆಪ್ಪಗೆ ಹಾಗೆ ಮಲಗಿದೆವು. ನಡೆದು ನಡೆದು ಸಾಕಾಗಿ ಹೋಗಿತ್ತು. ಎದ್ದು ಕುಳಿತುಕೊಳ್ಳುವುದಕ್ಕೂ ತ್ರಾಣವಿಲ್ಲದಂತೆ ಕಂಡಿತು. ನಮ್ಮ ಜೊತೆಗೆ ಬಂದಿದ್ದ ಕಾಶ್ಮೀರಿ ಅಡಿಗೆಯವನು ಅಡಿಗೆ ಮಾಡಿ ಕರೆದಮೇಲೆ ಉಂಡು, ಸ್ವಲ್ಪ ಶಕ್ತಿ ಬಂದಮೇಲೆ ಸುತ್ತ ಮುತ್ತಲಿನ ಬೆಡಗನ್ನು ನೋಡುತ್ತ ಕೆಲವು ಚಿತ್ರಗಳನ್ನು ತೆಗೆದು ಕೊಂಡೆವು. ಇಲ್ಲಿ ಸರ್ಕಾರಿ ನೌಕರರು ಇಳಿದುಕೊಳ್ಳುವುದ ಕ್ಕಾಗಿ ಒಂದು Inspection Bungalow ಇದೆ. ಡೇರೆ ಯಲ್ಲಿಳಿದುಕೊಳ್ಳುವುದಕ್ಕಿಂತ ಇದರಲ್ಲಿದ್ದರೆ ಹೆಚ್ಚು ಶಾಖ ವಾಗಿರುತಿತ್ತು. ಅದು ಯಾರ ವಶದಲ್ಲಿತ್ತೊ ಅವನನ್ನು ಕೇಳಿ

ದಾಗ "ಇದನ್ನು ಕೊಡುವುದಕ್ಕೆ ಆಗುವುದಿಲ್ಲ. ಯಾವ ಸಮಯದಲ್ಲಿ ಸರ್ಕಾರಿ ನೌಕರರು ಬರುತ್ತಾರೊ ಗೊತ್ತಿಲ್ಲ" ಎಂದಿದ್ದ. ಆತನೇ ಸ್ವಲ್ಪ ಹೊತ್ತಾದ ಮೇಲೆ ನಮ್ಮ ಡೇರೆ ಹತ್ತಿರ ಬಂದು "ನನಗೆ ಎರಡು ಮೂರು ದಿನಗಳಿಂದ ವೈಗೆ ಸರಿಯಾಗಿಲ್ಲ. ನಿಮ್ಮ ಹತ್ತಿರ ಏನಾದರೂ ಔಷಧಿ ಇದೆಯೆ" ಎಂದು ಕೇಳಿದ. ನಾವು ಒಂದೆರಡು ಔಷಧಿಯನ್ನು ದಾರಿಯಲ್ಲಿ ಸಮಯ ಬಂದರೆ ಇರಲಿ ಎಂದು ತೆಗೆದುಕೊಂಡು ಹೋಗಿದ್ದೆವು. ಅದೆ Bismag, ಏನಾದರೂ ಹೊಟ್ಟೆಕೆಟ್ಟರೆ ಅದರ ಶಮನಕ್ಕಾಗಿ. ಎರಡನೆಯದು ಆಸ್ಪೆರಿನ್ ತಲೆನೋವು, ನೆಗಡಿ ಮುಂತಾದುವು ಬಂದರೆ. ಮೂರನೆಯದು ಹತ್ತುವಾಗ ಎಲ್ಲಿಯಾದರೂ ಬಿದ್ದರೆ ಹಾಕುವುದಕ್ಕಾಗಿ Tincture iodine ಮತ್ತು ಹತ್ತಿ ಬ್ಯಾಂಡೇಜ್. ಆ ಮನುಷ್ಯನಿಗೆ ಸ್ವಲ್ಪ ಬಿಸಾಮ್ಯಾಗ್ ಕೊಟ್ಟೆವು. ನಂತರ ಅಲ್ಲಿ ಒಬ್ಬ ಸಿಕ್ ಇದ್ದ. ಆತ ತನಗೆ ಸೊಂಟ ಹಿಡಿದುಕೊಂಡು ಬಿಟ್ಟಿದೆ, ಇಲ್ಲಿ ಯಾವ ವಿಧವಾದ ಔಷಧಿ ಸಿಕ್ಕುವುದಿಲ್ಲವೆಂದೂ ತನಗೆ ಸಹಾಯಮಾಡಿದರೆ ಮಹೋಪಕಾರವಾಗುವುದೆಂದು ಹೇಳಿದನು. ನನ್ನ ಹತ್ತಿರ ಇದ್ದ ಕೆಲವು ಆಸ್ಪೆರಿನ್ ಗುಳಿಗೆಗಳನ್ನು ಕೊಟ್ಟೆ. ಸ್ವಲ್ಪ ಹೊತ್ತಾದ ಮೇಲೆ ಸುತ್ತಮುತ್ತ ವಾಸಿಸುವ ಕೆಲವು ಕುರುಬರಿಗೆ ಯಾರೋ ಒಬ್ಬರು ಇಲ್ಲಿ ಔಷಧಿ ಕೊಡುತ್ತಾರೆ ಎಂದು ಗೊತ್ತಾಗಿ ಸುಮಾರು ನಾಲ್ಕೈದು ಜನ ಬಂದು ತಮ್ಮ ವ್ಯಾಧಿಯನ್ನು ಹೇಳಿಕೊಂಡರು. ನಮ್ಮ ಹತ್ತಿರವಿದ್ದ ಔಷಧಿ ಎರಡೆ. ಅದೂ ತುಂಬಾ ಕಡಿಮೆ ಇದ್ದದ್ದು, ಕೇವಲ ನಮ್ಮ ಉಪಯೋಗಕ್ಕೆ ಮಾತ್ರ. ಹೀಗೆ ಮುಂದೆ ಮುಂದೆ ಹೋದಂತೆಲ್ಲಾ

ಜನ ಬರುತ್ತಾರೆ ಎಂದು ತಿಳಿದಿದ್ದರೆ ಸ್ವಲ್ಪ ಹೆಚ್ಚಾಗಿ ತೆಗೆದು ಕೊಂಡು ಬರಬಹುದಾಗಿತ್ತು. ಆದರೆ ವಿಧಿ ಇಲ್ಲದೆ ನಮ್ಮ ಹತ್ತಿರ ಇದ್ದುದನ್ನೇ ಹಂಚಿದೆವು. ಇನ್ನು ಕೆಲವರು ಬರುತ್ತಿರುವುದನ್ನು ನೋಡಿ, ಹೀಗಾದರೆ ನಾವು ಮತ್ತೇನನ್ನಾದರೂ ಔಷಧಿಯಂತೆ ಕೊಡಬೇಕಾಗುತ್ತದೆ. ಔಷಧಿ ಇಲ್ಲ ಎಂದರೆ ಜನ ಬಿಡುವುದಿಲ್ಲ. ಏನೊ ನಿಮ್ಮ ಕೈಯಿಂದ ಏನನ್ನಾದರೂ ಪ್ರೀತಿಯಿಂದ ಕೊಟ್ಟರೆ ಅದರಿಂದಲೇ ರೋಗ ಗುಣವಾಗುತ್ತದೆ ಎಂದು ಅವರು ನಂಬಿದ್ದರು. ನಮ್ಮ ಹತ್ತಿರ ದಾರಿಯಲ್ಲಿ ಸಕ್ಕರೆಗೆಂದು ಒಂದು ಪೌಂಡು ಸಕ್ಕರೆ ಗುಳಿಗೆಗಳನ್ನು ತಂದಿದ್ದೆವು. ಇನ್ನೂ ಹೆಚ್ಚು ಜನ ಬಂದರೆ ಈ ಸಕ್ಕರೆ ಗುಳಿಗೆಯನ್ನೇ ಕೊಟ್ಟು, ದೇವರ ಹೆಸರನ್ನು ಹೇಳಿ ಅದನ್ನು ತೆಗೆದುಕೊಂಡು ಸ್ವಲ್ಪ ನೀರನ್ನು ಕುಡಿಯಿರಿ ಎಂದು ಹೇಳಬೇಕೆಂದು ಮನಸ್ಸುಮಾಡಿದ್ದೆವು. ಔಷಧಿ ಮಾತ್ರ ಮುಖ್ಯವಲ್ಲ; ಅದರ ಹಿಂದೆ ಇರುವ ಕರುಣೆ ಎಂದು ಯಾವುದೊ ಒಂದು ಕಡೆ ಓದಿದ್ದೆ. ಒಬ್ಬ ವೈದ್ಯ ಒಂದು ದಿನ ಹುಚ್ಚರ ಆಸ್ಪತ್ರೆಗೆ ಹೋದನಂತೆ. ಅಲ್ಲಿ ಹುಚ್ಚನು ವೈದ್ಯನನ್ನು ಕುರಿತು ನೀನು ಹೋಮಿಯೊಪತಿ ವೈದ್ಯನೆ, ಹೈಡ್ರೊಪತಿ ವೈದ್ಯನೆ, ಅಲೋಪತಿ ವೈದ್ಯನೆ, ಎಲಿಕ್ಟ್ರೊಪತಿ ವೈದ್ಯನೆ ಎಂದು ಬಿಡುವಿಲ್ಲದೆ ಪ್ರಶ್ನಿಸಿ ಕೊನೆಗೆ ನೀನು ಯಾವ ಪತಿಯನ್ನಾದರೂ ಅನುಸರಿಸು; ಅದು ಫಲಕಾರಿಯಾಗಬೇಕಾದರೆ ಸಿಂಪತಿ (Sympathy) ಇರಬೇಕು. ಈ ಸಿಂಪತಿಯೊಂದೇ ಎಲ್ಲಾ ಪತಿಗಳೂ ಒಡೆಯ ಎಂದನಂತೆ. ಆ ವೈದ್ಯ ಈ ಮಾತು ಹುಚ್ಚನ ಬಾಯಿಂದ ಬಂದರೂ ಇದೊಂದು ದೊಡ್ಡ ಸತ್ಯವೆಂದಿರುವನು. ನಾವು ಕೂಡ ನಿರ್ವಾಹವಿಲ್ಲದೆ ಎಲ್ಲಾ ಪತಿ

ಗಳನ್ನು ಬಿಟ್ಟು ಸಕ್ಕರೆ ಸಿಂಪತಿಯನ್ನು ಔಷಧಿ ರೂಪದಲ್ಲಿ ಕೊಡಬೇಕೆಂದಿದ್ದೆವು. ಆದರೆ ಅಷ್ಟು ಮುಂದೆ ಹೋಗಲು ದೇವರು ಅವಕಾಶಕೊಡಲಿಲ್ಲ. ನಮ್ಮ ಹತ್ತಿರ ಇದ್ದ ಗುಳಿಗೆ ಭಸ್ಮ ಎರಡೇ ಸಾಕಾಯಿತು. ರಾತ್ರಿ ಹೊತ್ತಿಗೆ ಹತ್ತಿರವೇ ನಮ್ಮಿಂದ ಔಷಧಿಯನ್ನು ತೆಗೆದುಕೊಂಡವರಿಗೆ ಸ್ವಲ್ಪ ಗುಣ ಕಂಡಿತು. ಮೊದಲು ನಮಗೆ ಬಂಗಲೆಯಲ್ಲಿ ಇಳಿದುಕೊಳ್ಳು ವುದಕ್ಕೆ ಅಪ್ಪಣೆ ಕೊಡದವನು ಬಂದು "ದಯವಿಟ್ಟು ನಮ್ಮ ಬಂಗಲೆಯಲ್ಲಿ ಇಳಿದುಕೊಳ್ಳಿ. ನೀವು ನನಗೆ ರೋಗ ಗುಣ ಮಾಡಿರುವಿರಿ. ನಿಮಗೆ ಇಷ್ಟು ವಿಶ್ವಾಸವನ್ನು ತೋರದೆ ಇದ್ದರೆ ಹೇಗೆ" ಎಂದನು. ಆದರೆ ನಾವು ಆಗಲೆ ಡೇರೆ ಹಾಕಿ ಒಳಗಿದ್ದು ದರಿಂದ ಏನೂ ಬೇಡ. ಮುಂದೆ ಹೋಗುವಾಗ ಎಲ್ಲಿಯಾದರೂ ಇಂತಹ ಬಿಡಾರ ಸಿಕ್ಕಿದರೆ ಅಲ್ಲಿ ಇಳಿದುಕೊಳ್ಳುವುದಕ್ಕೆ ಚೀಟಿ ಕೊಡು" ಎಂದು ಕೇಳಿದೆವು.

ಅಂದಿನ ರಾತ್ರಿ ನಮ್ಮ ಪ್ರಾರ್ಥನಾದಿಗಳನ್ನು ತೀರಿಸಿ ಕೊಂಡು ಊಟಮಾಡಿ ಮಲಗಿದೆವು. ಹಗಲೆಲ್ಲ ನಡೆದು ನಡೆದು ಸಾಕಾಗಿತ್ತು. ಚೆನ್ನಾಗಿ ನಿದ್ದೆ ಮಾಡುವ ಎಂದು ಹಾಸಿಗೆ ಹಾಸಿ ಮಲಗಿಕೊಳ್ಳುವುದಕ್ಕೆ ಅಣಿಯಾಗುತ್ತಿದ್ದೆವು. ಆದರೆ ಶಿವ ನಮಗೆ ಸುಲಭವಾಗಿ ನಿದ್ದೆ ಕೊಡುತ್ತಾನೆಯೆ? ತನ್ನ ಭಕ್ತರ ಭಕ್ತಿಯನ್ನು ಒರೆಗಲ್ಲಿಗೆ ತಿಕ್ಕಿ ನೋಡಲು ಯತ್ನಿಸಿದ. ಹಾಲು ಚೆಲ್ಲಿದಂತಹ ಬೆಳ್ದಿಂಗಳು ಹೊರಗೆ; ಹಾಲಿಲ್ಲದ ಕಾಫಿ ಕಷಾಯದಂತೆ ಆಯಿತು. ಮೋಡಗಳ ಪರಂಪರೆ ಬಂದು ಆಕಾಶವನ್ನೆಲ್ಲ ಮುತ್ತಿಕೊಂಡಿತು. ನಕ್ಷತ್ರಗಳು ಪರಾರಿಯಾದವು. ಕಿವಿ ಹೊಳ್ಳೆಗಳು ಒಡೆದು ಹೋಗುವಂತೆ ಗಾಳಿ ಬೀಸಲು

ಮೊದಲಾಯಿತು. ಸ್ವಲ್ಪ ಹೊತ್ತಾದ ಮೇಲೆ ಸಿಡಿಲು ಮಿಂಚು ಮಳೆ ಪ್ರಾರಂಭ. ಟೆಂಟು ನೆನೆದು ಮುದ್ದೆಯಾಯಿತು. ನೀರಿನ ಭಾರದಿಂದ ಬಾಗಿತು. ಹೊರಗಿನ ನೀರು ಡೇರೆಯೊಳಕ್ಕೆ ನುಗ್ಗಲು ಮೊದಲಾಯಿತು. ಶಿವನ ಮುಡಿಯ ಮೇಲಿರುವ ಗಂಗೆಗೆ ನಮ್ಮಂತಹ ಭಕ್ತರನ್ನು ಕಂಡರೆ ತುಂಬಾ ಪ್ರೀತಿಯೆಂದು ಕಾಣು ವುದು. ನಾವು ಅಮರನಾಥನ ಹತ್ತಿರಕ್ಕೆ ಹೋಗುವುದಕ್ಕೆ ಮುಂಚೆಯೇ ಶಿವನ ಜಟಾಜೂಟದಿಂದ ಜಾರಿ ಗಂಗಾದೇವಿ ನಮ್ಮನ್ನು ಇದಿರುಗೊಳ್ಳಲು ಹತ್ತಿರ ಹತ್ತಿರ ಬಂದು ಕೋರೈ ಸುವ ತನ್ನ ಕರಗಳಿಂದ ನಮ್ಮ ಹಾಸಿಗೆಯನ್ನು ಪಾವನಗೊಳಿ ಸಲು ಯತ್ನಿಸಿದಳು. ನಾವೆಲ್ಲರೂ ಎದ್ದು ಹಾಸಿಗೆ ಮುದುರಿ ಕೋಲುಗಳಿಂದ ಡೇರೆ ಮುಂದಿದ್ದ ನೆಲ ಅಗೆದು ಗಂಗಾದೇವಿಗೆ, "ನಿನ್ನ ಮೂಲದಲ್ಲೆ ಬಂದು ದರ್ಶನ ಪಡೆಯುತ್ತೇವೆ ತಾಯಿ! ಸದ್ಯಕ್ಕೆ ನಮ್ಮನ್ನು ಮುಟ್ಟದೆ ಹೋಗು" ಎಂದು ಬೇಡಿ, ಬೇರೆ ಕಡೆ ಹೋಗುವಂತೆ ಮಾಡಿದೆವು. ಇದ್ದ ಸ್ವೆಟರ್ ಅದನ್ನೆಲ್ಲ ಹಾಕಿಕೊಂಡು ಕಂಬಳಿ ಹಾಸಿ ಕೆಳಗೆ ಮಲಗಿಕೊಂಡೆವು. ನಿದ್ದೆ ಬರಲಿಲ್ಲ. ನಿರ್ಜನ ಶೀತಲ ಪ್ರದೇಶ. ಗಾಢಾಂಧಕಾರ. ಡೇರೆಯ ಮೇಲೆ ಮಳೆ ಹನಿ ಬೀಳುತ್ತಿತ್ತು. ಡೇರೆಯೆಲ್ಲ ನೀರಿನಿಂದ ಭಾರ ವಾಗಿ ಕೆಳಕೆಳಗೆ ಇಳಿಯುತ್ತಿತ್ತು. ಡೇರೆಯು ಮುರಿದು ಎಲ್ಲಿ ನಮ್ಮ ಮೇಲೆ ಬೀಳುವುದೊ ಅಥವಾ ಗಾಳಿಗೆ ಹಾರಿ ಹೋಗಿ ನಮ್ಮನ್ನು ಮಳೆರಾಯನ ಪಾಲು ಮಾಡುವುದೊ ಎಂದು ವ್ಯಾಕುಲರಾಗಿ, "ಆಗಲಿ ಶಿವ ಮಾಡಿದಂತೆ. ಈ ಕೋಪವೂ ಅವನದೇ ತಾನೆ" ಎಂದು ಸ್ವಲ್ಪ ಹೊತ್ತು ಹಾಗೆ ಇದ್ದೆವು. ಕ್ರಮೇಣ ನಮ್ಮ ಮನಸ್ಸು ಜಾಗ್ರತಾವಸ್ಥೆಯನ್ನು ತೊರೆ

ಯಿತು. ಮಲಗಿದ್ದ ಪ್ರತಿಯೊಬ್ಬರೂ ಮತ್ತಾವುದೊ ತಮ್ಮ ತಮ್ಮ ಪ್ರಪಂಚಕ್ಕೆ ತೆರಳಿದರು.

೨೭ನೇ ತಾರೀಖು ನಮ್ಮ ಅಮರನಾಥದ ಯಾತ್ರೆ ಯಲ್ಲಿ ಆಗಲೆ ಒಂದು ದಿನ ಆಗಿದೆ. ಬೆಳಿಗ್ಗೆ ಎದ್ದೆವು. ಮಳೆ ಇನ್ನೂ ಸ್ವಲ್ಪಸ್ವಲ್ಪ ಜಿನುಗುತ್ತಿತ್ತು. ನೆನ್ನೆ ನಾವು ಮಲಗಿ ಕೊಂಡಾಗ ಬೆಳಿಗ್ಗೆ ಅಷ್ಟು ಹೊತ್ತಿಗೆ ಎದ್ದು ತಿಂಡಿ ತಿಂದು ಬಿಸಿಲು ತಂಪಾಗಿರುವಾಗಲೇ ಹೊರಡೋಣವೆಂದು ಸಂಕಲ್ಪ ಮಾಡಿಕೊಂಡಿದ್ದೆವು. ಆದರೆ ನಮ್ಮ ಸಂಕಲ್ಪ ಒಂದು, ದೇವರ ಸಂಕಲ್ಪ ಒಂದು. ಮಳೆ ಇನ್ನೂ ಜಿನುಗುತ್ತಲೇ ಇತ್ತು. ಆ ಸ್ಥಿತಿಯಲ್ಲಿ ಹೋಗುವುದು ಹೇಗೆ? ಮುಂದಿನದಾರಿ ಬರುಬರುತ್ತಾ ಕಡಿದಾಗುವುದು. ಹಲವು ಕಡೆ ಹಿಮದ ಮೇಲೆ ನಡೆಯ ಬೇಕಾಗುವುದು. ಮೊದಲೆ ಹಿಮ ಜಾರುವುದು. ಆ ಮಳೆಯಲ್ಲಿ ಹಿಮದ ಮೇಲೆ ಸಿಕ್ಕಿಕೊಂಡರೆ ನಮ್ಮ ತಾಪತ್ರಯವನ್ನು ಹೇಳತೀರದು. ಶಿವನಿಚ್ಛೆಯಂತೆ ಆಗಲಿ ಎಂದು ಡೇರೆಯಲ್ಲಿ ಕುಳಿತೆವು. ಡೇರೆಯ ಒಂದು ಮೂಲೆಗೆ ನಾನು ಹೋಗಿ ಶಿವ ಸಹಸ್ರನಾಮವನ್ನು ಓದಲು ಮೊದಲು ಮಾಡಿದೆ. ನನ್ನನ್ನು ಬೇರೊಂದು ಪ್ರಪಂಚಕ್ಕೆ ಕರೆದೊಯ್ಯಿತು. ಶಿವನಜ್ಞಾನ, ವೈರಾಗ್ಯ, ವಿಶ್ವಕಾರುಣ್ಯ, ಭಕ್ತವಾತ್ಸಲ್ಯ, ಪ್ರೇಮ ಮುಂತಾದ ಮಹಾಗುಣಗಳಲ್ಲಿ ಮನಸ್ಸು ಮಗ್ನವಾಗುತ್ತ ಬಂದಿತು. ನಾನು ಅದನ್ನು ಪೂರ್ತಿಮಾಡುವ ಹೊತ್ತಿಗೆ ಮಳೆ ನಿಂತು ಸ್ವಲ್ಪ ಬಿಸಿಲು ಕಾಯಲು ಮೊದಲಾಗಿತ್ತು. ಬೇಗಬೇಗ ಎದ್ದು ಎಲ್ಲರೂ ಹೋಗಲು ಅನುವಾದೆವು.

ಸುಮಾರು ನಮ್ಮ ಡೇರೆ ಇದ್ದ ಸ್ಥಳದಿಂದ ಎರಡು

ಫರ್ಲಾಂಗುಗಳು ಹೋದಮೇಲೆ ನಮ್ಮ ಪ್ರಯಾಣದಲ್ಲಿ ಮೊದಲು ಹಿಮದಮೇಲೆ ನಡೆಯುವ ಅನುಭವ ದೊರಕಿತು. ಸುಮಾರು ಅರ್ಧ ಫರ್ಲಾಂಗು ಬರಿಯ ಹಿಮದಮೇಲೆ ನಡೆಯ ಬೇಕು. ದೊಡ್ಡ ಒಂದು ಕಣಿವೆಕೆಳಗೆ ನದಿ ವೇಗವಾಗಿ ಹರಿದುಕೊಂಡು ಹೋಗುತ್ತದೆ. ಆ ವೇಗವಾಗಿ ಹರಿಯುವ ನದಿಯಮೇಲೆ ದೊಡ್ಡ ಸೇತುವೆಯಂತೆ ಹಿಮ ನಿಂತಿತ್ತು, ಆ ಸೇತುವೆ ದಪ್ಪ ಸುಮಾರು ಹದಿನೈದು ಇಪ್ಪತ್ತು ಅಡಿಗಳಾದರೂ ಇರಬೇಕು. ಕಾಲಿಗೆ ಕ್ಯಾನ್ವಾಸ್ ಬೂಡ್ಸನ್ನು ಹಾಕಿಕೊಂಡಿ ದ್ದೆವು. ನಡೆಯುವಾಗ ಸ್ವಲ್ಪ ಸಿಂತೆರೂ ಕೆಳಗಿನ ಶೀತ ಕಾಲಿ ನೊಳಗೆ ಕೊರೆಯುತ್ತಿತ್ತು. ಅಂತು ನಡೆದು ಆದಮೇಲೆ ದೊಡ್ಡ ಘಾಟನ್ನು ಹತ್ತಬೇಕಾಯಿತು. ನಮ್ಮ ಪ್ರಯಾಣದಲ್ಲೆಲ್ಲಾ ಇದೇ ಬಹಳ ಕಡಿದಾದ ಸ್ಥಳ. ಇದನ್ನು ಪಿಸಿಘಾಟ್ ಎನ್ನು ತ್ತಾರೆ. ಸುಮಾರು ಎರಡುಮೈಲಿಗಳಷ್ಟು ನೇರವಾಗಿ ಹತ್ತಿ ಕೊಂಡು ಹೋಗಬೇಕು. ಸಣ್ಣರಸ್ತೆ, ಇಲ್ಲೇ ಕೆಳಗಡೆ ಕಾಡು ಕೊನೆಯಾಗುವುದು. ಮೇಲೆ ಹಿಮ ಮೊದಲಾಗುವುದು. ದೊಡ್ಡದೊಡ್ಡ ಗಿಡಗಳೆಲ್ಲ ಮಾಯವಾಗುವುವು. ಜ್ಯನಿಪರ್ ಎನ್ನುವ ಸಣ್ಣಸಣ್ಣ ಪೊದೆಗಳು ಮಾತ್ರ ಮೇಲೆ ಇರುವುವು. ಇದನ್ನು ಏರಿದಮೇಲಂತೂ ನನಗೆ ಸಾಕುಸಾಕಾಗಿ ಹೋಯಿತು. ತಲೆ ಸುತ್ತಲು ಮೊದಲಾಯಿತು. ಹೊಟ್ಟೆ ತೊಳಸಲು ಮೊದ ಲಾಯಿತು. ಬಾಯಾರಿಕೆ ಬೇರೆ. ಥರ್ಮಾಸ್ ಫ್ಲಾಸ್ಕು ಕುದುರೆಯಮೇಲೆ ಹೋಗಿತ್ತು. ಅದು ಬರಬೇಕಾದರೆ ಮತ್ತೊಂದು ಗಂಟೆಯಾದರೂ ಕಾಯಬೇಕಾಗಿತ್ತು. ಹಲವಾರು ನೀರಿನ ಪ್ರವಾಹ ಸುತ್ತಲೂ ಹರಿದುಹೋಗುತ್ತಿತ್ತು. ಬಾಯಾ

ರಿಕೆ, ಕುಡಿಯೋಣವೆಂದು ಕೈಯಿಂದ ನೀರನ್ನು ಮುಟ್ಟಿದರೆ ಕೈ ಕೊರೆದುಹೋಗುತ್ತಿತ್ತು. ಒಂದುಸಲ ನೀರನ್ನು ಕುಡಿದತಕ್ಷಣವೆ ಮೊದಲು ಬಟ್ಟೆಯಿಂದ ಕೈಯನ್ನು ಒರಸಿಕೊಳ್ಳಬೇಕಾಗಿತ್ತು. ಇಲ್ಲದೇ ಒಂದುತೊಟ್ಟು ನೀರು ಕೈಮೇಲೆ ಇದ್ದರೂ ಆಗುವ ವ್ಯಥೆ ಹೇಳತೀರದು. ಸುತ್ತಲೂ ನೀರು ಆದರೆ ಬಾಯಾರಿಕೆ ಇಂಗಿಸಲು ನೀರಿಲ್ಲ ಎಂದಾಯಿತು.

ನನ್ನ ಜೊತೆಯಲ್ಲಿ ಬರುತ್ತಿದ್ದ ಮಿಲಿಟರಿ ಅಧಿಕಾರಿ ತುಂಬಾ ಬಾಯಾರಿಕೆ ಆದಾಗ ಅದನ್ನು ತಡೆದುಕೊಳ್ಳಬೇಕೆಂದೂ ಹಾಗೆ ಒಂದುಸಾರಿ ತಡೆದುಕೊಂಡರೆ ಮುಂದೆ ಬಾಯಾರು ವುದು ಕ್ರಮೇಣ ಕಡಿಮೆಯಾಗುವುದೆಂದೂ ಹೇಳಿದನು. ಸೈನ್ಯದಲ್ಲಿ ಇದೊಂದುಶಿಕ್ಷಣವಂತೆ.ಉರಿಬಿಸಿಲಿನಲ್ಲಿ ಎಂಟುಹತ್ತು ಮೈಲಿ ಓಡುವಂತೆ ಮಾಡುತ್ತಾರೆ. ಪ್ರತಿಒಬ್ಬರ ಹತ್ತಿರದಲ್ಲೂ ನೀರಿನ ಬುಡ್ಡಿಯಲ್ಲಿ ನೀರು ಇರುತ್ತದೆ. ಆದರೂ ಯಾರೂ ನೀರನ್ನು ಕುಡಿಯಬಾರದಂತೆ. ಗುರಿಯನ್ನು ಮುಟ್ಟಿದಮೇಲೆ ಪ್ರತಿಯೊಬ್ಬರ ನೀರಿನ ಸೀಸೆಯನ್ನು ತೆಗೆದುಕೊಂಡು ಅದರೊಳಗೆ ಎಷ್ಟು ನೀರು ಕಡಿಮೆಯಾಗಿದೆ ಎಂದು ನೋಡಿ ಯಾರಲ್ಲಿ ನೀರು ಕಡಿಮೆಯಾಗಿದೆಯೋ ಅವರನ್ನು ಶಿಕ್ಷೆಗೆ ಗುರಿಪಡಿಸು ವರಂತೆ. ಇದೊಂದು ದೊಡ್ಡ ನೀತಿ. ಎಲ್ಲಾ ಕಾರ್ಯಕ್ಷೇತ್ರಕ್ಕೂ ಅನ್ವಯಿಸುವುದು. ಹಲವಾರು ಅಭ್ಯಾಸಗಳು ನಾವು ಅದನ್ನು ಬಿಟ್ಟಮೊದಲು ನಮ್ಮನ್ನು ಹೆಚ್ಚು ಪೀಡಿಸುವುವು. ಎಂದು ಅದನ್ನು ಆಗ ನಿಗ್ರಹಿಸಬಲ್ಲೆವೋ ನಂತರ ಮಾತ್ರ ಅವುಗಳ ಆವೇಗ ಕ್ರಮೇಣ ಕಡಿಮೆಯಾಗುವುದು.

ಸುಮಾರು ಎರಡು ಗಂಟೆಹೊತ್ತಿಗೆ ಎರಡನೇ ನಿಲ್ದಾಣ



ಶೇಷನಾಗ ಸರೋವರ



ಶೇಷನಾಗ ಸರೋವರದ ಮೇಲೆ



ಶೇಷನಾಗದ ಹತ್ತಿರ ಕಾಣುವ ಒಂದು ದೃಶ್ಯ

ವಾದ ಶೇಷನಾಗಕ್ಕೆ ಸೇರಿದೆವು. ಇದರ ಎತ್ತರ ಸುಮಾರು ೧೨,೫೦೦ ಅಡಿ. ಹಿಮಾವೃತ ಪರ್ವತಗಳು ಬಲಗಡೆ, ಅದರ ಬುಡದಲ್ಲಿ ಶೇಷನಾಗ ಸರೋವರ. ಅದರ ಮೇಲೆ ಸುಮಾರು ಐನೂರುಅಡಿ ಎತ್ತರದಲ್ಲಿ ನಾವು ಅಲ್ಲೆ ಇದ್ದ ಒಂದು ಯಾತ್ರಿಕರಿಗಾಗಿ ಕಟ್ಟಿದ ಸಣ್ಣದೊಂದು ಮನೆಯಲ್ಲಿ ಇಳಿದುಕೊಂಡೆವು. ಹಿಂದಿನದಿನ ಔಷಧಿ ಕೊಟ್ಟುಸ್ನೇಹಮಾಡಿಕೊಂಡವನ ಹೆಸರನ್ನು ಹೇಳಿದಮೇಲೆ ಅದರ ಮಾಲೀಕ ಒಪ್ಪಿಕೊಂಡನು. ಇದೊಂದು ಮನೋಹರ ದೃಶ್ಯ ಅಮರನಾಥಯಾತ್ರೆಯಲ್ಲೆಲ್ಲ. ಸರೋವರದ ಮೂರುಕಡೆಯೂ ಹಿಮಪರ್ವತಗಳಿವೆ. ಆ ಪರ್ವತಕ್ಕೆ ಕೈಲಾಸ ಪರ್ವತವೆಂದು ಹೆಸರು. ಅದರಮೇಲೆಲ್ಲಾ ಹಿಮ ಯಾವಾಗಲೂ ಗಡ್ಡೆಗಡ್ಡೆ ಕಟ್ಟಿಕೊಂಡು ಕ್ರಮೇಣ ಜಾರಿ ಸರೋವರಕ್ಕೆ ಸೇರುತ್ತದೆ. ಕರಗದ ದೊಡ್ಡದೊಡ್ಡ ನೀರ್ಗಲ್ಲುಗಳು ಶ್ವೇತ ಮದ್ದಾನೆಗಳಂತೆ ಸರೋವರದಮೇಲೆ ತೇಲುವುದನ್ನು ನೋಡಬಹುದು. ಸರೋವರದ ಒಂದುಕಡೆ ಮಾತ್ರ ಸಣ್ಣದೊಂದು ಮೂಲೆಯಿಂದ ನೀರು ವೇಗವಾಗಿ ಹರಿದುಹೋಗುವುದು. ಇದೆ ಮುಂದೆ ನದಿಯಾಗಿ ಪಹಿಲಗಾಮಿನ ಹತ್ತಿರ ಹರಿಯುವುದು. ನಾನು ಮಾಡಿದ ಪ್ರಯಾಣದಲ್ಲೆಲ್ಲಾ ಇಂದಿನದು ತುಂಬಾ ಶ್ರಮಸಾಧ್ಯವಾದುದು. ಆಯಾಸ ಎಲ್ಲ ದಿನಗಳಿಗಿಂತಲೂ ಹೆಚ್ಚಾಗಿತ್ತು. ಆದರೆ ನಾವು ನೋಡಿದ ಈ ಭವ್ಯಸೌಂದರ್ಯ ದೃಶ್ಯ ಮತ್ತೆಲ್ಲವನ್ನೂ ಮರೆಸುವಂತೆ ಇತ್ತು. ಇಂತಹ ಪ್ರಕೃತಿ ದೃಶ್ಯವನ್ನು ನೋಡುವುದು ಅಪರೂಪ. ಕಷ್ಟಕ್ಕೆ ತಕ್ಕ ಪ್ರತಿಫಲ ಶೇಷನಾಗ ಸರೋವರಕ್ಕೆ ಬಂದಮೇಲೆ ದೊರಕಿತು. ಸಂಜೆ ಊಟಮಾಡಿ ಮುಂದೆ ಕುಳಿತೆವು. ಹುಣ್ಣಿಮೆಗೆ ಇನ್ನೂ

ಎರಡುದಿನಮಾತ್ರ ಉಳಿದಿತ್ತು. ಸಂಧ್ಯಾರಾಗದ ಸೌಂದರ್ಯ ಕಳೆದಮೇಲೆ ಕ್ರಮೇಣ ಚಂದ್ರ ಸರೋವರದ ಮೇಲೆ ಬೆಳಗಲು ಮೊದಲಾದ. ಚಂದ್ರನಕಾಂತಿ ಸರೋವರದ ನೀರಿನಮೇಲೆ ಬಿದ್ದಾಗ ಪ್ರತಿಬಿಂಬಿಸಿದ ದೃಶ್ಯ ಒಂದು ಅಪೂರ್ವ ಆನಂದಾನುಭವವನ್ನು ಕೊಟ್ಟಿತು. ಸಮಾಧಿಸ್ಥ ಶಿವನ ಮೊಗದ ಮಂದಹಾಸದಂತೆ ಇತ್ತು. ಕೈಲಾಸಪರ್ವತಗಳ ಶಿಖರಗಳು ಧ್ಯಾನಮಗ್ನ ಶಿವನ ನೆನಪನ್ನು ತರುತ್ತಿತ್ತು. ಈ ಒಂದು ದೃಶ್ಯಸಾಕು ನಮ್ಮ ಕಷ್ಟಕ್ಕೆ ತಕ್ಕ ಪ್ರತಿಫಲ ಕೊಡುವುದಕ್ಕೆ. ಈ ಮಹಾದರ್ಶನಾನಂದಕ್ಕೆ ನಾವು ಪಟ್ಟ ಕಷ್ಟವೆಲ್ಲವೂ ಅತ್ಯಲ್ಪವೆಂದು ತೋರಿತು. ಇಂದ್ರಿಯಾತೀತ ಆನಂದನನಿಗಲ್ಲಿ ದೊರಕುವುದು. ಅದನ್ನು ಕುಳಿತು ನೋಡುತ್ತ ನೋಡುತ್ತ ತನ್ಮಯನಾಗುತ್ತಿದ್ದೆ. ಆದರೆ ಚಳಿ ಗಾಳಿ, ಹಾಕಿಕೊಂಡ ಬಟ್ಟೆಗಳೆಲ್ಲವನ್ನೂ ತೂರಿ ಮೂಳೆಗೂ ಪ್ರವೇಶಿಸುವಂತೆ ಇತ್ತು. ಆ ದಿವಸ ಸೌಂದರ್ಯಕ್ಕೆ ಮಣಿದು ರೂಪಿಗೆ ಬಂದು ಇದ್ದ ಬೆಚ್ಚನೆಯ ಕಂಬಳಿಯನ್ನೆಲ್ಲ ಹೊದೆದುಕೊಂಡು, ಸರೋವರದ ವಿಮಲ ಕಾಂತಿಯೊಂದನ್ನೇ ನೆನೆಯುತ್ತ ಮಲಗಿದೆವು. ಅಂದಿನ ದಿನದಷ್ಟು ಗಾಢನಿದ್ರೆಯೆಂದೂ ಬಂದಿರಲಿಲ್ಲ. ಅಷ್ಟು ಬೇಸತ್ತುಹೋಗಿದ್ದೆವು. ನಮ್ಮ ಯಾತ್ರೆಯಲ್ಲಿ ಇಂದಿನ ದಿನ ಒಂದು ಅತಿರೇಕದ ದಿನ. ಅತಿಕಷ್ಟದ ದಾರಿ, ಸುಂದರತರ ದೃಶ್ಯ, ಗಾಢತಮ ನಿದ್ರೆ.

೨೮ನೇ ತಾರೀಖು ಬೆಳಿಗ್ಗೆ ಏಳು ಗಂಟೆ ಹೊತ್ತಿಗೆ ಎದ್ದು ಹೊರಟೆವು. ಇಲ್ಲಿಂದ ಪಂಚತರಣಿ ಎಂಬ ಮೂರನೆ ನಿಲ್ದಾಣಕ್ಕೆ ಎಂಟು ಮೈಲಿಗಳು, ಇಲ್ಲಿಂದ ಸುಮಾರು ಎರಡು ಮೈಲಿ ಮೇಲೇರಬೇಕು. ಆಗ ವಾಬ್‌ಜಾನ್ ಎಂಬ ಸ್ಥಳಕ್ಕೆ ಬರು

ತ್ತೇವೆ. ಅದು ೧೪೦೦೦ ಅಡಿಗಳ ಎತ್ತರದಲ್ಲಿರುವುದು. ನಮ್ಮ ಯಾತ್ರೆಯಲ್ಲೆಲ್ಲಾ ಏರುವ ಅತ್ಯಂತ ಎತ್ತರವಾದ ಸ್ಥಳವೇ ಇದು. ಸುತ್ತಲೂ ಕೊರೆಯುವ ಗಾಳಿ ಬೀಸುತ್ತ ಇರುವುದು. ಇಲ್ಲಿಂದ ಪಂಚತರಣಿ ಕಡೆಗೆ ಇಳಿಜಾರು. ನಡೆದು ಕೊಂಡು ಹೋಗಲು ಕಷ್ಟವೇನೂ ಆಗಲಿಲ್ಲ. ಪಂಚತರಣಿಗೆ ಸುಮಾರು ಹನ್ನೊಂದು ಗಂಟೆ ಹೊತ್ತಿಗೆ ಸೇರಿದೆವು. ಇದರ ಎತ್ತರ ಸುಮಾರು ೧೨೫೩೦ ಅಡಿಗಳು. ಪಂಚತರಣಿ ಅಂದರೆ ಐದು ನದಿಗಳು ಸಂಧಿಸುವ ಸ್ಥಳ. ದೊಡ್ಡ ಬಯಲಿನಲ್ಲಿ ಐದು ಹಿಮ ನದಿಗಳು ಸಣ್ಣದು ದೊಡ್ಡದು ಎಲ್ಲಾ ಸೇರಿ, ಇಲ್ಲಿ ಸೇರುವುವು. ಇದರ ದಡದಲ್ಲಿಯೇ ಡೇರೆಯನ್ನು ಹೂಡಿದೆವು. ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು ಆದಮೇಲೆ ಆ ನದಿಯಲ್ಲಿ ಸ್ನಾನ ಮಾಡಲು ಸಾಧ್ಯವೇ ಎಂದು ನಾನು ಯೋಚಿಸುತ್ತಿದ್ದೆ. ಅದರಲ್ಲಿ ಕಾಲಿಟ್ಟ ಒಡನೆ ಕಾಲೆಲ್ಲ ಸೇದಿಕೊಂಡು ಹೋಗುತ್ತಿತ್ತು. ಅಂತಹ ಸ್ಥಿತಿಯಲ್ಲಿ ಸ್ನಾನಮಾಡುವುದು ಅಸಾಧ್ಯ. ಬಿಸಿ ನೀರನ್ನು ಕಾಯಿಸಿ ಸ್ನಾನಮಾಡಲು ಪ್ರಯತ್ನಿಸಿದರೆ ಮೂರು ದಿನದ ಊಟದ ಇದ್ದಿಲೆಲ್ಲ ಖರ್ಚಾಗಿ ಮೂರನೆ ದಿನದಿಂದ ಅಡಿಗೆ ಇಲ್ಲದೆ ಉಪವಾಸಮಾಡಬೇಕಾಗುವುದು. ಆದರೂ ಸ್ನಾನ ಬಿಟ್ಟು ಎರಡು ದಿನಗಳಾಗಿತ್ತು. ನಡೆದು ಬೆವರಿ ಬೇಸತ್ತು ಹೋಗಿದ್ದೆವು. ಆಗ ಬಿಸಿಲಿನಲ್ಲಿ ಸ್ವಲ್ಪ ಹಾಯಾಗಿ ಕುಳಿತುಕೊಂಡಿದ್ದಾಗ ನಮ್ಮ ಮಿಲಿಟರಿ ಗೆಳೆಯ ಬರಿ ಕೌಪೀನದಲ್ಲಿ ಕೊನೆಯ ಒಂದು ನದಿ ಹತ್ತಿರ ಸ್ನಾನಮಾಡುತ್ತಿದ್ದ. ಇದನ್ನು ನೋಡಿ ನಮಗೆ ಆಶ್ಚರ್ಯವಾಯಿತು. ಈ ಮನುಷ್ಯ ಸ್ನಾನ ಮಾಡುತ್ತ ಹಾಗೆ ಚಳಿಯಿಂದ ಘನೀಭೂತನಾಗಿಬಿಟ್ಟರೆ ಇವನ

ದುಃಖಸಮಾಚಾರವನ್ನು ಮಿಕ್ಕವರಿಗೆ ತಿಳಿಸುವ ಜವಾಬ್ದಾರಿ ನಮಗೆ ಬರುವುದು ಎಂದು ಸ್ನಾನಮಾಡುವವನ ಹತ್ತಿರ ಹೋಗಿ "ಏಸು ನೀರು ಹೆಚ್ಚು ತಣ್ಣಗಿಲ್ಲವೆ" ಎಂದೆ. ಆತ ಇಲ್ಲ ಕೇವಲ ನಮ್ಮ ದೇಶದ ಕಡೆ ತಣ್ಣೀರು ಇರುವಂತೆ ಮಾತ್ರ ಇರುವುದು ಎಂದ. ನದಿ ಹತ್ತಿರ ಹೋಗಿ ಜೋಪಾನದಿಂದ ಮುಟ್ಟಿದಾಗ ಆ ನೀರು ಅಷ್ಟು ತಂಪಾಗಿರಲಿಲ್ಲ. ಮತ್ತೆ ಕೆಲವು ಗಜ ದೂರದಲ್ಲಿ ಹರಿಯುವ ಇನ್ನೊಂದು ನದಿಯನ್ನು ಕೈಯ್ಯಲ್ಲಿ ಮುಟ್ಟಿದೊಡನೆಯೇ ವಿದ್ಯುತ್ ಶಕ್ತಿಯಂತೆ ಆ ತಂಪು ನಮ್ಮ ಕೈಗೆ ತಾಕುತ್ತಿತ್ತು. ಇದಕ್ಕೆ ಕಾರಣ, ನೀರಿನ ಉಷ್ಣ ಅಥವಾ ಶೀತ, ನೀರು ಎಷ್ಟು ದೂರದಿಂದ ಹರಿಯುತ್ತದೆ, ಎಷ್ಟು ಗಾತ್ರವಿದೆ ಎನ್ನುವುದರ ಮೇಲೆ ನಿಂತಿದೆ. ಸಣ್ಣ ಹಿಮ ಪ್ರವಾಹ ಬಹಳ ದೂರದಿಂದ ಹರಿದುಕೊಂಡು ಬರುವಾಗ ಬಿಸಿಲಿಗೆ ಸ್ವಲ್ಪ ತಂಪನ್ನು ಕಳೆದುಕೊಳ್ಳುವುದು. ಹಾಗಲ್ಲದೆ ಹತ್ತಿರದಿಂದ ಹಿಮಕರಗಿ ಹರಿದು ಬರುವ ದೊಡ್ಡ ಪ್ರವಾಹದಲ್ಲಿ ಹೆಚ್ಚು ಶೀತವಿರುವುದು. ಎಲ್ಲಾ ಧೈರ್ಯವಾಗಿ ನೀರಿಗೆ ಇಳಿದು ಸ್ನಾನಮಾಡಿ ಒಟ್ಟೆ ಒಗೆದು ಡೇರೆ ದಾರಗಳ ಮೇಲೆಲ್ಲಾ ಬಟ್ಟೆ ಒಣಗಿಹಾಕಿದೆವು. ಸ್ವಲ್ಪಹೊತ್ತಾದಮೇಲೆ ಹಲವು ಯಾತ್ರಿಕರು ಒಬ್ಬರಾದ ಮೇಲೊಬ್ಬರು ಒಂದು ಪಾಳೆಯಬಿಟ್ಟರು. ನಾವೇ ಸುಮಾರು ಇಪ್ಪತ್ತೈದು ಮೂವತ್ತು ಜನರಿದ್ದೆವು. ಆ ನಿರ್ಜನ ಪ್ರದೇಶದಲ್ಲಿ ಮತ್ತು ಈ ಸಮಯದಲ್ಲಿ ಅಷ್ಟು ಜನ ಸೇರುವುದು ಅಪರೂಪ. ನಮಗೂ ಒಂಟಿಯಾಗಿದ್ದು ಸಾಕಾಗಿತ್ತು. ಹೊಸ ಹೊಸ ಮಾನವ ವ್ಯಕ್ತಿಗಳನ್ನು ನೋಡಿದಾಗ ಆನಂದವಾಯಿತು. ಮಾನವ ಸಾಮಾಜಿಕ ಜೀವಿ. ಕೆಲವು ವೇಳೆ

ಬೇಸತ್ತು ನಿರ್ಜನಪ್ರದೇಶಕ್ಕೆ ಹೊರಟು ಹೋದರೂ ಸ್ವಲ್ಪ ಹೊತ್ತಾದ ಮೇಲೆ ಜೊತೆಗಾರರನ್ನು ಇಚ್ಛಿಸುತ್ತಾನೆ. ಯಾತ್ರಿಕರ ತಂಡದಲ್ಲಿ ಮುದುಕಿಯರಿದ್ದರು, ಮುದುಕರಿದ್ದರು. ಪ್ರಾಯದ ಗಂಡಸರು, ಹೆಂಗಸರು ಇದ್ದರು. ಜೊತೆಗೆ ಒಂದು ಮನೆಯ ಸಂಸಾರವೆಲ್ಲ ಬಂದಿತ್ತು. ಒಂದು ವರ್ಷದ ಮಗುವಿನಿಂದ ಹಿಡಿದು ಅಧಕ್ಕೆ ಹಿರಿಯದಾದ ನಾಲ್ಕೈದು ಜನ ಮಕ್ಕಳು ತಾಯಿ, ತಂದೆ, ತಾತ ಎಲ್ಲರೂ ಇದ್ದರು. ಇವರನ್ನು ನೋಡಿ ನಮಗೆ ಸಂತೋಷವಾಯಿತು. ಆ ಹುಡುಗರೆಲ್ಲ ಕುದುರೆಯ ಮೇಲೆ ಬಂದಿದ್ದರು. ಮುದುಕ ಕೂಡ ಕುದುರೆಯ ಮೇಲೆ ಬಂದಿದ್ದ. "ಈ ವಯಸ್ಸಿನಲ್ಲಿ ಇಂತಹ ತೀರ್ಥಯಾತ್ರೆಯೆ ?" ಎಂದು ಕೇಳಿದಾಗ, "ಹೇಗಿದ್ದರೂ ಇನ್ನು ಕೆಲವು ವರ್ಷದಲ್ಲಿ ನಮ್ಮ ಜೀವನಯಾತ್ರೆ ಮುಗಿಯುತ್ತದೆ. ಆ ಜೀವನ ಅಮರನಾಥ ಯಾತ್ರೆ ಮಾಡುವಾಗ ಹೋದರೆ ಅದೊಂದು ದೊಡ್ಡ ವರ ಆದರೆ ಆತಹದೇನು ಈ ದೇಹಕ್ಕೆ ಆಗುವ ಅಂಜಿಕೆ ಇಲ್ಲ" ಎಂದನು. ಆ ಸಣ್ಣ ಸಣ್ಣ ಹುಡುಗರನ್ನು ಹೇಗೆ ಕರೆದುಕೊಂಡು ಹೋಗುತ್ತೀರಿ ಎಂದು ಕೇಳಿದಾಗ, ಹತ್ತು ಹನ್ನೆರಡು ವರ್ಷದ ಇಬ್ಬರು ಹುಡುಗರು ತಾವೇ ಕುದುರೆಯ ಮೇಲೆ ಕುಳಿತುಕೊಂಡು ಹೋಗುತ್ತಾರೆ. ಸಣ್ಣ ಒಂದು ವರ್ಷದ ಮಗು ತಾಯಿಯೊಂದಿಗೆ ಕುದುರೆಯ ಮೇಲೂ, ನಾಲ್ಕು ವರ್ಷದ ಹುಡುಗ ತಂದೆಯ ಜೊತೆಗೆ ಕುದುರೆಯ ಮೇಲೂ ಹೋಗುತ್ತಾರೆ ಎಂದನು. ಅನೇಕ ಹೆಂಗಸರು ಕೂಡ ಧೈರ್ಯವಾಗಿ ಕುದುರೆಯ ಮೇಲೆ ಎಂತಹ ಕಡಿದಾದ ರಸ್ತೆಯಲ್ಲಿಯೂ ಹೋಗುತ್ತಿದ್ದರು. ತೀರ್ಥಯಾತ್ರೆಗಾಗಿ ಇವರಲ್ಲಿದ್ದ ಧೈರ್ಯ ಉತ್ಸಾಹ ಭಕ್ತಿ

ಯನ್ನು ನೋಡಿ ನನಗೆ ಆಶ್ಚರ್ಯವಾಯಿತು. ನಾನು ಮೊದಲು ತುಂಬಾ ಶಕ್ತಿವಂತರು ಮತ್ತು ಗಂಡಸರು ಮಾತ್ರ ಈ ತೀರ್ಥ ಯಾತ್ರೆಗೆ ಬರುತ್ತಾರೆಂದು ಭಾವಿಸಿದ್ದೆ. ಆದರೆ ನನ್ನ ಕಣ್ಣ ಮುಂದೆ ಇರುವ ಮುದುಕರು ಮಕ್ಕಳು ಇವರನ್ನು ನೋಡಿದಾಗ ಅವರ ಭಕ್ತಿ ಎಷ್ಟು ಆಳವಾದುದು, ಶಿವನಿಗಾಗಿ ಎಲ್ಲವನ್ನೂ ಬಿಟ್ಟು ಇಷ್ಟು ಕಷ್ಟವನ್ನು ಸಹಿಸುವುದಕ್ಕಾಗಿ ಸಿದ್ಧವಾಗಿರುವರಲ್ಲ ಎಂದುಕೊಂಡೆ.

ಮೂರನೆ ದಿನ ೨೧ನೇ ತಾರೀಖು ಹುಣ್ಣಿಮೆ. ಇಂದೇ ಅಮರನಾಥ ದರ್ಶನಕ್ಕೆ ಹೋಗುವ ದಿನ. ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು ನಮ್ಮ ದಿನಚರಿಯನ್ನು ಪೂರೈಸಿಕೊಂಡೆವು. ಹತ್ತಿರದಲ್ಲೆ ವಲಸೆಬಂದಿದ್ದ ಕೆಲವು ಕುರುಬರಿಗೆ ಹೇಳಿ ಸವಾರಿಗೆ ನಾಲ್ಕು ಕುದುರೆ ಮಾಡಿಕೊಂಡೆವು. ಅವತ್ತೇ ಅಮರನಾಥ ದರ್ಶನ ಮಾಡಿಕೊಂಡು ಚಂದನವಾಡಿಯ ತನಕ ಹೊರಟು ಬಿಡಬೇಕೆನಿಸಿತು. ನಡೆದುಕೊಂಡುಹೋದರೆ ಅದು ಅಸಾಧ್ಯ. ಆದರೆ ನಮ್ಮಲ್ಲಿ ಕುದುರೆಯಮೇಲೆ ಕುಳಿತುಕೊಂಡು ಯಾರಿಗೂ ಅಭ್ಯಾಸವಿಲ್ಲ. ಇದೊಂದು ನವೀನ ಅನುಭವ. ಏಳು ಬೀಳು ಗಳಲ್ಲಿ ಕುದುರೆಯಮೇಲೆ ಹತ್ತಿ ಇಳಿದು ಹೋಗಬೇಕಾದರೆ ಪ್ರಥಮತಃ ಕುಳಿತುಕೊಳ್ಳುವವನಿಗೆ ಇದು ಅನುಭವ ವೇದ್ಯ ವಾಗಬೇಕೇಹೊರತು ವಿವರಿಸುವುದು ಕಷ್ಟ.

ಪಂಚತರಣಿಯಿಂದ ಐದುಘಂಟೆಗೆ ಹೊರಟೆವು. ಇಲ್ಲಿಂದ ಅಮರನಾಥಕ್ಕೆ ಐದು ಮೈಲಿಗಳು. ಇದರಲ್ಲಿ ಒಂದೂವರೆ ಮೈಲಿ ಬೆಟ್ಟ ಏರಬೇಕು. ನಂತರ ಆ ಒಂದೂವರೆ ಮೈಲಿ ಬೆಟ್ಟ ಇಳಿಯಬೇಕು ನಂತರ ಹಿಮದಿಂದ ತುಂಬಿದ ಕಣಿವೆಯೊಂದರೊಳಗೆ ಸುಮಾರು

ಎರಡುಮೈಲಿ ನಡೆದುಕೊಂಡು ಹೋಗಬೇಕು. ನಮಗೆ ಮೊದಲೆ ಕುದುರೆಯ ಮೇಲೆ ಕುಳಿತು ಅಭ್ಯಾಸವಿಲ್ಲ. ಇಳಿಜಾರಿನಲ್ಲಿ ಅದು ಒಂದುಸ್ವಲ್ಪ ಓಡುವುದಕ್ಕೆ ಮೊದಲಾಯಿತೆಂದರೆ ಎಲ್ಲಿ ಕೆಳಗೆ ಬಿದ್ದುಬಿಡುವೆವೊ ಎಂಬ ಅಂಜಿಕೆ. ಬೆಟ್ಟ ಏರುವಾಗ ಲಂತೂ ದಾರಿ ಅತಿ ಕಡಿದು. ಕೆಲವು ಅಂಗುಲ ಅತ್ತಲಾಕಡೆ ಇತ್ತಲಾಕಡೆ ಕುದುರೆ ಜಾರಿದರೂ ಕೆಳಗೆ ಹಿಮನದಿಗಳು ಹರಿಯುವ ಪ್ರವಾಹಕ್ಕೆ ಬೀಳಬೇಕು. ಆ ನೀರಿನಲ್ಲಿ ಎರಡು ನಿಮಿಷ ತೇಲಿದರೆ ದೇಹವೆಲ್ಲ ಹಿಮದಂತೆ ಘನೀಭೂತವಾಗುವುದು. ಆಗಲೇ ಅಂಜಿಕೆ ಅಂಜಿಕೆಯಿಂದ ಕುದುರೆಯಮೇಲೆ ಕುಳಿತುಕೊಂಡು ಲಗಾಮು ಜೀನು ಎಲ್ಲವನ್ನೂ ಹಿಡಿದುಕೊಂಡು ಜೋಪಾನದಿಂದ ಹತ್ತುತ್ತಿರುವಾಗ ಹಿಂದಿನಿಂದ ಬರುವ ಯಾತ್ರಿಕಳೊಬ್ಬಳು ನಮ್ಮನ್ನು ನೋಡಿದಳು. ಆಕೆ ತನ್ನ ಕುದುರೆ ಮುಂದೆ ಒಂದುವರ್ಷದ ಮಗುವನ್ನು ಕೂಡಿಸಿಕೊಂಡು ಲೀಲಾಜಾಲವಾಗಿ ಮರಣ ಕೊಂಚುಹಾಕುತ್ತಿರುವ ಕಣಿವೆಯನ್ನೂ ಗಮನಕ್ಕೆ ತಾರದೆ ಹೋಗುತ್ತಿದ್ದಳು. "ಡರ್‌ನಕೊ ಸ್ವಾಮಿಜಿ, ಕುಚ್‌ನಯ್" ಎಂದು ಅಭಯವಚನವಿತ್ತಳು. ಆಕೆಯ ಧೈರ್ಯ ನೋಡಿ ನಮಗೂ ಧೈರ್ಯ ಬಂದಿತು. ಈ ಧೈರ್ಯ ಒಂದು ಸಾಂಕ್ರಾಮಿಕ ವಸ್ತು. ಒಬ್ಬನಲ್ಲಿದ್ದರೆ ಮತ್ತೊಬ್ಬನಿಗೂ ಬರುವುದು. ನಮ್ಮ ಮುಂದೆ ಆಕೆ ಹೋದಳು. ಅವಳನ್ನು ಹಿಂಬಾಲಿಸಿದೆವು. ಆ ಮಗುವಿನ ಮೇಲೆ ಮಮತೆ ಎಷ್ಟು ಆ ತಾಯಿಗೆ! ಆ ಮಗುವಿಗಾಗಿ ಎಷ್ಟು ಕಷ್ಟವನ್ನು ಸಹಿಸುವಳು. ಸುಖವಾಗಿ ಅದನ್ನು ಮನೆಯಲ್ಲಿ ಬಿಟ್ಟು ಬರಬಹುದಾಗಿತ್ತು. ಆದರೆ ಆ ಮಗುವಿಗೂ ಅಮರನಾಥನ ದರ್ಶನ

ವಾಗಲಿ, ಅಮರನಾಥನ ಆಶೀರ್ವಾದ ಬಲವಿರಲಿ, ಎಂದ. ಶಿವನ ಅಡಿದಾವರೆಯಲ್ಲಿಡಲು ಕರೆದುಕೊಂಡು ಹೋಗುತ್ತಿದ್ದಳು. ಇಂತಹ ತಾಯಿಯ ಮಗುವಾಗಿ ಹುಟ್ಟುವುದೊಂದು ಭಾಗ್ಯ ವೆಂದುಕೊಂಡೆ. ಆಕೆ ತನ್ನ ಮಗುವಿನ ಮೇಲೆ ಮಾತ್ರ ಆ ತಾಯ್ತನವನ್ನು ಬೀರಲಿಲ್ಲ. ನಮ್ಮೆಲ್ಲರನ್ನು ಅದೇ ಮಾತೃ ಸಹಜ ಪ್ರೇಮದಿಂದ ಕಂಡಳು. ಇದನ್ನು ನೋಡಿದಾಗ "ಯಾ ದೇವಿ ಸರ್ವಭೂತೇಷು ಮಾತೃ ರೂಪೇಣ ಸಂಸ್ಥಿತಾ ನಮಸ್ತಸ್ಯೈ ನಮೋನಮಃ" ಯಾವ ದೇವಿ ಎಲ್ಲಾ ಭೂತಗಳ ಲ್ಲಿಯೂ ತಾಯಿಯೊಲುಮೆಯಂತೆ ಇರುವಳೊ ಅವಳಿಗೆ ನಮ ಸ್ಕಾರವೆಂಬ ಸಪ್ತಶತಿಯ ನುಡಿ ಜ್ಞಾಪಕಕ್ಕೆ ಬಂದಿತು.

ಹಿಮದ ಮೇಲೆ ಸುಮಾರು ಎರಡು ಮೈಲಿ ನಡೆದು ಕೊಂಡು ಹೋದೆವು. ಕಣಿವೆಯ ಒಂದು ಪಕ್ಕದಲ್ಲಿ ಬೆಟ್ಟದ ಮಧ್ಯದಲ್ಲಿ ದೊಡ್ಡದೊಂದು ಗುಹೆ ಕಾಣಿಸಿಕೊಂಡಿತು. ಅದೇ ಅಮರನಾಥಗುಹೆ. ೧೩೦೦೦ ಅಡಿ ಎತ್ತರದಲ್ಲಿದೆ. ಗುಹೆ ೫೦ ಅಡಿ ಎತ್ತರ ೫೫ ಅಡಿ ಅಗಲವಿದೆ. ಒಳಗೆ ಸುಮಾರು ೫೦ ಅಡಿಯಷ್ಟು ಉದ್ದವಿದೆ. ಗುಹೆಯ ಹೊರಗಡೆ ಅದರ ಪಕ್ಕದಲ್ಲೇ ಸಣ್ಣ ಒಂದು ಹಿಮಝರಿ ಮೇಲಿನಿಂದ ಹರಿದು ಬರುತ್ತಿದೆ. ಅದನ್ನು ಅಮರಗಂಗವೆನ್ನುತ್ತಾರೆ. ಯಾತ್ರಿಕರು ಅಲ್ಲಿ ಸ್ನಾನಮಾಡಿ ಗುಹೆಯ ಒಳಗೆ ಪ್ರವೇಶಿಸುವರು. ಗುಹೆಯ ಒಂದು ಮೂಲೆಯಲ್ಲಿ ಶಿವಲಿಂಗದ ಆಕಾರದ ದೊಡ್ಡ ಹಿಮರಾಶಿ ಬಿದ್ದಿದೆ. ಇದನ್ನೇ ಅಮರನಾಥಶಿವ ಎನ್ನುವರು. ಕಾಶ್ಮೀರದಲ್ಲೆಲ್ಲಾ ಹಿಂದೂಗಳಿಗೆ ಪರಮಪವಿತ್ರ ಯಾತ್ರಾ ಸ್ಥಳವಿದು. ಇದು ಪ್ರಕೃತಿ ನಿರ್ಮಿತ ದೇವಾಲಯ. ಗುಹೆ


ಯನ್ನು ಯಾರೂ ಕೊರೆದಿಲ್ಲ. ಪ್ರಕೃತಿಯೆ ಚಳಿ, ಗಾಳಿ, ಬಿಸಿಲು, ಮಳೆ ಎಂಬ ತನ್ನ ಆಯುಧದಿಂದ ಈ ದೊಡ್ಡ ಗುಹೆ ಯನ್ನು ಬಿಡಿಸಿದೆ. ಅಲ್ಲಿರುವ ಲಿಂಗವು ಕೂಡ ಪ್ರಕೃತಿ ನಿರ್ಮಿತ. ಮನುಷ್ಯನ ಯಾವ ಸುತ್ತಿಗೆಯ ಪೆಟ್ಟು ಇದಕ್ಕೆ ಬಿದ್ದಿಲ್ಲ. ಇಲ್ಲಿ ಪೂಜಾರಿಗಳು ಯಾರೂ ಇಲ್ಲ. ಯಾತ್ರಿ ಕರೇ ಪೂಜಕರು. ತಮ್ಮ ಮನಸ್ಸಿಗೆಬಂದ ಮಂತ್ರದಿಂದ, ಭಾವದಿಂದ ಈ ಧವಳ ಹಿಮಲಿಂಗವನ್ನು ಆರಾಧಿಸಬಹುದು. ಎಲ್ಲ ಕಡೆಗಳಲ್ಲಿಯೂ ಸಮಾಧಿಯಂತಹ ಮೌನ. ಗುಹೆಯ ಹೊರಗೆ ಮತ್ತು ಮೇಲೆಲ್ಲಾ ಹಿಮರಾಶಿ. ಅದರೊಳಗೆ ಲೋಕಾನುಕಂಪಿ ಶಿವ ಧ್ಯಾನಮಗ್ನನಾಗಿರುವನು. ಯಾತ್ರಿಕರು ಸಂಸಾರದಲ್ಲಿ ಬಳಲಿ ತಮ್ಮ ದುಃಖವನ್ನು ಆತನಡಿದಾವರೆಯ ಲ್ಲಿಟ್ಟು ಹೃದಯ ಹಗುರ ಮಾಡಿಕೊಳ್ಳಲು ಬಂದಿರುವರು. ಒಂದು ಸಣ್ಣ ಸೀಸೆಯಲ್ಲಿ ಗಂಗಾಜಲವನ್ನು ತಂದಿದ್ದೆವು. ಅದರಿಂದ ಶಿವನಿಗೆ ಅಭಿಷೇಕಮಾಡಿದೆವು. ಒಣಗಿದ ಬಿಲ್ವ ದಳದಿಂದ ಅರ್ಚಿಸಿದೆವು. ಕಲ್ಲುಸಕ್ಕರೆ, ಬಾದಾಮಿ, ದ್ರಾಕ್ಷಿ ಯನ್ನು ನೈವೇದ್ಯಕ್ಕೆ ಇಟ್ಟು ಮೌನವಾಗಿ ಕೆಲವು ಕಾಲ ಅಲ್ಲೇ ಧ್ಯಾನಾಸಕ್ತರಾದೆವು. ಸ್ವಾಮಿ ವಿವೇಕಾಂನದರು ಸುಮಾರು ಐವತ್ತು ವರುಷಗಳ ಹಿಂದೆ ಬಂದಿದ್ದರು. ಆ ಪವಿತ್ರಸ್ಥಳ ವಿವೇಕಾನಂದರಂತಹ ಭಕ್ತರ ಸಂಗದಿಂದ ಪವಿತ್ರತರವಾಯಿತು. ಬಾಲ್ಯದಿಂದಲೂ ದೊಡ್ಡ ಶಿವಭಕ್ತರವರು. ಶಿವ ಅವರ ಆರಾ ಧನೆಯ ಇಷ್ಟದೇವನಾಗಿದ್ದ. ಅವರೇ ರಚಿಸಿದ ಒಂದು ಶಿವ ಸ್ತೋತ್ರ ಜ್ಞಾಪಕಕ್ಕೆ ಬಂದಿತು. ಅದನ್ನು ಮನದಲ್ಲಿಯೇ ಹೇಳಿಕೊಂಡೆ.

ಗಳಿತ ತಿಮಿರ ಮಾಲಃ ಶುಭ್ರ ತೇಜಃ ಪ್ರಕಾಶಃ
ಧವಲ ಕಮಲ ಶೋಭಃ ಜ್ಞಾನಪುಂಜಾಟ್ಟಹಾಸಃ
ಯೋಗಿಜನ ಹೃದಿಗಮ್ಯಃ ನಿಶ್ಚಲಂ ಧ್ಯಾಯಮಾನಃ
ಪ್ರಣ ಶಮಯತು ಮಾಂ ಸಃ ಮಾನಸೋ ರಾಜಹಂಸಃ||
ದುರಿತದಲನದಕ್ಷಂ ದಕ್ಷಜಾದತ್ತದೋಷಂ
ಕಲಿತಕಲಿಕಲಂಕಂ ಕಮ್ರ ಕಲ್ಹಾರ ಕಾಂತಂ
ಪರಹಿತ ಕರಣಾಯ ಪ್ರಾಣ ವಿಚ್ಛೇದ ಸೂತುಕಂ
ನತನಯನ ನಿಯುಕ್ತಂ ನೀಲಕಂಠಂ ನಮಾಮಃ—


ತಿಮಿರಮಾಲೆ ಯಾರಲ್ಲಿ ಜಾರಿಹೋಗಿದೆಯೊ, ಶುಭ್ರ ತೇಜಪ್ರಕಾಶನಾಗಿ ಧವಲಕಮಲ ಶೋಭದಂತೆ ಯಾರು ಇರುವನೊ, ಯಾರ ಮಂದಹಾಸ ನಮ್ಮಲ್ಲಿ ಜ್ಞಾನವನ್ನು ಪ್ರಚೋದಿಸುವುದೊ, ಯಾರನ್ನು ನಿರಂತರ ಧ್ಯಾನದಿಂದ ತಮ್ಮ ಹೃದಯಾಂತರಾಳದಲ್ಲಿ ಜ್ಞಾನಿಗಳು ತಿಳಿದುಕೊಂಡಿರುವರೊ, ಅಂತಹ ಮಾನಸ ಸರೋವರದಲ್ಲಿ ವಿಹರಿಸುತ್ತಿರುವ ಪರಮ ಶಿವನೆಂಬ ರಾಜಹಂಸ ನಮ್ಮನ್ನು ರಕ್ಷಿಸಲಿ. ಅನಂತ ಪ್ರಣಾಮಗಳು ಅವನಿಗೆ.

"ಯಾರು ತಮ್ಮ ದುರಿತಗಳನ್ನು ಪರಿಹರಿಸುವನೋ, ಯಾರಿಗೆ ದಕ್ಷ ತನ್ನ ಮಗಳನ್ನು ಕೊಟ್ಟನೊ, ಯಾರು ಕಲ್ಹಾರ ಪುಷ್ಪದಂತೆ ಸುಂದರನಾಗಿರುವನೊ, ಯಾರು ಮತ್ತೊಬ್ಬರ ಹಿತಕ್ಕಾಗಿ ತನ್ನ ಪ್ರಾಣವನ್ನು ಕೊಡಲು ಸದಾಸಿದ್ಧನಾಗಿರುವನೊ, ಯಾರದೃಷ್ಟಿ ದೀನರಮೇಲೆ ಅನುಗಾಲವಿರುವುದೊ ಅಂತಹ ನೀಲಕಂಠನಿಗೆ ನಮಸ್ಕಾರ."

ಹಿಂದೆ ದೇವಾಸುರರು ಸಾಗರವನ್ನು ಕಡೆಯುತ್ತಿದ್ದಾಗ



ಅಮರನಾಥ ಶಿವ



ಅಮರನಾಥ ಗುಹೆ

ಹುಟ್ಟಿದ ಐರಾವತ, ಲಕ್ಷ್ಮಿ, ಅಮೃತ ಮುಂತಾದುವನ್ನು ಸ್ವೀಕರಿಸಲು ದೇವ ಮತ್ತು ದಾನವರು ನಾವು ತಾವೆಂದು ಮುಂದೆ ಬಂದರು. ಆದರೆ ತ್ರಿಲೋಕವನ್ನು ದಹಿಸುವ ಹಾಲಾಹಲವೆಂಬ ವಿಷ ಹುಟ್ಟಿದಾಗ ಎಲ್ಲರೂ ಓಡಿದರು. ಆಗ ಶಿವ ಕರುಣೆಯಿಂದ ಲೋಕ ರಕ್ಷಣೆಗಾಗಿ ಆ ವಿಷವನ್ನು ತಾನು ಪಾನಮಾಡಿದನು. ಆಧ್ಯಾತ್ಮಿಕ ಸಾಧನೆ ಎಂದರೆ ನಮ್ಮ ಮನೋಸರೋವರದ ಮಥನ. ಅದರಲ್ಲಿ ಒಳ್ಳೆಯ ಸಂಸ್ಕಾರಗಳೂ ಹುದುಗಿವೆ ಕೆಟ್ಟ ಸಂಸ್ಕಾರಗಳೂ ಹುದುಗಿವೆ. ಒಳ್ಳೆಯ ಸಂಸ್ಕಾರದಿಂದ ಹೇಗೆ ನಮಗೆ ಮತ್ತು ನೆರೆಹೊರೆಯವರಿಗೆ ಸಹಾಯವಾಗುವುದೋ ಅದರಂತೆಯೇ ದುಷ್ಟಹೀನ ಸಂಸ್ಕಾರಗಳು ಮೇಲೆದ್ದಾಗ ನಮಗೆ ಮತ್ತು ಇತರರಿಗೂ ಹಾನಿಯಾಗುವುದು. ಆ ಹೀನ ಸಂಸ್ಕಾರಗಳ ಹಾಲಾಹಲವನ್ನು ಸ್ವೀಕರಿಸಲು ಶಿವ ಬರಬೇಕಾಗುವುದು. ಹೇ ಶಿವ! ನಿನ್ನ ಅಮೃತ ಹಸ್ತವನ್ನು ಹೀನಸಂಸ್ಕಾರಗಳ ಮೊತ್ತದಮೇಲಿಡು. ಅವನ್ನು ಉತ್ತಮ ಸಂಸ್ಕಾರಗಳಾಗಿ ಪರಿವರ್ತಿಸು. ಜಗದ ಪಯಣದಲ್ಲಿ ಶಕ್ತಿ ನೀಡು ಹೋರಾಡುವುದಕ್ಕೆ. ಪ್ರಲೋಭನಗಳಿಂದ ಪಾರುಮಾಡೆಂದು ಬೇಡಿಕೊಂಡೆ. ಆದರೆ ಹಿಂದೂ ಪ್ರಾರ್ಥನೆ ಪೂರ್ಣವಾಗಬೇಕಾದರೆ ಎಲ್ಲ ಮಾನವಕೋಟಿಗೂ ಪ್ರಾರ್ಥಿಸಬೇಕು. ನಾವೆಲ್ಲ ಆತನ ಮಕ್ಕಳು. ಲೋಕಕುಟುಂಬಿ ಅವನು. ಪಾಪಿಗಳು, ಯತಿಗಳು, ಪಂಡಿತರು ಪಾಮರರು ಎಲ್ಲಾ ಅವನ ಒಂದು ದೊಡ್ಡ ಸಂಸಾರ. ಶಿವ ಎಲ್ಲರೂ ಮಂಗಳವನ್ನು ನೀಡಲಿ ಎಂಬ ಸಂಸ್ಕೃತ ಶ್ಲೋಕವೊಂದು ಜ್ಞಾಪಕಕ್ಕೆ ಬಂದಿತು.

**ಸರ್ವಸ್ತರತು ದುರ್ಗಾಣಿ ಸರ್ವೋ ಭದ್ರಾಣಿ ಪಶ್ಯತು**
**ಸರ್ವಸ್ಸದ್ಬುದ್ಧಿಮಾಪ್ನೋತು ಸರ್ವಃ ಸರ್ವತ್ರನಂದತು||**
**ಸರ್ವೇಭವಂತು ಸುಖಿನಃ ಸರ್ವೇಸಂತು ನಿರಾಮಯಾಃ**
**ಸರ್ವೇ ಭದ್ರಾಣಿ ಪಶ್ಯನ್ತು ಮಾ ಕಶ್ಚಿತ್ ದುಃಖಭಾಗ್ ಭವೇತ್||**
**ದುರ್ಜನಃ ಸಜ್ಜನೋ ಭೂಯಾತ್ ಸಜ್ಜನಃಶಾಂತಿಮಾಪ್ನುಯಾತ್**
**ಶಾಂತೋ ಮುಚ್ಯೇತ ಬಂಧೇಭ್ಯೋ ಮುಕ್ತಶ್ಚಾನ್ಯಾನ್ ವಿಮೋಚ**
**ಯೇತ್||**

ಅಷ್ಟು ಹೊತ್ತಿಗೆ ಒಂಭತ್ತು ಗಂಟೆಯಾಯಿತು. ಎಡಗಡೆಯಿಂದ ರವಿ ಗಗನವೇರಿ, ಕಣಿವೆಯ ಸುತ್ತಮುತ್ತಲಿರುವ ಹಿಮರಾಶಿಯ ಮೇಲೆ ತನ್ನ ಕಿರಣಚಯವನ್ನು ಬೀರುತ್ತಿದ್ದನು. ಶಿವನ ಮೊಗದ ಮೇಲಿನ ಮಂದಹಾಸ ಎಲ್ಲೆಡೆಯೂ ತಾಂಡವಾಡುತ್ತಿತ್ತು. ಇಂದು ಗುರು ಪೂರ್ಣಿಮೆ. ಶಿವ ಗುರು ಮಂಗಳದ ಮಳೆಕರೆಯಲಿ, ಎಲ್ಲರನ್ನು ಪುನೀತರನ್ನಾಗಿಮಾಡಲಿ, ಎಂಬ ಭಾವವನ್ನು ಮೆಲ್ಲುತ್ತ ಅಮರನಾಥ ಯಾತ್ರೆಯಿಂದ ಹಿಂತಿರುಗಿದೆವು.

ನನ್ನ ಸ್ಮೃತಿಚಿತ್ರಶಾಲೆಯಲ್ಲಿ ಅಮರನಾಥ ದರ್ಶನ ಚಿರ ನೂತನ ದೃಶ್ಯವಾಗಿರುವುದು.

## ನಮ್ಮ ಪ್ರಕಟನೆಗಳು

ಸಣ್ಣ ಕಥೆ, ಕಾದಂಬರಿಗಳು—

ಚಂದ್ರಗುಪ್ತವಿಜಯ (ಹೊಸಯ ಮುದ್ರಣ) ಎಚ್. ಎಂ. ಶಂಕರ ನಾರಾಯಣರಾವ್, ಎಂ. ಎ. ೧—೮—೦

ರೋಮಿಯೋ ಮತ್ತು ಜೂಲಿಯೆಟ್ " ಎಚ್. ಎಂ. ಶಂಕರ ನಾರಾಯಣರಾವ್, ಎಂ. ಎ. ೦—೧೨—೦

ನಾಟಕಗಳು—

ಪ್ರಸಾರ ನಾಟಕಗಳು ಎಚ್. ಕೆ. ರಂಗನಾಥ್ ಎಂ. ಎ. ೧—೨—೦

ಕಾಶೀಯಾತ್ರೆ ಕ್ಷೀರಸಾಗರ ೦—೧೨—೦

ಲಕ್ಷ್ಮೀ ಲಕ್ಚರ್ಸ್ " ೦—೧೦—೦

ಸಂಗ್ರಹಗಳು—

ಆದಿಪರ್ವ ಸಂಗ್ರಹ ೧—೦—೦

ಸಭಾಪರ್ವ ಸಂಗ್ರಹ ೬—೦—೦

ವಿರಾಟಪರ್ವ ಸಂಗ್ರಹ ೨—೦—೦

ಉದ್ಯೋಗಪರ್ವ ಸಂಗ್ರಹ (ಹೊಸಯ ಪರಿಷ್ಕೃತ ಮುದ್ರಣ) ೧—೮—೦

ಕವಿತೆಗಳು—

ಉಂಗುರ ಕೆ. ಎಸ್. ನರಸಿಂಹಸ್ವಾಮಿ ೧—೮—೦

ಕರ್ಣ ಎಂ. ಎಸ್. ಅನಂತಪದ್ಮನಾಭರಾವ್ ೧—೦—೦

ಸಾಹಿತ್ಯವಿಮರ್ಶೆ, ಪ್ರಬಂಧಗಳು ಇತ್ಯಾದಿ—

ಭಾಷಣಗಳು ಮತ್ತು ಲೇಖನಗಳು. ಪ್ರೊ. ಎ. ಆರ್. ಕೃಷ್ಣ ಶಾಸ್ತ್ರಿ ಎಂ. ಎ. ಭಾಗ—೧ ೩—೦—೦

ಭಾಗ—೨ ೪—೦—೦

ಭಾಸಕವಿ ೨—೮—೦

ರತ್ನಾಕರವರ್ಣಿ ತ. ಸು. ಶಾಮರಾಯ ಎಂ. ಎ. ೦—೮—೦

ರಾಘವಾಂಕ ಎಚ್. ಎಂ. ಶಂಕರನಾರಾಯಣರಾವ್

ಮೃಚ್ಛಕಟಿಕ " ೧—೦—೦

ಅಮರನಾಥ ಯಾತ್ರೆ ಸ್ವಾಮಿ ಸೋಮನಾಥಾನಂದ ೧—೦—೦

[illegible]